# ಎಸ್ ಬಿ ಎಮ್ ಒನ್  ಸಂಯುಕ್ತ ಬ್ರ್ಯಾಂಡ್ ನ ಕ್ರೆಡಿಟ್ ಕಾರ್ಡ್ ನ ನಿಯಮಗಳು ಮತ್ತು ಷರತ್ತುಗಳು

SBM bank

## ಕಾರ್ಡ ಸದಸ್ಯತ್ವದ ಕರಾರು

05.09.2025 ರಿಂದ ಜಾರಿಯಾಗುವ

ಈ ನಿಯಮಗಳು ಮತ್ತು ಷರತ್ತುಗಳು, **(ಎಸ್ ಬಿ ಎಮ್ ಒನ್'  ಸಂಯುಕ್ತ ಬ್ರ್ಯಾಂಡ್ ನ ಕ್ರೆಡಿಟ್ ಕಾರ್ಡ್)** ಒನ್ ಕನ್ಸ್ಯೂಮರ್ ಸರ್ವಿಸ್ ಪ್ರೈವೇಟ್ ಲಿ ಇವರ ಭಾಗೇದಾರಿಯಲ್ಲಿ  ಎಸ್ ಬಿ ಎಮ್ ಬ್ಯಾಂಕ್(ಇಂಡಿಯಾ) ಲಿ. ಕಡೆಯಿಂದ ನೀಡಲಾಗುವ ಕ್ರೆಡಿಟ್ ಕಾರ್ಡ್ ಗಳಿಗೆ ಅನ್ವಯಿಸುತ್ತವೆ. ಒನ್ ಕಾರ್ಡ್ ಅನ್ವಯವನ್ನು ಬಳಸಿ ಅಥವಾ 'ಸಬ್ಮಿಟ್' ಇಲ್ಲವೆ 'ಆಯ್ ಆಗ್ರಿ' ಅಥವಾ ಅಂತಹ ಯಾವುದೇ ಟ್ಯಾಬ್/ಆಯಕಾನ್ ಬಳಸಿ, ನಿಮ್ಮಯ ಕ್ರೆಡಿಟ್ ಕಾರ್ಡ್ ನ್ನು ಸಕ್ರೀಯಗೊಳಿಸಿದ್ದೇ ಆದರೆ,  ಆ ಕಾರ್ಡ ಧಾರಕರಿಂದ/ ಕಾರ್ಡ ಸದಸ್ಯನಿಂದ**(ನಿಮ್ಮಿಂದ)** ಈ ಕೆಳಗೆ ಸೂಚಿತ ನಿಯಮಗಳನ್ನು ಮತ್ತು ಷರತ್ತುಗಳನ್ನು ಒಪ್ಪಿಕೊಳ್ಳಲಾಗಿದೆ ಎಂಬುವುದು ಸೂಚಿತವಾಗುವುದು.
ಸಧ್ಯಕ್ಕೆ ಜಾರಿಯಲ್ಲಿರುವ ಷರತ್ತುಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ನವಿನತಮ ನಮೂನೆಯು ಸದಾ ವೆಬ್ ಸಾಯಿಟ್ ಮೇಲೆ ಉಪಲಬ್ಧವಿರುತ್ತದೆ.

1. **ವ್ಯಾಖ್ಯೆಗಳು ಮತ್ತು ಅರ್ಥ ವಿವರಣೆಗಳು**

1.1 **'ಅರ್ಜಿದಾರ'** ಎಂದರೆ ಎಸ್ ಬಿ ಎಮ್ ಒನ್'  ಸಂಯುಕ್ತ ಬ್ರ್ಯಾಂಡ್ ನ ಕ್ರೆಡಿಟ್ ಕಾರ್ಡ್ ಒಂದನ್ನು ಕೋರಿ ಅರ್ಜಿ ಸಲ್ಲಿಸಿದ ವ್ಯಕ್ತಿ.

1.2. **"ಅರ್ಜಿ/ ಆಪ್"** ಅಂದರೆ ಕಾರ್ಡ ಧಾರಕ ಎಸ್ ಬಿ ಎಮ್ ಒನ್'  ಸಂಯುಕ್ತ ಬ್ರ್ಯಾಂಡ್ ನ ಕ್ರೆಡಿಟ್ ಕಾರ್ಡಿನ ಎಲ್ಲ ಅಂಶಗಳನ್ನು ನಿಯಂತ್ರಿಸಬಲ್ಲ ಒನ್ ಕಾರ್ಡ್ ಆಪ್ ಆಗಿದೆ.

1.3. **"ಆಪ್ ಪಿನ"** ಅಥವಾ "ಅನ್ವಯಿಕೆ ಪಿನ್" ಎಂದರೆ ಕಾರ್ಡ ಧಾರಕನು ತನ್ನ ಒನ್ ಕಾರ್ಡ್ ಸಂಚಾರಿ ಅನ್ವಯಿಕೆಯನ್ನು ಪಾಸ್ ವರ್ಡ್ ರಕ್ಷಿತ ಮತ್ತು ಸುಕ್ಷಿತಗೊಳಿಸಿಕೊಳ್ಳಲು ರಚಿಸಿದ ಒಂದು ವೈಯಕ್ತಿಕ ಗುರುತಿನ ಸಂಖ್ಯೆ.

1.4. **"ಅಧಿಕೃತ ಡೀಲರ್"** ಕಾಲಕಾಲಕ್ಕೆ ತಿದ್ದುಪಡಿಗೊಳ್ಳುವ, 1999 ರ ವಿದೇಶಿ ವಿನಿಮಯದ ನಿರ್ವಹಣಾ ಕಾಯ್ದೆಯಡಿಯಲ್ಲಿ ವ್ಯಾಖ್ಯಾನಿಸಿದಂತಹ ಅಧಿಕೃತ ಡಿಲರ್.

1.5. **"ಬ್ಯಾಂಕ್"** ಎಂದರೆ ಎಸ್ ಬಿ ಎಮ್ ಬ್ಯಾಂಕ್ (ಇಂಡಿಯಾ) ಲಿಮಿಟೆಡ್, ಅಂದರೆ  'ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್' ನೀಡುತ್ತಿರುವ  ಎಸ್ ಬಿ ಎಮ್ ಬ್ಯಾಂಕ್ ಎಂದೇ ತಿಳಿಯತಕ್ಕದ್ದು

1.6. **"ಬಿಜಿನೆಸ್ ಡೆ"** ಅಂದರೆ  ಬ್ಯಾಂಕಿನ ಸಂಬಂಧಿತ ಶಾಖೆ ಸಾಮಾನ್ಯ ಲೇವಾದೇವಿಗಾಗಿ ವ್ಯವಹರಿಸುತ್ತಿರುವ ಆ ದಿನ.

1.7. **"ಕಾರ್ಡ್ ಸದಸ್ಯ/ಕಾರ್ಡ ಧಾರಕ"**  ಎಸ್ ಬಿ ಎಮ್ ನ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ ಒದಗಿಸಲ್ಪಟ್ಟ ಒಬ್ಬ ವ್ಯಕ್ತಿ

1.8. **"ಕ್ಯಾಶ ಲಿಮಿಟ್" "ನಗದು ಮಿತಿ"** ಎಂದರೆ ಎಸ್ ಬಿ ಎಮ್ ನ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್‌ನ್ನು ಒಂದು ಎ ಟಿ ಎಮ್ ನಲ್ಲಿ ಬಳಸಿ ಒಬ್ಬ ಕಾರ್ಡ್ ಧಾರಕ ಪಡೆಯಬಹುದಾದ ಗರಿಷ್ಠ ಮೊತ್ತ. ಈ ನಗದು ಮಿತಿ ಈ ಕಾರ್ಡ್ ಧಾರಕನಿಗೆ ಅನುಮತಿಸಲ್ಪಟ್ಟ ಸಾಲದ ಮಿತಿಯಾಗಿರುತ್ತದೆ.

1.9. **"ಚಾರ್ಜಗಳು" "ವೆಚ್ಚಗಳು"** ಅಂತೆಂದರೆ,ಇದರ ಖಂಡ 8 ರಲ್ಲಿ ನಮೂದಿಸಿದ ಅಥವಾ ಷರತ್ತುಗಳಲ್ಲಿ ಮತ್ತೆಲ್ಲಿಯಾದರೂ ನಮೂದಾದ ವೆಚ್ಚಗಳು ಎಂದರ್ಥ. ಈ ವೆಚ್ಚಗಳ ವಿವರಗಳು, ಕಾಲಕಾಲಕ್ಕೆ ಕಾರ್ಡ ಧಾರಕರಿಗೆ ವಿಶೇಷವಾಗಿ ತಿಳಿಸದೆ ಹೋಗಿದ್ದರೇ,   ಎಮ್ ಆಯ್ ಟಿ ಸಿ ಯಲ್ಲಿ ನಮೂದಿಸಿದ ಹಾಗೆಯೇ  ಇರುತ್ತದೆ.

1.10. **"ಸಾಲದ ಮಿತಿ/ ಖರೀದಿಯ ಮಿತಿ"**  ಇದರರ್ಥ ಎಸ್ ಬಿ ಎಮ್ ನ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್‌ಧಾರಕ ಆನ್ ಲಾಯಿನ್/ಆಫ್ ಲಾಯಿನ ಮೂಲಕ ವರ್ತಕರಿಂದ ಖರೀದಿ ವ್ಯವಹಾರದಲ್ಲಿ ಬಳಸಲು ಅಧಿಕೃತಾದ ಮೊತ್ತದ ಮಿತಿತಾಗಿರುತ್ತದೆ.

1.11. **"ಕಸ್ಟಮರ್ ಕೇರ್"** ಗ್ರಾಹಕ ಸೇವಾಕೇಂದ್ರ" ಎಂದರೆ ಈ ಬ್ಯಾಂಕಿನಿಂದ ಒದಗಿಸಲಾದ ಗ್ರಾಹಕರ ಸೇವೆ ಮತ್ತು ಬೆಂಬಲ ಪ್ರಕ್ರಿಯೆ ಎಂದರ್ಥ.

1.12. **"ಫಿಂಗರಪ್ರಿಂಟ್ ಲಾಕ್" ಬೆರಳಚ್ಚಿನ ಭದ್ರತೆ"** ಎಂದರೆ,ಒನ್ ಕಾರ್ಡ ಸಂಚಾರಿ ಅನ್ವಯಿಕೆಯನ್ನು ಕಾರ್ಡಧಾರಕನ ಬೆರಳಚ್ಚಿನ ಸಂಕೇತದಿಂದ ಭದ್ರಪಡಿಸುವ ಪ್ರಕ್ರಿಯೆಯಾಗಿದೆ.

1.13 **"ವರ್ತಕ ಸಂಸ್ಥೆ"** ಎಂದರೆ ಎಸ್ ಬಿ ಎಮ್ ನ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಮಾನ್ಯ ಮಾಡುವ ಎಲ್ಲ ಸ್ಟೋರ್ ಗಳು, ಅಂಗಡಿಗಳು, ರೆಸ್ಟೋರಾಂಟ್ಯಗಳು, ಹೊಟೇಲಗಳು, ವಿಮಾನ ಯಾನ ಕಂಪನಿಗಳು, ಎ ಟಿ ಎಮ್ ಗಳನ್ನೂ ಸೇರಿದಂತೆ ಹಣ ಪಡೆಯುವ ಮುಗ್ಗಟ್ಟುಗಳು, ಅಂಚೆ ಮೂಲಕ ಸರಕನ್ನು ಸರಬರಾಜು ಮಾಡುವ ಜಾಹಿರಾತುದಾರರು(ಬಿಡಿ ಮಾರಾಟಗಾರರಾಗಿರಬಹುದು,ವಿತರಕರಾಗಿರಬಹುದು ಅಥವಾ ಉತ್ಪಾದಕರಾಗಿರಬಹುದು) ಇದರಲ್ಲಿ ಸೇರಿರತಕ್ಕದ್ದು ಹಾಗೂ ಇದರಲ್ಲಿ ಆನ್ ಲಾಯಿನ ವ್ಯವಹಾರಗಳಲ್ಲಿ ಎಸ್ ಬಿ ಎಮ್ ನ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್‌ನ್ನು ಮಾನ್ಯ ಮಾಡುವ ಎಲ್ಲ ಸಂಸ್ಥೆಗಳೂ ಸೇರಿವೆ.

1.14. **"ವರ್ತಕ"** ಎಂದಾಗ ಒಂದು ವ್ಯಾಪಾರಿ ಸಂಸ್ಥೆಯನ್ನು ನಿರ್ವಹಿಸುವ ಅಥವಾ ಅದರ ಕಾರ್ಯಾಚರಣೆಯನ್ನು ನೋಡಿಕೊಳ್ಳುವ ಯಾವುದೇ ವ್ಯಕ್ತಿ ಅಥವಾ ಅವನ ಉತ್ತರಾಧಿಕಾರಿಗಳು ಮತ್ತು ಅವನಿಂದ ನಿಯುಕ್ತಿಗೊಂಡವರು ಎಂದಾಗುತ್ತದೆ.

1.15. **"ಕನಿಷ್ಠ ಬಾಕಿ ಮೊತ್ತ" "ಮಿನಿಮಮ್ ಅಮೌಂಟ್ ಡ್ಯೂ' "ಎಮ ಎ ಡಿ"** ಇದರರ್ಥ ಎಸ್ ಬಿ ಎಮ್ ನ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಖಾತೆಯನ್ನು ಜೀವಂತವಾಗಿರಿಸಿಕೊಳ್ಳಲು ಕಾರ್ಡಧಾರಕ ಸಂದಾಯ ಮಾಡಲೇ ಬೇಕಾದ , ಆ ಕಾರ್ಡಿನ ವಿವರಪಟ್ಟಿಯಲ್ಲಿ ನಮೂದಾಗಿ ಬರುವ ಮೊತ್ತ.

1.16. **"ಎಮ್ ಆಯ್ ಟಿ ಸಿ"** ಎಂದರೆ, (ಇದರ ಲಗತ್ತಿನಲ್ಲಿ ನಮೂದಿಸಿದಂತೆ) ಎಸ್ ಬಿ ಎಮ್ ನ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ ಒದಗಿಸುವ ವಿವಿಧ ಸೇವೆಗಳಿಗೆ ಅನ್ವಯವಾಗುವ ವೆಚ್ಚಗಳ ಅನುಸೂಚಿಯ ಜೊತೆಗೆ ಅತ್ಯಂತ ಮಹತ್ವದ ನಿಯಮಗಳನ್ನು ಮತ್ತು ಷರತ್ತುಗಳನ್ನು ಹೊಂದಿದಂತಹ ದಸ್ತಾವೇಜು ಇದಾಗಿರುತ್ತದೆ. ಈ ಶುಲ್ಕಗಳಲ್ಲಿಯ ಬದಲಾವಣೆಗಳು ಸಂಪೂರ್ಣ ಬ್ಯಾಂಕಿನ ವಿವೇಚನೆಗೆ ಬಿಟ್ಟ ವಿಷಯವಾಗಿರುತ್ತದೆ. ಆದಾಗ್ಯೂ, ಶುಲ್ಕದಲ್ಲಾಗುವ ಇಂತಹ ಬದಲಾವಣೆಗಳನ್ನು ಕಾರ್ಡಧಾರಕರಿಗೆ 30 ದಿನಗಳ ಪೂವಭಾವಿ ನೋಟೀಸ್ ಮೂಲಕ ಗಮನಕ್ಕೆ ತರುತ್ತ, ಅಂದಿನಿಂದ ಮುಂದಕ್ಕೆ ಅನ್ವಯಿಕೆಯಾಗುವಂತೆಯೇ ಜಾರಿಗೊಳಿಸಬಹುದು.

1.17. **"ಎಸ್ ಬಿ ಎಮ್ ನ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ"** ಎಂದರೆ, ಒನ್ ಕನ್ಸೂಮರ್ ಸರ್ವಿಸ್ ಪ್ರೈವೇಟ್ ಲಿ ಇವರ ಭಾಗೆದಾರಿಯಲ್ಲಿ ಎಸ್ ಬಿ ಎಮ್ ಬ್ಯಾಂಕ್(ಇಂಡಿಯಾ) ಲಿ. ಇವರಿಂದ ನೀಡಲ್ಪಟ್ಟಿದ್ದು, ಎಸ್ ಬಿ ಎಮ್ ಒನ್' ಸಂಯುಕ್ತ ಬ್ರಾಂಡ್ ನ ಕ್ರೆಡಿಟ್ ಕಾರ್ಡ್‌ನಿಂದ ಅಂಶಿಕವಾಗಿ ಭದ್ರತೆಯನ್ನು ಹೊಂದಿದ್ದಿರಬಹುದು ಅಥವಾ ಇದೊಂದು ಭದ್ರತೆ ಇಲ್ಲದ ಎಸ್ ಬಿ ಎಮ್ ಒನ್' ಸಂಯುಕ್ತ ಬ್ರಾಂಡ್ ನ ಕ್ರೆಡಿಟ್ ಕಾರ್ಡ್ ಆಗಿರಬಹುದು.

1.18 **"ಎಸ್ ಬಿ ಎಮ್ ನ ಒಂದು ಸಂಯುಕ್ತ ಬ್ರಾಂಡೆಡ್ ಖಾತೆ"** ಎಂದರೆ, ಎಸ್ ಬಿ ಎಮ್ ಒನ್' ಸಂಯುಕ್ತ ಬ್ರಾಂಡ್ ನ ಕ್ರೆಡಿಟ್ ಕಾರ್ಡ್ ಧಾರಕನ ಹೆಸರಲ್ಲಿ, ಅದರ ಬಳಕೆಗಾಗಿ ವಿಧಿಸಲಾದ ನಿಯಮಗಳ ಮತ್ತು ಷರತ್ತುಗಳ ಅನುಗುಣವಾಗಿ ತೆರೆಯಲಾದ ಒಂದು ಖಾತೆಯಾಗಿರುತ್ತದೆ.

1.19. **" ಒನ್‌ಕಾರ್ಡ ಪಿನ್"** ಎಂದರೆ, ಎಸ್ ಬಿ ಎಮ್ ಒನ್' ಸಂಯುಕ್ತ ಬ್ರಾಂಡ್ ನ ಕ್ರೆಡಿಟ್ ಕಾರ್ಡಿನ ಸಂಭಾವ್ಯ ದುರ್ಬಳಕೆಯನ್ನು ತಪ್ಪಿಸಲು ಒಂದು ಸುರಕ್ಷತೆಯ ಉಪಾಯವಾಗಿ ಒನ್ ಕಾರ್ಡ್ ಸಂಚಾರಿ ಆಪ್ ನ್ನು ಬಳಸಿಕೊಳ್ಳುತ್ತ ಕಾರ್ಡಧಾರಕನು ರಚಿಸಿದ ಒಂದು ವೈಯಕ್ತಿಕ ಸಾಂಕೇತಿಕ ಸಂಖ್ಯೆ ಇದು.

1.20. **"ಸಂದಾಯದ ಕೊನೆ ದಿನ"** ಎಂದರೆ,ಎಸ್ ಬಿ ಎಮ್ ಒನ್' ಸಂಯುಕ್ತ ಬ್ರಾಂಡ್ ನ ಕ್ರೆಡಿಟ್ ಕಾರ್ಡಿನಿಂದ ಮಾಡಿದ ಖರ್ಚನ್ನು ಕುರಿತು ಸಂದಾಯಿಸಬೇಕಾದ ಕೊನೆ ದಿನ.

1.21. **"ಪ್ರಾಥಮಿಕ ಕಾರ್ಡ ಸದಸ್ಯ"** ಎಂದರೆ, ಆ ವ್ಯಕ್ತಿ ಯಾರ ಹೆಸರಲ್ಲಿ ಈ ಕಾರ್ಡಿನ ಖಾತೆ ತೆರೆಯ್ಪಟ್ಟಿದಿಯೋ ಮತ್ತು ಯಾರಿಗೆ ಈ ಎಸ್ ಬಿ ಎಮ್ ಒನ್' ಸಂಯುಕ್ತ ಬ್ರಾಂಡ್ ನ ಕ್ರೆಡಿಟ್ ಕಾರ್ಡ್ ನೀಡಲ್ಪಟ್ಟಿದೆಯೋ ಆ ವ್ಯಕ್ತಿ ಎಂದರರ್ಥ.

1.22. **"ಆರ್ ಬಿ ಆಯ್"** ಎಂದರೆ ಭಾರತದ ರಿಜರ್ವ ಬ್ಯಾಂಕ್ ಎಂದರ್ಥ.

1.23. **"ಸ್ಟೇಟಮೆಂಟ" "ವಿವರಣ ಪತ್ರ"** ಅಂದರೆ, ಎಸ್ ಬಿ ಎಮ್ ಒನ್' ಸಂಯುಕ್ತ ಬ್ರಾಂಡ್ ನ ಕ್ರೆಡಿಟ್ ಕಾರ್ಡಿನ ಮೇಲೇ ವಿಧಿಸಲಾದ ಶುಲ್ಕ ಮತ್ತು ಬಾಕಿ ಮೊತ್ತ ಹಾಗೂ ಅದನ್ನು ಭರಿಸಲು ಇರುವ ಕೊನೆಯ ದಿನಾಂಕದೊಂದಿಗೆ ಈ ಕಾರ್ಡ ಧಾರಕನಿಗೆ ರವಾನಿಸಲಾದ ಆ ಕಾರ್ಡಿನ ಖಾತೆಯ ತಿಂಗಳ ವಿವರಣ ಪತ್ರ ಎಂದರರ್ಥ.

1.24 **"ಸಪ್ಲಿಮೆಂಟರಿ/ಆಡ್ ಆನ್ ಕಾರ್ಡ್ ಧಾರಕ"** ಎಂದರೆ ಪ್ರಾಥಮಿಕ ಕಾರ್ಡ್ ಧಾರಕನ ಕುಟುಂಬದ ವ್ಯಕ್ತಿ ಯಾರು ಆ ಸಂಬಂಧದ ಆಧಾರದ ಮೇಲೆ ತಾನೂ ಆ ಕಾರ್ಡ್ ಧಾರಕನಾಗಿರುತ್ತಾನೆ.

1.25. **"ಟೋಟಲ್ ಅಮೌಂಟ್ ಡ್ಯೂ" "ಟಿ ಎ ಡಿ"  "ಒಟ್ಟು ಬಾಕಿ ಮೊತ್ತ"** ಅಂದರೆ ವಿವರಣ ಪಟ್ಟಿಯಲ್ಲಿ ನಮೂದಾದ  ಸಂದಾಯಿಸಲು ಬಾಕಿ ಉಳಿದ ಒಟ್ಟು ಮೊತ್ತ.

1.26. **"ವ್ಯವಹಾರಕ್ಕೆ ಸಲಹೆ"** ಎಂದರೆ, ಒಬ್ಬ ಕಾರ್ಡ್ ಧಾರಕ ವ್ಯಕ್ತವಾಗಿ  ಅಥವಾ ಅವ್ಯಕ್ತವಾಗಿ ಬ್ಯಾಂಕಿಗೆ ಮತ್ತು/ಅಥವಾ ಆಪ್ ನ ಮುಖಾಂತರ ಗ್ರಾಹಕರ ಸೇವಾ ಕೇಂದ್ರಕ್ಕೆ  ಆ ವ್ಯವಹಾರವನ್ನು ನೆರವೇರಿಸಲು ನೀಡಿದ ಸೂಚನೆ.

1.27 **"ವರ್ಚುವಲ್ ಕ್ರೇಡಿಟ್ ಕಾರ್ಡ್"** ಎಂದರೆ ಎಸ್ ಬಿ ಎಮ್ ಒನ್  ಸಂಯುಕ್ತ ಬ್ರಾಂಡ್ ನ ಕ್ರೆಡಿಟ್ ಕಾರ್ಡನ್ನು ಆನ್ ಲಾಯಿನ ಅಥ ವಾ ಆಪ್ ಆಧಾರಿತ ವ್ಯವಹಾರಗಳಲ್ಲಿ ಕಾಲ್ಪನಿಕ ಪ್ರದರ್ಶನ.

1.28. **"ವೆಬ್ ಸಾಯಿಟ್"** ಎಂದರೆ URL https://www.getonecard.app  ನಲ್ಲಿ ಒನ್ ಕಾರ್ಡ ವೆಬಸಾಯಿಟ್ ಎಂದು ಗ್ರಹಿಸತಕ್ಕದ್ದು.

**2. ಕಾರ್ಡ್ ಸೇವೆ**

ಎಸ್ ಬಿ ಎಮ್ ಸಂಯುಕ್ತ ಕ್ರೇಡಿಟ್ ಕಾರ್ಡ ಎನ್ನುವುದು ಬ್ಯಾಂಕಿನ ಸ್ವತ್ತು ಆಗಿರುತ್ತದೆ. ಬ್ಯಾಂಕ್ ಅಥವಾ ಬ್ಯಾಕ್ ನಿಂದ ಅಧಿಕೃತಗೊಳಿಸಲ್ಪಟ್ಟ ವ್ಯಕ್ತಿಯು ಈ ಕೆಳಗಿವುಗಳಿಗೆ ಅಧಿಕೃತನಾಗಿರುತ್ತಾನೆ:

2.1 ಸಾಲದ ವಿಸ್ತೃತ ವರದಿಯನ್ನು ಮತ್ತು ಅವಶ್ಯಕವೆನಿಸಿದ ಮತ್ಯಾವುದಾದರೂ ವರದಿಯನ್ನು ಪಡೆದುಕೊಂಡು ಸಾಲ ಮರು ಪಾವತಿಸುವ ಸಾಮರ್ಥ್ಯವನ್ನು  ಖಚಿತಪಡಿಸಿಕೊಳ್ಳುತ್ತಾನೆ;ಮತ್ತು

2.2  ತನ್ನ ಸಂಪೂರ್ಣ ವಿವೇಚನಾ ಅಧಿಕಾರವನ್ನು ಬಳಸಿ ಎಸ್ ಬಿ ಎಮ್ ಒನ್  ಸಂಯುಕ್ತ ಕ್ರೇಡಿಟ್ ಕಾರ್ಡನ್ನು ನಿಮಗೆ ಕೊಡಲು ನಿರಾಕರಿಸಬಹುದು. ಎಸ್ ಬಿ ಎಮ್ ಒನ್  ಸಂಯುಕ್ತ ಕ್ರೇಡಿಟ್ ಕಾರ್ಡ ವರ್ಗಾಯಿಸಲು ಬಾರದ್ದಾಗಿದೆ, ಮತ್ತು ಅದರ ಬಳಕೆಯು ಇಲ್ಲಿ ನೀಡಲಾದ ಮತ್ತು ಕಾಲಕಾಲಕ್ಕೆ ಬ್ಯಾಂಕ ವಿಧಿಸುವ ಹೆಚ್ಚಿನ  ಷರತ್ತುಗಳಿಗೆ ಒಳಪಟ್ಟಿದೆ.

2.3. ಆ ಕಾರ್ಡು ಕಾಯ್ದಿರಿಸಿದ ದಿನದಿಂದ ಅದು ಜಾರಿಯಾಗುವರೆಗೆ ಅದರ ಸಾಲದ ಸೀಮೆಯನ್ನು ಬದಲಾಯಿಸುವುದು.

2.4 ಕೆ ವಾಯ್ ಸಿ ಪದ್ಧತಿಗಳನ್ನು ಮತ್ತು ಇತರ ಮಾರ್ಗದರ್ಶಿಕೆಗಳನ್ನು ಪೂರೈಸಿದ ಷರತ್ತಿಗೆ ಒಳಪಟ್ಟು ಕಾರ್ಡನ್ನು ಸಕ್ರೀಯಗೊಳಿಸಲು ಮುಂದಾಗಿರಿ.

ಎಸ್ ಬಿ ಎಮ್ ಒನ್  ಸಂಯುಕ್ತ ಕ್ರೇಡಿಟ್ ಕಾರ್ಡ ನಿಮ್ಮ ಕೈ ಸೇರಿದ ತಕ್ಷಣ ದಯವಿಟ್ಟು ಅದರ ಹಿಂದಿನ ಬದಿಗೆ ಹಸ್ತಾಕ್ಷರ ಮಾಡಿರಿ.  'ಒನ್ ಕಾರ್ಡ್ ಅನ್ವಯಿಕೆ ಮತ್ತು ಗ್ರಾಹಕರ ಸೇವಾ ಸೌಲಭ್ಯಗಳು ಎಲ್ಲ ಕಾರ್ಡ್ ಧಾರಕರಿಗೆ ಉಪಲಬ್ಧವಿವೆ.

ಸಾಲದ ಮಿತಿಯನ್ನು ಹೆಚ್ಚಿಸಿಕೊಳ್ಳುವುದು,ವ್ಯವಹಾರಗಳನ್ನು ಕುರಿತಾಗಿ ವಿಚಾರಣೆ ಮಾಡುವುದು,ಒಟ್ಟು ಬಾಕಿ ಮೊತ್ತ,ವಿವರಣಾ ಪಟ್ಟಿಯ ವಿವರಗಳು,ಸಂದಾಯದ ಕೊನೆಯ ದಿನಾಂಕ ಇತ್ಯಾದಿ ಈ ಮೇಲಿನವುಗಳನ್ನೂ ಒಳಗೊಂಡು, ಅದರೆ ಅದಕ್ಕೇ ಸೀಮಿತವಾಗಿರದ ವಿವರಗಳನ್ನು ಆಪ್ ಮೂಲಕ /ಗ್ರಾಹಕರ ಸೇವಾ  ಕೇಂದ್ರಗಳ ಮೂಲಕ ಪಡೆಯಲಿಚ್ಛಿಸುವವ ಕಾರ್ಡ್ ಸದಸ್ಯರು , ಸದಾ ಕಾಲಕ್ಕೂ ಬ್ಯಾಂಕ್ ತನ್ನ ಸೇವೆ/ಸೌಲಭ್ಯ ಮತ್ತು ಆ ಸೌಲಭ್ಯಗಳನ್ನು ಅನುಭವಿಸುವ ಮಾರ್ಗ/ ಕಾಲಕಾಲಕ್ಕೆ ತಿಳಿಪಡಿಸುವ ಇತರ ಸೇವೆಗಳನ್ನು ಕುರಿತಾಗಿ ವಿಧಿಸುವ ಷರತ್ತುಗಳಿಗೆ ಒಳಪಟ್ಟುಕೊಂಡೇ ಇರತಕ್ಕದ್ದು.

**3. ಒನ್ ಕಾರ್ಡ್ ಸಂಚಾರಿ ಅನ್ವಯಿಕೆ**

ನೀವು ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಸಕ್ಷಮವಾದ  ಸಂಚಾರಿ ಆಪ್ ನ ಮೂಲಕ ನಿಯಂತ್ರಿಸಬಲ್ಲಿರಿ. ಅದರ ಕೆಲವು ಅಂಶಗಳೆಂದರೆ:

3.1 ನಿಮ್ಮ ಅನ್ವಯಿಕೆಗೆ ಬಳಸಲಾಗುವ ಪಿನ್ ಸಂಖ್ಯೆಯನ್ನು ನಿರ್ಧರಿಸಿಬಹುದು

3.2 ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಸಕ್ರೀಯಗೊಳಿಸುವುದು

3.3 ನಿಮ್ಮ ಬಿಲ್ಲಗಳ ಹಣ ಸಂದಾಯವನ್ನು ಈ ಕ್ರೆಡಿಟ್ ಕಾರ್ಡ್ ಗಳ ಮೂಲಕ ಮಾಡುವುದು

3.4. ನಿಮ್ಮ ಕಾಲ್ಪನಿಕ ಕ್ರೆಡಿಟ್ ಕಾರ್ಡ್ ನ್ನು ನಿರ್ವಹಿಸುವುದು

3.5 ನಿಮ್ಮ ಕ್ರೆಡಿಟ್ ಕಾರ್ಡ್ ಮತ್ತು ಹಣ ಹಿಂತೆಗೆಯುವ ಮಿತಿಯನ್ನು ನಿಯಂತ್ರಿಸುವುದು

3.6. ದೇಶ ಮತ್ತು ವಿದೇಶಗಳಲ್ಲಿಯ ಬಳಕೆಯನ್ನು ಆನ್ ಲಾಯಿನ್ ಮೂಲಕ ಸಕ್ರೀಯಗೊಳಿಸಿಕೊಳ್ಳುವುದು

3.7 (ವಿಕ್ರಯದ ಸ್ಥಳದಲ್ಲಿ ಮತ್ತು ಎ ಟಿ ಎಮ್ ಗಳಲ್ಲಿ) ಬಳಸಲು ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಪಿನ್ ನನ್ನು ನಿಗದಿಪಡಿಸುವುದು

3.8. ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಕುರಿತಾಗಿ ಯಾವುದೇ ವಿಷಯಕ್ಕೆ ಸಂಬಂಧಿಸಿದ ಸೇವಾ ವಿಚಾರಣೆ ಮತ್ತು ವಿವಾದ ಕುರಿತಂತೆ ಪ್ರಶ್ನೆ ಮಾಡಬಹುದು.

**4. ಕಾಲ್ಪನಿಕ ಕ್ರೆಡಿಟ್ ಕಾರ್ಡ್** 💳📲

4.1. ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಭೌತಿಕ ಪ್ರತಿಯ ಜೊತೆಗೆ, ಅದರ ಅನ್ವಯಿಕೆ ಅಂದರೆ ಆಪ್ ಮೇಲೆ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಕಾಲ್ಪನಿಕ ಪ್ರತಿಯನ್ನೂ ತಾವು ಈ ಪ್ರಕ್ರಿಯೆಯ ಪ್ರವೇಶದ ಭಾಗವಾಗಿ ಪಡೆಯುವಿರಿ.

4.2. ಈ ಕಾಲ್ಪನಿಕ ಕಾರ್ಡ ಸಹಿತ ವಿಸಾ/ರೂಪೆ ಯಿಂದ ಚಾಲಿತ ಕ್ರೆಡಿಟ್ ಕಾರ್ಡ್ ಆಗಿದ್ದು,ಎಲ್ಲ ಆನಲಾಯಿನ್ ಅಥವಾ ಸಂಚಾರಿ ಆಫ್ ಆಧಾರಿತ ವ್ಯವಹಾರ ಅಥವಾ ಖರೀದಿಗೆ ತಾವು ಬಳಸಬಹುದುದಾಗಿದೆ. ಅದರ ಭದ್ರತಾ ನಿಯತಾಂಕಗಳನ್ನು ಔದ್ಯೋಗಿಕ ಮಾನದಂಡಕ್ಕೆ ಸರಿದೂಗಿಸಲಾಗಿದೆ.

**5. ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಉಪಯೋಗ** 🛒

5.1. ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಒಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆಯನ್ನು ಪಡೆದ ಕ್ರೆಡಿಟ್ ಕಾರ್ಡ್ ಆಗಿದೆ ಮತ್ತು ಈ ಕೆಳಗಿನ ಖಂಡ್ 5.12 ದಲ್ಲಿ ಪ್ರಾವಧಾನಿಸಿದ್ದನ್ನು ಹೊರತು ಪಡಿಸಿ ವಿಶ್ವದಾದ್ಯಂತ ಮಾನ್ಯತೆಯನ್ನು ಪಡೆದುದಾಗಿದೆ. ಯಾವೆಲ್ಲ ವರ್ತಕ ಸಂಸ್ಥೆಗಳಲ್ಲಿ ವಿಸಾ ಕಾರ್ಡ್ ನ್ನು ಒಪ್ಪಿಕೊಳ್ಳಲಾಗುತ್ತದೆಯೋ, ಅಲ್ಲೆಲ್ಲ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನೂ ಒಪ್ಪಿಕೊಳ್ಳಲಾಗುತ್ತದೆ. ದಯವಿಟ್ಟು ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ನೀವು ನಿಮ್ಮ ಎಲ್ಲ ನಂಬಲರ್ಹ ವೈಯಕ್ತಿಕ ಮತ್ತು ಅಧಿಕೃತ ಉದ್ದೇಶಗಳಿಗಳಿಗಾಗಿ ಮಾತ್ರ ಬಳಸಿರಿ.

5.2. ಆದಾಗ್ಯೂ, ( ಈ ಬ್ಯಾಂಕಿನಿಂದ ವಿಶೆಷವಾಗಿ ಅಧಿಕೃತಗೊಳಿಸಲಾದ) ಬ್ಯಾಂಕುಗಳು ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಬಳಕೆಯನ್ನು ಕೆಲವು ನಿಯಂತ್ರಕ ಕಾರಣಗಳಿಂದ ಆದರೆ ಅದಕ್ಕೆ ಸೀಮಿತಗೊಳ್ಳದ ಕಾರಣಗಳಿಗಾಗಿ, ತಾಂತ್ರಿಕ ಅಡಚಣೆಗಳಿಗಾಗಿ ಮತ್ತು ಕೆಲ ಅನಿರೀಕ್ಷಿತ ಸಂದರ್ಭಗಳಲ್ಲಿ ನಿರಾಕರಿಸುವ ಹಕ್ಕನ್ನು ಕಾಯ್ದಿಟ್ಟುಕೊಂಡಿರುತ್ತದೆ.

5.3. ಯಾವುದೇ ಕಾರಣಗಳಿಂದ ಒಂದು ವರ್ತಕ ಸಂಸ್ಥೆಯು ತನ್ನ ಕಡೆಯಿಂದ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಬಳಕೆಯನ್ನು ನಿರಾಕರಿಸುವ ಹಕ್ಕನ್ನು ಹೊಂದಿರುತ್ತದೆ.

5.4. ವರ್ತಕ ಸಂಸ್ಥೆಗಳಿಂದ ನೀವು ಪಡೆದಂತಹ ಸೇವೆಗಳಿಗಾಗಿ, ಅವರಿಂದ ವಿಧಿಸಲಾದ ಎಲ್ಲ ಶುಲ್ಕಗಳನ್ನು ಆಯಾ ವರ್ತಕ ಸಂಸ್ಥೆಗಳಿಂದಲೇ ಬಗೆಹರಿಸಿಕೊಳ್ಳಬೇಕೇ ಹೊರತು, ಈ ಬ್ಯಾಂಕ್ ಅಂತಹ ಯಾವುದೇ ತರಹದ ವ್ಯವಹಾರಗಳಿಗಾಗಲಿ, ಪಡೆದ ಸೇವೆಯ

ಗುಣಮಟ್ಟಕ್ಕಾಗಲಿ ಅಥವಾ ಖರೀದಿಸಿದ ವಸ್ತುಗಳಿಗಾಗಲಿ ಜವಾಬ್ದಾರವಾಗುವುದೇ ಇಲ್ಲ. ವರ್ತಕ ಸಂಸ್ಥೆಗಳಲ್ಲಿ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಬಳಕೆಯನ್ನು ಮಾಡಿದಾಗ, ನೀವು ಆ ವ್ಯವಹಾರದ ಅಥವಾ ಖರೀದಿಯ ಒಂದು ಪ್ರತಿಯನ್ನು ಹೊಂದಲು ಶಿಫಾರಸ್ಸು ಮಾಡಲಾಗಿದೆ.

5.5. ಒಂದು ಸ್ಟೇಟಮೆಂಟ್ ತಯಾರಾದ 30 ದಿನಗಳೊಳಗಾಗಿ ಅದರಲ್ಲಿಯ ಕುಂದುಕೊರತೆಗಳನ್ನು ನಮ್ಮ ಗಮನಕ್ಕೆ ನೀವು ತರದೇ ಹೋದರೆ, ಆ ಸ್ಟೇಟಮೆಂಟ್ ನಲ್ಲಿರುವ ಎಲ್ಲ ಅಂಶಗಳು ಸರಿಯಾಗಿವೆ ಎಂದೇ ಭಾವಿಸಲಾಗುವುದು. ಗಮನಕ್ಕೆ ತರಲಾದ ಬಿಲ್ ಮಾಡುವ ವಿಷಯಕ್ಕೆ ಕುರಿತಾದ ವಿವಾದಗಳ/ಕುಂದುಕೊರತೆಗಳ ಬಗ್ಗೆ ನಾವು ತನಿಖೆ ಕೈಗೊಳ್ಳುತ್ತೇವೆ ಮತ್ತು ಅಂತಹ ವ್ಯವಹಾರದ ಜವಾಬ್ದಾರಿಯನ್ನು ನಿರ್ಧರಿಸುತ್ತೇವೆ. ಕೆಲ ವಿವಾದಗಳಲ್ಲಿ, ತನಿಖೆ ಜಾರಿಯಲ್ಲಿದ್ದ ಸಮಯಕ್ಕಾಗಿ ನಾವು ತಾತ್ಕಾಲಿಕ ಸಾಲವನ್ನು ಒದಗಿಸಬಹುದು ಆದರೆ ತನಿಖೆಯ ಪರಿಣಾಮವನ್ನು ಆಧರಿಸಿ ಅನ್ವಯಿಸುವ ಶುಲ್ಕದೊಂದಿಗೆ ಅದನ್ನು ಮರಳಿ ಪಡೆಯಲೂ ಬಹುದು. ಫಿ, ಶುಲ್ಕ ಅಥವಾ ಬಡ್ಡಿಯ ಮೇಲೆ ವಿಧಿಸಲಾಗುವ ಜಿ ಎಸ್ ಟಿ ಯನ್ನು ಕುರಿತಂತೆ ಉದ್ಭವಿಸಿದ ಯಾವುದೇ ವಿವಾದದಲ್ಲಿ, ಭರಿಸಲಾದ ಜಿ ಎಸ್ ಟಿ ಯನ್ನು ಮರಳಿಸಲಾಗುವುದಿಲ್ಲ.

5.6. ನೀವು ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡನ್ನು:

5.6.1. ನಿಮ್ಮ ಸಾಲದ ಸೀಮೆಯನ್ನು ಕುರಿತು ನೀಮಗೆ ನೀಡಿದ ತಿಳುವಳಿಕೆಯನ್ನು ಮೀರದಂತ;

5.6.2. ಮತ್ತು ಆ ಕಾರ್ಡ್ ಮೇಲೆ ನಮೂದಿಸಲಾದ ಅದರ ಮುಕ್ತಾಯದ ದಿನಾಂಕ ಮತ್ತು ತಿಂಗಳಿನ ಸಮಯ ದಾಟುವ ಪೂರ್ವದಲ್ಲಿ ಬಳಸಬಲ್ಲಿರಿ.

5.7. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡನ್ನು ಬಳಸುವ ನಿಮ್ಮ ಅಧಿಕಾರವನ್ನು ತಕ್ಷಣಕ್ಕೆ ಕೊನೆಗಾಣಿಸಲಾಗುತ್ತದೆ:

5.7.1.ಒಂದು ವೇಳೆ ಈ ಕೆಳಗೆ ನೀಡಲಾದ ಖಂಡ 7 ರ ಅನುಸಾರವಾಗಿ;

5.7.2. ಅದು ಕಳೆದು ಹೋದ ಸಂದರ್ಭದಲ್ಲಿ/ಅದರ ದುರೂಪಯೋಗದ ಅಥವಾ ಕಳುವಾದ ಸಂದರ್ಭದಲ್ಲಿ.

5.7.3. ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಬಳಕೆಗೆ ಸಂಬಂಧಿಸಿದಂತೆ, ಸಧ್ಯದ ಕಾರ್ಡನ್ನು ನವೀಕರಿಸುವ ಪ್ರಕ್ರಿಯೆಯಲ್ಲಿ, ನವೀಕರಿಸಿದ ಕಾರ್ಡ್ ನ್ನು ರವಾನಿಸುವ ಪೂರ್ವದಲ್ಲಿ ಆ ಕಾರ್ಡ್ ಧಾರಕನಿಗೆ ಅದನ್ನು ನಿರಾಕರಿಸುವ ಅವಕಾಶವನ್ನು ನೀಡಲಾಗುತ್ತದೆ.

5.8. ಒಂದು ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಸಾಲದ ಮಿತಿ ಅಥವಾ ನಗದು ಮಿತಿಯ ನಿರ್ಧರಿಸುವಿಕೆಯನ್ನು ಯಾವುದೇ ಸಮಯಕ್ಕೆ ಬ್ಯಾಂಕಿನ ಸಂಪೂರ್ಣ ವಿವಚನೆಯನ್ನು ಆಧರಿಸಿಯೇ ನಿರ್ಧರಿಸಲಾಗುತ್ತದೆ.

5.9. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಜೊತೆ ನೀವು ಸದಾಕಾಲ ಸದ್ಭಾವನೆಯಿಂದಲೇ ವ್ಯವಹರಿಸತಕ್ಕದ್ದು.

5.10. ನೇಪಾಳ ಮತ್ತು ಭೂತಾನ ದೇಶಗಳ ವರ್ತಕ ಸಂಸ್ಥೆಗಳನ್ನು ಹೊರತು ಪಡಿಸಿ, ವಿಶ್ವದಾದ್ಯಂತದ ವಿದೇಶಿ ವಿನಿಮಯದ ಸಂದಾಯದಲ್ಲಿ ನಿಮಗೆ ಒದಗಿಸಲಾದ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ವೇದ್ಯವಾಗಿರುತ್ತದೆ. ನೇಪಾಳ ಮತ್ತು ಭೂತಾನ ದೇಶಗಳ ವಿದೇಶಿ ವಿನಿಮಯದಲ್ಲಿ ಈ ಕಾರ್ಡಿನ ಪ್ರಯೋಗವು 'ಫೆಮಾ' ಅಂದರೆ 'ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ' ಅಥವಾ ಅದಕ್ಕೆ ಅನುರೂಪವಾದ ಇನ್ನಿತರ ಕಾಯ್ದೆಯ ಉಲ್ಲಂಘನೆಯಾಗುವುದು. ಇದಕ್ಕೆ ಸಂಬಂಧಿಸಿದ ಉಲ್ಲಂಘನೆ ಎಂದೆಣಿಸಲಾಗುವ, ಈ ಷರತ್ತುಗಳನ್ನು ಮೀರಿದ ಇದರ ಚ್ಯುತಿಪೂರ್ವಕ ಬಳಕೆಯಿಂದ ಬ್ಯಾಂಕಿಗೆ/ಒನ್ ಕಂಜುಮರ್ ಗೆ ಸಂಭವಿಸುವ ಯಾವುದೇ ನಷ್ಟ, ಕ್ಷತಿ,ಬಡ್ಡಿ, ಪರಿವರ್ತನೆ, ಯಾವುದೇ ರೀತಿಯ ಹಣಕಾಸಿನ ಶುಲ್ಕ ಬ್ಯಾಂಕಿಗೆ ಮತ್ತು ಒನ್ ಕಂಜುಮರಗೆ ಭರಿಸಿಕೊಡುವುದಕ್ಕೆ ಮತ್ತು ಅದರ ಭರವಸೆಯನ್ನು ನೀಡುವ ಸಂಪೂರ್ಣ ಜವಾಬ್ದಾರಿಯನ್ನು ನೀವು ಹೊತ್ತಿರುತ್ತೀರಿ.

5.11. 2020 , ಜನವರಿ 15 ರ ಆರ್ ಬಿ ಆಯ್ ಹೊರಡಿಸಿದ ಸರಕ್ಯೂಲರ್ ಅನ್ವಯ, ನಿಮ್ಮ ಕಾರ್ಡ್‌ನ್ನು ಜಾರಿಗೊಳಿಸುವಾಗ ಅದು ಕೇವಲ ಭಾರತದಲ್ಲಿ ಸ್ಥಿತ ಸಂಪರ್ಕ ಆಧಾರಿತ ಮಾರಾಟ ಕೇಂದ್ರ ಮತ್ತು ಎ ಟಿ ಎಮ್ ಗಳಲ್ಲಿ ಉಪಯೋಗಿಸಲು ಬರುವ ಹಾಗೆ ಮಾತ್ರ ಸಕ್ರಿಯಗೊಳಿಸಲ್ಪಡತಕ್ಕದ್ದು. (ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ) ಆನ್ ಲಾಯಿನ ವ್ಯವಹಾರಗಳಿಗೆ,ಅಂತರಾಷ್ಟ್ರೀಯ ಮತ್ತು ಸಂಪರ್ಕ ರಹಿತ ವ್ಯವಹಾರಗಳಿಗೆ ಸಕ್ರೀಯ ಅಥವಾ ನಿಷ್ಕ್ರೀಯಗೊಳಿಸುವ ಸೌಲಭ್ಯವನ್ನು ನಿಮಗೆ ಆಪ್ ಮೂಲಕ ಒದಗಿಸಲಾಗುವುದು.

5.12. ಅತರಾಷ್ಟ್ರೀಯವಾಗಿ ವೇದ್ಯಗೊಳಿಸಲ್ಪಟ್ಟ ನಿಮ್ಮ ಕಾರ್ಡನ್ನು, ನಿಷೇಧಿಸಲ್ಪಟ್ಟ ಲಾಟರಿ ಟಿಕೆಟ್ ಖರೀದಿ, ನಿಷೇಧಿತ ಅಥವಾ ನಿರ್ಬಂಧಿಸಲ್ಪಟ್ಟ ಪತ್ರಿಕೆ-ಪುರವಣಿಗಳ ಖರೀದಿ, ಸ್ವೀಪ್ ಸ್ಟೇಕ್ ಗಂತಹ ಕುಸಿತಗಳಲ್ಲಿ ತೊಡಗಿಸಲು,ಕಾಲ್ ಬ್ಯಾಕ್ ಸೇವೆಗಳಿಗಾಗಿ ಸಂದಾಯಿಸಲು,ವಿದೇಶಿ ವಿನಿಮಯದ ವ್ಯಾಪಾರದಲ್ಲಿ,ವಿದೇಶಿ ವಿನಿಮಯ/ವಿದೇಶಿ ಸಮಪಕ್ಷಿಗಳಲ್ಲಿ ಅಲ್ಪಾವಧಿ ಸಾಲಗಳನ್ನು ಪಡೆಯಲು, ರಾಷ್ಟ್ರೀಯ/ಅಂತರಾಷ್ಟ್ರೀಯ ಮಟ್ಟದಲ್ಲಿ ವಿದೇಶಿ ವಿನಿಮಯದ ವಾಪಾರದಲ್ಲಿ ತೊಡಗಲು ಮತ್ತು ಇದರಂತಹ ವ್ಯವಹಾರಗಳಿಗೆ ಬಳಸಬೇಡಿ.

5.13. ಭಾರತದ ಹೊರಗಡೆಯ ರಫ್ತಿನ ವ್ಯವಹಾರದಲ್ಲಿ, ಆಮದು ಮಾಡಿಕೊಳ್ಳುವ ಪಕ್ಷದವರು ಭಾರತದ ಭೇಟಿಯಲ್ಲಿದ್ದಾರೋ ಇಲ್ಲವೋ ಅನ್ನುವುದನ್ನು ಗಮನಿಸದೇ, ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ ಮುಖಾಂತರ ಅದಿಕೃತ ಡೀಲರ್ ಗಳು ಸಾಲದ ರೂಪದ ಸಂದಾಯವನ್ನು ಸ್ವೀಕರಿಸಬಹುದು. ಆದ್ದರಿಂದ, ಎಲ್ಲಿ ಕಾರ್ಡ್ ಜಾರಿ ಮಾಡುವ ಬ್ಯಾಂಕು/ಸಂಸ್ಥೆಯಿಂದ ಮರುಪಾವತಿಯನ್ನು ವಿದೇಶಿ ವಿನಿಮಯದಲ್ಲಿ ಮಾಡಲಾಗುತ್ತದೆಯೋ, ಅಲ್ಲಿ ಆಮದುಗಾರನ ಕ್ರೆಡಿಟ್ ಕಾರ್ಡ್ ಖಾತೆಗಳಿಗೆ ಡೆಬಿಟ್ ಮುಖಾಂತರ ಭಾರತದ ಹೊರಗಡೆ ಮಾಡಲಾದ ರಫ್ತಿಗೆ ಅಧಿಕೃತ ಡೀಲರಗಳು ಸಂದಾಯವನ್ನು ಸ್ವೀಕರಿಸಬಹುದು.

5.14. ಕಾರ್ಡ್ ಸದಸ್ಯನಿಗೆ ಯಾವುದೇ ಕಾರಣಗಳನ್ನು ನೀಡದೇ, ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಮೇಲಿನ ಅಧಿಕೃತತೆಯ ವಿನಂತಿಯನ್ನು ಮನ್ನಿಸುವ ಅಥವಾ ಮನ್ನಿಸದೇ ಹೋಗುವ ಸಂಪೂರ್ಣ ಸ್ವಾತಂತ್ರ್ಯ ಅಥವಾ ವಿವೇಚನೆಯನ್ನು ಬ್ಯಾಂಕ್ ಹೊಂದಿರುತ್ತದೆ. ಕೆಲವು ಸಂದರ್ಭಗಳಲ್ಲಿ, ಕೆಲವು ವಿವೇಚನೆಗೆ ಒಳಪಟ್ಟು, ನಿಮ್ಮ ಕಾರ್ಡ್ ಖಾತೆಗೆ ಜಮೆ ಕೊಡುವ ಮತ್ತು ನಿಮ್ಮ ವ್ಯವಹಾರವನ್ನು ಮನ್ನಿಸುವ ಪೂರ್ವದಲ್ಲಿ ಅದನ್ನು ಅಧಿಕೃತಗೊಳಿಸಲು ಗ್ರಾಹಕರ ಸೇವಾ ಕೇಂದ್ರಕ್ಕೆ ಸಂಪರ್ಕಿಸಲು ಬ್ಯಾಂಕು ಸೂಚಿಸಬಹುದು.

5.15. ಇವುಗಳ ಜೊತೆಗೆ, ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ನೀವು ಯಾವುದೇ ಕಾನೂನುಬಾಹಿರ/ ಕಾನೂನಿಗೆ ವಿರುದ್ಧವಾದ ಖರೀದಿಗಳಿಗೆ/ಉದ್ದೇಶಗಳಿಗೆ ಬಳಸುವುದಿಲ್ಲವೆಂದು ಒಪ್ಪಿಕೊಳ್ಳುತ್ತಿದ್ದೀರಿ. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್‌ನ್ನು ಕೇವಲ ಕಾನೂನುಬದ್ಧ, ವಿಶ್ವಾಸರ್ಹ ವೈಯಕ್ತಿಕ ಉದ್ದೇಶಗಳಿಗೆ ಮಾತ್ರವೇ ಬಳಸಬೇಕು ಮತ್ತು ಇದನ್ನು ಅಕ್ರಮ ಹಣ ಗಳಿಕೆಗೆ,ಅಸಾಮಾಜಿಕ ಅಥವಾ ಸಟ್ಟಾ ಆಟದಂತಹ ಕೃತ್ಯಗಳಿಗೆ, ಬಳಸಕೂಡದು ಅಥವಾ ವ್ಯಾಪಾರದಲ್ಲಿ (ಕಾರ್ಯನಿರ್ವಾಹಣಾ ಬಂಡವಾಳದಂತಹ) ವಾಣಿಜ್ಯ ಶೋಷಣೆಯಲ್ಲಿ ತೊಡಗಲು ಬಳಸಕೂಡದು.

5.16. ಒಂದು ವೇಳೆ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್‌ನ ಬಳಕೆಯು ನಿಷೇಧಿಸಲ್ಪಟ್ಟ ,ನಿರ್ಬಂಧಿಸಲ್ಪಟ್ಟ ವಾಣಿಜ್ಯ ಉದ್ದೇಶಕ್ಕಾಗಿ ಅಥವಾ ಈ ಮೇಲಿನ 5.15. ನಲ್ಲಿ ಸೂಚಿತ ಉದ್ದೇಶಗಳಿಗಾಗಿ ಬಳಸಿದ್ದು ಕಂಡು ಬಂದಲ್ಲಿ, ನಿಮಗೆ ಯಾವುದೇ ಪೂರ್ವಭಾವಿ ನೋಟೀಸನ್ನು ನೀಡದೇ, ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಮತ್ತು ಇದರ ಇನ್ನಿತರ ಪೂರಕ ಅಥವಾ ಹೆಚ್ಚುವರಿ ಕಾರ್ಡಗಳನ್ನು ಸ್ಥಗಿತಗೊಳಿಸುವ ಅಧಿಕಾರವನ್ನು ಬ್ಯಾಂಕು ಕೇವಲ ತಮ್ಮದೇ ಆದ ವಿವೇಚನೆಯಡಿಯಲ್ಲಿ ಚಲಾಯಿಸಬಹುದು.

5.17. ನಿಮ್ಮ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್‌ನ ವ್ಯವಹಾರಗಳನ್ನು,ಬಳಕೆಯ ರೀತಿ ಇತ್ಯಾದಿಗಳ ಕುರಿತು ದೂರವಾಣಿ ಅಥವಾ ಇನ್ನಿತರ ಅಧಿಕೃತ ಮಾಧ್ಯಮಗಳ ಮೂಲಕ ವಿಚಾರಣೆ ಮಾಡಲು, ಮಾಹಿತಿ ಕಲೆ ಹಾಕಲು, ಸಾಕ್ಷ್ಯವನ್ನು ಕೊಡಲು ಹೇಳುವ ಹಕ್ಕನ್ನು ಬ್ಯಾಂಕ್ ಹೊಂದಿರುತ್ತದೆ ಮತ್ತು ನೀವು ಬ್ಯಾಂಕು ವಿನಂತಿಸಿದಾಗ ಈ ಎಲ್ಲ ಮಾಹಿತಿಯನ್ನು ಒದಗಿಸಲು ಕರಾರಿನ ಅಂತರ್ಗತ ಬದ್ಧರಾಗಿದ್ದೀರಿ.

ನೀವು ಸ್ಪಂದಿಸದೆ ಹೋದರೆ ಅಥವಾ ಅಸಮಾಧಾನಕರ ಉತ್ತರಗಳನ್ನು ಕೊಟ್ಟರೇ, ನಿಮ್ಮ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನಿರ್ಬಂಧಿಸಲ್ಪಡುವುದು ಅಥವಾ ರದ್ದುಗೊಳಿಸಲ್ಪಡುವುದು. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್

ಕಾರ್ಡಿನ ಮೇಲೆ ಎಷ್ಟು ಸಾಲದ ಮಿತಿ ಇರುತ್ತದೆಯೋ ಅದರಲ್ಲಿ ಆ ಹೊತ್ತಿನವರೆಗೆ ಬಳಸದೇ ಇರುವ ಮೊತ್ತಕ್ಕೆ ಮಾತ್ರ ವ್ಯವಹಾರಗಳನ್ನು ಅನುಮತಿಸಲಾಗುತ್ತದೆ.

5.18. ಈ ಕಾರ್ಡ್ ಜಾರಿಮಾಡಲಾದ ನಂತರದ 30 ದಿನಗಳವರೆಗೆ ಕಾರ್ಡಧಾರಕ ಅದನ್ನು ಸಕ್ರೀಯಗೊಳಿಸದೇ ಹೋದರೆ, ಆ ಮುಂದೆ ಅದನ್ನು ಸಕ್ರೀಯಗೊಳಿಸಲು ಬ್ಯಾಂಕ್ ಕಾರ್ಡ್ ಧಾರಕನಿಂದ ಓ ಟಿ ಪಿ ಯನ್ನು ಅದಕ್ಕೆ ಅವನ ಒಪ್ಪಿಗೆಯ ಸಂಕೇತವಾಗಿ ಕೋರತಕ್ಕದ್ದು. ಕಾರ್ಡ್ ಧಾರಕನಿಂದ ಆ ಕಾರ್ಡ್ ನ್ನು ಬಳಸುವ ಇಚ್ಛೆಯ ಯಾವುದೇ ರೀತಿಯ ಸಂಕೇತವನ್ನು ಅದನ್ನು ಸಕ್ರೀಯಗೊಳಿಸುವಿಕೆ ಎಂದೇ ಪರಿಗಣಿಸಲಾಗುವುದು. ಕಾರ್ಡ್ ಧಾರಕನಿಂದ ಕ್ರೆಡಿಟ್ ಕಾರ್ಡ ಸಕ್ರಿಯಗೊಳಿಸುವ ಒಪ್ಪಿಗೆ ದೊರೆಯದೆ ಇದ್ದರೇ, ಕಾರ್ಡ್ ಧಾರಕನ ಮೇಲೆ ಯಾವುದೇ ಶುಲ್ಕವನ್ನು ವಿಧಿಸದೇ, ಅದನ್ನು ಕೋರಿದ ದಿನಾಂಕದಿಂದ ಏಳು ದಿಗಳೊಳಗಾಗಿ ಬ್ಯಾಂಕು ಅಂತಹ ಕ್ರೆಡಿಟ್ ಖಾತೆಯನ್ನು ನಿರ್ಬಂಧಿಸತಕ್ಕದ್ದು. ಒಂದು ವೇಳೆ ಕಾರ್ಡ್ ನ್ನು ನವೀಕರಣಗೊಳಿಸುವ ಅಥವಾ ಬದಲಾಗಿ ನೀಡಬೇಕಾದ ಸನ್ನಿವೇಶದಲ್ಲಿ, ಕಾರ್ಡ್ ಧಾರಕನಿಂದ ಎಲ್ಲ ರೀತಿಯ ಬಾಕಿ ಸಂದಾಯವಾಗಬೇಕೆಂಬ ಷರತ್ತಿಗೆ ಒಳಪಡತಕ್ಕದ್ದು.

**6. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಮತ್ತು ಅದರ ಆಪ್ ಬಳಕೆಗಾಗಿ, ಗುರುತು ಪರಿಶೀಲನೆ**

6.1. ಆಪ್ ಗಾಗಿ ನೀವು(ಬೆರಳಚ್ಚು ಮುದ್ರೆ ಅಥವಾ ಓ ಟಿ ಪಿ) ಅಂತಹ ಅಧಿಕೃತತೆಯ ಪ್ರಕ್ರಿಯೆಯನ್ನು ಆರಿಸಿಕೊಂಡು ನಿಮ್ಮನ್ನು ನೀವು ಅಧಿಕೃತಗೊಳಿಸಿಕೊಂಡ ಮೇಲೆ, ನೀವು ನಿಮ್ಮ ವ್ಯವಹಾರವನ್ನು ಒಂದು ಸುರಕ್ಷಿತ ವಾತಾವರಣದಲ್ಲಿಯೇ ಮುಂದೊರೆಸಬೇಕು ಎಂಬುದನ್ನು ನಾವು ಖಚಿತಪಡಿಸಿದ್ದೇವೆ. ಕಾರ್ಡ್ ಧಾರಕರಾದ ನೀವು ಈ ಆಪ್ ಬಳಕೆಯ ಎಲ್ಲ ಕೃತ್ಯಗಳಿಗೆ ಜವಾಬ್ದಾರರಾಗಿರುವುದರಿಂದ , ಇದರ ಎಲ್ಲ ವೈಶಿಷ್ಟಗಳ ಬಗ್ಗೆ ಮತ್ತು ಅದರ ಪ್ರಭಾವಗಳ ಬಗ್ಗೆ ತಿಳಿದುಕೊಂಡಿರಬೇಕು.

6.2. ನಿಮ್ಮ ಆಪ್ ನ್ನು ಯಾವುದೇ ಅನಧಿಕೃತ ಬಳಕೆಯಿಂದ ತಡೆಯಲು ದಯವಿಟ್ಟು ಅದನ್ನು ಆಪ್ ಪಿನ್ ಸಂಖ್ಯೆ ಅಥವಾ ಬೆರಳಚ್ಚು ಮುದ್ರೆಯಿಂದ ಸುರಕ್ಷಿತಗೊಳಿಸಿಕೊಳ್ಳಿ. ಅದಲ್ಲದೇ, ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಸುರಕ್ಷಿತ ರೀತಿಯಲ್ಲಿ ಬಳಸಲು, ಒಂದು ವೈಯಕ್ತಿಕ ಗುರುತಿನ ಸಂಖ್ಯೆ( ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಪಿನ್) ನನ್ನು ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗಾಗಿ ಒದಗಿಸಲಾಗುವುದು. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಪಿನ್ ಸಂಖ್ಯೆಯನ್ನು ಆ ನಂತರದ ಯಾವುದೇ ಸಮಯದಲ್ಲಿ ಇದರ ಆಪ್ ನ್ನು ಬಳಸಿ ರಚಿಸಿಕೊಳ್ಳಬಹುದು.

6.3. ನಿಮ್ಮ ಈ ಬಾಯೋಮೆಟ್ರಿಕ್ ಲಾಕ್ ಅಥವಾ ಪಿನ ನಿಮ್ಮ ಕಾರ್ಡ್ ಖಾತೆಗೆ ಪ್ರವೇಶ ದೊರಕಿಸುತ್ತದೆ. ಮತ್ತು ಅದನ್ನು ಗುಟ್ಟಾಗಿ ಬಳಸುವ ಹಾಗೂ ಅದನ್ನು ಉಪಯೋಗಿಸಿ ಆ ಕಾರ್ಡ್ ಖಾತೆಗೆ ತರುವಂತಹ ಎಲ್ಲ ಮಾಹಿತಿ ಬದಲಾವಣೆಗಳ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ನೀವು ಒಪ್ಪಿಕೊಂಡಿರುತ್ತೀರಿ.

6.4. ದಯವಿಟ್ಟು ನಿಮ್ಮ ಪಿನ್ ಸಂಖ್ಯೆಯನ್ನಾಗಲಿ ಅಥವಾ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಪಿನ್ ಸಂಖ್ಯೆಯನ್ನಾಗಲಿ ಯಾರೊಂದಿಗೂ ಹಂಚಿಕೊಳ್ಳಬೇಡಿರಿ ಅಥವಾ ಮೂರನೆ ವ್ಯಕ್ತಿಯ ಕೈಗೆ ಸಿಗುವಂತೆ ಅದನ್ನು ಎಲ್ಲಿಯೂ ಶೇಖರಿಸದಿರಿ. ನಿಮ್ಮ ಪಿನ್ ಮೂಲಕ ಮಾಡುವ ವ್ಯವಹಾರವನ್ನು ಮತ್ತು ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಬ್ಯಾಂಕ್ ನಿಮ್ಮಿಂದ ಅಧಿಕೃತಗೊಳಿಸಲ್ಪಟ್ಟಿದೆ ಮತ್ತು ಅದರಿಂದ ವಿಮುಖಗೊಳ್ಳತಕ್ಕದ್ದಲ್ಲ.

6.5. ಆನಲಾಯಿನ ಖರೀದಿಗಾಗಿ ಋಜುವಾತು ಮತ್ತು ಅಧಿಕೃತತೆಯು, ಕೇವಲ ಸುಕ್ಷಿತವಾಗಿರದೇ ಅನುಕೂಲಕರವೂ ಆಗಿದೆ ಎನ್ನುವುದನ್ನು ಖಚಿತಪಡಿಸಿದ್ದೇವೆ. ಒಂದು ಕಾರ್ಡ್ ಸದಸ್ಯರಾಗಿ ನೀವು ನಿಮ್ಮ ಆನಲಾಯಿನ್ ಖರೀದಿಯನ್ನು ಈ ಕೆಳಗಿನ ರೀತಿಯಲ್ಲಿ ಅಧಿಕೃತಗೊಳಿಸಬಹುದು:

6.5.1 **"ಸ್ವಾಯಿಪ್ ಟು ಪೇ"** ಸ್ಥಳಿಯ ವರ್ತಕರ ಜೊತೆ ನೀವು ಈ ಕಾಮರ್ಸ್ ಖರೀದಿಗಳನ್ನು ಮಾಡುತ್ತಿರೋ, ಆಗ ನಾವು ನಿಮಗೊಂದು ಅಧಿಸೂಚನೆಯನ್ನು ಕಳಿಸುತ್ತೇವೆ. ಆಗ ನೀವು ಆಪ್ ನ ಪಿನ್ ಅಥವಾ ಬಾಯೋಮೆಟ್ರಿಕ್ ಋಜುವಾತನ್ನು ಬಳಸಿ, ಆ ಅಧಿಸೂಚನೆಗೆ

ನಿಲುಕನ್ನು ಪಡೆಯಬೇಕು. ಅದನ್ನು ಯಶಸ್ವಿಯಾಗಿ ಋಜುವಾತು ಮಾಡಿದ ಮೇಲೆ, ನಿಮ್ಮ ಖರೀದಿಯನ್ನು ಖಚಿತ ಪಡಿಸಲು ನೀವು ಅದನ್ನು ಸ್ವೈಪ್ ಮಾಡಬೇಕು. ಒಂದು ವೇಳೆ ನೀವು ಈ ಸೇವೆಯನ್ನು ಬಳಸಿಕೊಳ್ಳುತ್ತಿಲ್ಲವಾದರೇ, ಈ ಆಪ್ ನ ನಿಯಂತ್ರಕಗಳನ್ನು ನಂದಿಸಬಹುದು.

6.5.2 **ಒನ್ ಟಾಯಿಮ್ ಪಾಸ್ ವರ್ಡ್ ಓ ಟಿ ಪಿ):** ಒಂದು ವೇಳೆ ಓ ಟಿ ಪಿ ಯಿಂದ ನೀವು ನಿಮ್ಮನ್ನು ಋಜುವಾತು ಪಡಿಸಿಕೊಳ್ಳಲು ಇಚ್ಛಿಸಿದರೇ, ಖರೀದಿಯ ಸಮಯದಲ್ಲಿ ನೀವು ಒಂದು ಓ ಟಿ ಪಿ ಗಾಗಿ ಕೋರಬಹುದು. ನಿಮ್ಮ ನೋಂದಾಯಿತ ಮೊಬಾಯಿಲ ಗೆ ಕಳುಹಿಸಲಾದ್ ಓ ಟಿ ಪಿ ಯನ್ನು ಅಧಿಕೃತಗೊಳಿದಸಿ ಅದರ ಆಧಾರದ ಮೇಲೆ ನಿಮ್ಮ ವ್ಯವಹಾರವನ್ನು ಅಧಿಕೃತಗೊಳಿಸಲಾಗುವುದು. ನೀವು ಸದಾಕಾಲ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಪಿನ್ ನ ಭದ್ರತೆಯನ್ನು ಕಾಯ್ದುಕೊಳ್ಳತಕ್ಕದ್ದು ನೀವು ಒಂದು ವೇಳೆ ಸುರಕ್ಷತೆಯ ಅವಶ್ಯಕತೆಗಳನ್ನು ಪೂರೈಸದೇ ಹೋದರೆ, ಕೇವಲ ತನ್ನ ಸಂಪೂರ್ಣ ವಿವೇಚನೆಯ ಆಧಾರದ ಮೇಲೆ, ಈಗಿರುವ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಮೇಲೆ ಹೊಸದೊಂದು ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಪಿನ್ ಜಾರಿಮಾಡಬಹುದು ಅಥವಾ ಅನ್ವಯಿಕೆಯಿಂದ ನಿಮಗೊಂದು ನವೀನ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಟ್ ನ ಪಿನ್ ನ್ನು ರಚಿಸಲು ಹೇಳಬಹುದಾದ ಬ್ಯಾಂಕಿನ ಸಲಹೆಯನ್ನು ಮನ್ನಿಸಲು ನೀವು ಜವಾಬ್ದಾರರಾಗುತ್ತೀರಿ.

6.6. ನೀವು ಒಂದು ವೇಳೆ ನಿಮ್ಮ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್‌ನ್ನು ಯಾವುದಾದರೂ ವಂತಿಕೆ ಅಥವಾ ಮರಕಳಿಸುವ ಸಂದಾಯಕ್ಕೆ ಅಳವಡಿಸಿದ್ದರೇ, ಆಗ ಅದರ ನೋಂದಣಿ ಅಥವಾ ಅದರ ಪ್ರಥಮ ವ್ಯವಹಾರದ ಅಧಿಕೃತತೆಯನ್ನು ಖಂಡ 6.5 ಲ್ಲಿ ಒದಗಿಸಲಾದ ಯಾವುದೇ ಪದ್ಧತಿಯಿಂದ ಮಾಡಲಾಗುವುದು. ಮುಂದಿನ ವ್ಯವಹಾರಗಳು ಅಧಿಕೃತವಾಗಿರುವುದಿಲ್ಲ ಮತ್ತು ಅವುಗಳನ್ನು ಮೊದಲನೆಯ ಋಜುವಾತನ್ನು ಆಧರಿಸಿಯೇ ಸಮ್ಮತಿಸಲಾಗುವುದು. ಯಾವುದೇ ಸಮಯಕ್ಕೆ ನೀವು ನಿಮ್ಮ ವಂತಿಕೆಯ ಯೋಜನೆಯನ್ನು ಬದಲಿಸಲು ಇಚ್ಛಿಸಿದರೇ, ನೀವು ಅದನ್ನು ನೇರವಾಗಿ ವರ್ತಕರ ವೆಬ್ ಸಾಯಿಟ್ ಮೂಲಕ ಅಥವಾ ಆಪ್ ಮೂಲಕ ಮಾಡಿಕೊಳ್ಳಬಹುದು. ವಂತಿಕೆ/ಆವರ್ತಕ ಸಂದಾಯದ ವ್ಯವಸ್ಥೆಯು ಆರ್ ಬಿ ಆಯ್ ದಿಂದ ರೂಪಿಸಲಾದ, ಕಾಲಕಾಲಕ್ಕೆ ತಿದ್ದುಪಡಿಗೊಳ್ಳಬಹುದಾದಂತಹ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ ಎಂಬುದನ್ನು ನೀವು ಗಮನಿಸಬೇಕು.

6.6.1 ಈ ವಂತಿಕೆ/ಆವರ್ತನ ಸಂದಾಯಗಳಿಗೆ ಯಾವುದೇ ತಿದ್ದುಪಡಿಯನ್ನು ಕೈಗೊಳ್ಳಲು, ಈ ಮೇಲಿನ ಖಂಡ 6.5 ನಲ್ಲಿ ಹೇಳಿದಂತೆ ಯಾವುದಾದರೂ ಅಧಿಕೃತತೆಯ ಅವಶ್ಯಕತೆ ಇರುತ್ತದೆ.

6.6.2 ಈ ವಂತಿಕೆ/ಆವರ್ತನ ಸಂದಾಯಗಳ ಮೊತ್ತದ ಅನುಮತಿಸಲ್ಪಟ್ಟ ಗರಿಷ್ಠ ಮಿತಿಯು ರೂ.15000/ ದಷ್ಟಿದೆ. ಈ ಮೇಲಿನ ಪಾವತಿಗಳಿಗಾಗಿ ನೋಂದಾಯಿಸಿಕೊಳ್ಳುವಾಗ, ಆ ವಂತಿಕೆ/ಆವರ್ತನ ಪಾವತಿಗಳ ವ್ಯವಸ್ಥೆಯ ಅರ್ಹತಾ ಅವಧಿಯವರೆಗೆ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಖಾತೆಗೆ ರೂ.15,000/ ಗಳ ಮಿತಿಯ ಒಳಗಡೆ ಒಂದು ನಿರ್ಧಾರಿತ ಅಥವಾ ಬದಲಾಗುವ ಮೊತ್ತವನ್ನು ನೀವು ನಿರ್ಧರಿಸಬಹುದು.

6.6.3 ನಿಮ್ಮ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗೆ ಚಾರ್ಜ್ ಮಾಡುವ ಕನಿಷ್ಠ 24 ಗಂಟೆಗಳ ಪೂರ್ವದಲ್ಲಿ, ನಿಮಗೊಂದು ವ್ಯವಹಾರ ಪೂರ್ವ ಅಧಿಸೂಚನೆಯನ್ನು ನೀಡಲಾಗುವುದು. ಈ ತರಹದ ಪಾವತಿಗಳಿಗೆ ನೊಂದಾಯಿಸುವ ಸಮಯದಲ್ಲಿಯೇ ನೀವು ನಿಮ್ಮ ಆದ್ಯತೆಯ ವಾಂಗ್ಮಯದ ಸಾಧನ ಎಂದು ಹೆಸರಿಸಿದ ಸಾಧನದ ಮೇಲೆ ನಿಮಗೊಂದು ವ್ಯವಹಾರ ಪೂರ್ವ ಅಧಿಸೂಚನೆಯನ್ನು ಕೊಡಲಾಗುವುದು.

6.6.4 ಈ ವ್ಯವಹಾರ ಪೂರ್ವ ಅಧಿಸೂಚನೆಯಲ್ಲಿ, ವರ್ತಕನ ಹೆಸರು, ವ್ಯವಹರಿಸಿದ ಮೊತ್ತ, ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗೆ ಚಾರ್ಜ ಆಗುವ ದಿನಾಂಕ/ಸಮಯ, ವ್ಯವಹಾರದ ಉಲ್ಲೇಖ ಸಂಖ್ಯೆ, ಚಾರ್ಜ ಮಾಡುವ ಹಿಂದಿನ ಉದ್ದೇಶ(ಇದನ್ನು ಕಾರ್ಡ್ ಧಾರಕ ಆ ವಂತಿಕೆ/ಆವರ್ತನದ ಸಂದಾಯದ ನೋಂದಣಿ ಸಮಯದಲ್ಲಿ ಒದಗಿಸಿದ್ದಾಗಿರುತ್ತದೆ) ಇವೆಲ್ಲವುಗಳು ನಮೂದಾಗಿರುತ್ತವೆ.

6.6.5 ವ್ಯವಹಾರ ಪೂರ್ವ ಅಧಿಸೂಚನೆಯನ್ನು ಪಡೆದ ಕಾರ್ಡಧಾರಕನಿಗೆ ಆ ವ್ಯವಹಾರಕ್ಕೆ ಹಣ ಪಾವತಿಸದೇ ಹೋಗುವ ಸೌಲಭ್ಯವೂ ದೊರೆಯುತ್ತದೆ. ಒಂದು ವೇಳೆ ಹಾಗೆ ಪಾವತಿಸದೇ ಹೋಗುವ ಮಾರ್ಗವನ್ನು ಆರಿಸಿದ್ದೆ ಆದರೆ, ಖಂಡ 6.5. ನಲ್ಲಿ ಸೂಚಿತ ಒಂದು

ಪದ್ಧತಿಯಿಂದ ಆ ಕೃತ್ಯವನ್ನು ಅವರು ದೃಢೀಕರಿಸಬೇಕು. ಈ ರೀತಿ ಸಂದಾಯದಿಂದ ಹೊರಗುಳಿಯುವ ವಿಷಯವನ್ನು ತಿಳಿದ ಬ್ಯಾಂಕ, ಆ ವ್ಯವಹಾರ ವಿಶೇಷವು ಕಾರ್ಯಾನ್ವಿತವಾಗದಂತೆ ನೋಡಿಕೊಳ್ಳತಕ್ಕದ್ದು ಹಾಗೂ ಅದರಂತೆಯೇ ಅದರ ಮುಂದಿನ ಪಾವತಿಗಳನ್ನೂ ತಡೆಯತಕ್ಕದ್ದು. ಬ್ಯಾಂಕ್ ಈ ವಿಷಯವನ್ನು ದೃಢೀಕರಿಸಲು ನಿಮ್ಮ ಆಯ್ಕೆಯ ಸಂಪರ್ಕ ಸಾಧನಕ್ಕೆ ಒಂದು ಸೂಚನೆಯನ್ನು ಕಳುಹಿಸತಕ್ಕದ್ದು.

6.6.6 ಅಂತಹ ವಂತಿಕೆ/ಆವರ್ತಕ ಸಂದಾಯದ ವ್ಯವಸ್ಥೆಯನ್ನು ಆಪ್ ಅಥವಾ ವೆಬ್ ಸಾಯಿಟ್ ಮೂಲಕ ಹಿಂಪಡೆಯುವುದು ಅಥವಾ ಮರು ವ್ಯವಸ್ಥೆಮಾಡಿಕೊಳ್ಳುವುದು ಸಂಪೂರ್ಣವಾಗಿ ನಿಮ್ಮ ವಿವೇಚನೆಗೆ ಬಿಟ್ಟ ವಿಷಯವಾಗಿರತಕ್ಕದ್ದು. ಅಂತಹ ಹಿಂಪಡೆಯುವಿಕೆ/ಮರುವ್ಯವಸ್ಥೆ ಮಾಡಿಕೊಳ್ಳುವಿಕೆಯು ಖಂಡ 6.5. ಗಳಲ್ಲಿ ನಮೂದಿಸಲಾದ ಒಂದು ಪದ್ಧತಿಯ ಮೂಲಕ ದೃಢೀಕರಿಸಲ್ಪಡತಕ್ಕದ್ದು. ವಂತಿಕೆ/ಪುನಾರವರ್ತಿತ ಸಂದಾಯಗಳ ಯಾವುದೇ ಹಿಂಪಡೆತ/ರದ್ದತಿಯಿಂದ, ಆ ವ್ಯವಸ್ಥೆಯಲ್ಲಿರುವ ಅದರ ಮುಂದಿನ ಸಂದಾಯವನ್ನು ಮಾಡದಿರುವ/ಕಾರ್ಯಾನ್ವಿತಗೊಳಿಸದಿರುವ ಸ್ಥಿತಿಗೆ ಬ್ಯಾಂಕ್ ಬರತಕ್ಕದ್ದು. ಆದಾಗ್ಯೂ, ಯಾವುದಾದರೂ ಸಂದಾಯದ ಪ್ರಕ್ರಿಯೆಯು ಪ್ರಾರಂಭವಾಗಿ ಮುಂದೊರೆದಿದ್ದರೆ, ಅವುಗಳನ್ನು ಸಂದಾಯಮಾಡಲಾಗುತ್ತದೆ.

**"ಪಾಯಿಪ್ ಲಾಯಿನ ವ್ಯವಹಾರಗಳು"** ಎಂದರೆ, ಕಾರ್ಡ್ ಧಾರಕನಿಗೆ ವ್ಯವಹಾರದ ಪೂರ್ವ ಅಧಿಸೂಚನೆಯನ್ನು ನೀಡಲಾಗಿದ್ದು, ಅವನು ಅದರ ಸಂದಾಯವನ್ನು ಮಾಡದೆ ನಿಲ್ಲಿಸುವ ತನ್ನ ಅಧಿಕಾರದ ಚಲಾವಣೆ ಮಾಡದೇ ಇದ್ದು, ಕಾರ್ಡ್ ಧಾರಕನಿಗೆ ಯಾವಾಗ ವ್ಯವಹಾರ ಎಚ್ಚರಿಕೆಯ ಸೂಚನೆ ರವಾನೆಯಾಗುವ ಮತ್ತು ಕಾರ್ಡ್ ಧಾರಕನಿಂದ ಅದನ್ನು ಪಡೆಯುವ ಪೂರ್ವದಲ್ಲಿ ಕಾರ್ಡ್ ಧಾರಕ ಆ ಸಂದಾಯವನ್ನು ಹಿಂಪಡೆಯುವ ಇಚ್ಛೆ ವ್ಯಕ್ತಪಡಿಸಿದ ಸ್ಥಿತಿ ಅದಾಗತಕ್ಕದ್ದು.
6.6.7 ಈ ವಂತಿಕೆಯ/ಆವರ್ತಕ ಸಂದಾಯಗಳ ವ್ಯವಸ್ಥೆಯನ್ನು ಅನುಭವಿಸುವುದಕ್ಕೆ ನಿಮ್ಮಿಂದ ಯಾವುದೇ ಶುಲ್ಕವನ್ನು ವಿಧಿಸುವುದಾಗಲಿ ಅಥವಾ ವಸೂಲಿ ಮಾಡುವುದಾಗಲಿ ಮಾಡಲಾಗುವುದಿಲ್ಲ.

**7. ಕಾರ್ಡ ಸದಸ್ಯತ್ವದ ಉಲ್ಲಂಘನೆ, ಬಿಟ್ಟುಕೊಡುವುದು, ಮುಕ್ತಾಯ/ರದ್ದತಿ** 😢

**7.1.** ಉಲ್ಲಂಘನೆ

ಈ ಕೆಳಗಿನ ಷರತ್ತುಗಳನ್ನು ಕಾರ್ಡ್ ಧಾರಕ ಉಲ್ಲಂಘಿಸಿದರೆ:

7.1.1. ಈ ಎಲ್ಲ ಇತರ ಪ್ರಾವಧಾನಗಳು ಅದೇನೆ ಹೇಳುತ್ತಿದ್ದರೂ, ಇಂತಹ ಉಲ್ಲಂಘನೆಯಿಂದ ಆಗುವ ವ್ಯಕ್ತ ಅಥವಾ ಅವ್ಯಕ್ತ ಹಾನಿಗಳಿಗೆ ಕಾರ್ಡ್ ಧಾರಕನೆ ಜವಾಬ್ದಾರನಾಗಿರುತ್ತಾನೆ; ಮತ್ತು

7.1.2. ಕಾರ್ಡ್ ಧಾರಕನಿಗೆ ಡಿಮಾಂಡ್ ಮಾಡಿದಾಗ, ಬಾಕಿ ಇದ್ದ ಎಲ್ಲ ನಮೂನೆಯ ಮೊತ್ತಗಳನ್ನು ಅಥವಾ ಡಿಮಾಂಡ್ ಮಾಡಲಾದ ದಿನಾಂಕದಂದು ಬಾಕಿ ಇದ್ದರೂ ಅಥವಾ ಇಲ್ಲದಿದ್ದರೂ ಡಿಮಾಂಡ್ ಮಾಡಿದ ದಿನದಂದು ಸಂದಾಯಿಸಬೇಕಾಗಿ ಬರುವ ಎಲ್ಲ ಮೊತ್ತಗಳನ್ನು ಸಂದಾಯಿಸಲು ಕಾರ್ಡ್ ಧಾರಕ ಜವಾಬ್ದಾರನಾಗಿರುತ್ತಾನೆ.

**7.2. ಕಾರ್ಡ ಧಾರಕನಿಂದ ಕಾರ್ಡ್ ನ್ನು ಹಿಂತಿರುಗಿಸುವ ಪ್ರಕ್ರಿಯೆ-ಆ ಕುರಿತು ಸೂಕ್ತ ನೋಟೀಸ್**

7.2.1. ನೀವು ನಮ್ಮ ಗ್ರಾಹಕ ಸೇವಾ ದಳಕ್ಕೆ ಫೋನಾಯಿಸಿ ಅಥವಾ ನಮಗೆ ಒಂದು ಇ-ಮೇಲ ಕಳುಹಿಸಿ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಯಾವುದೇ ಸಮಯಕ್ಕೆ ಹಿಂತಿರುಗಿಸಬಹುದು. ಕಾರ್ಡ್ ಮೇಲೆ ಉಳಿದಿರುವ ಎಲ್ಲ ರೀತಿಯ ಬಾಕಿ ಮತ್ತು ಸಾಲ/ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಮೇಲೆ ಪಡೆದಂತಹ ಇ ಎಮ್ ಆಯ್ ಸೌಲಭ್ಯ(ಒಂದು ವೇಳೆ ಅನ್ವಯಿಸುವಂತಿದ್ದರೇ/ಅಥವಾ ಪಡೆಯಲಾಗಿದ್ದರೇ) ಅವೆಲ್ಲ ತಕ್ಷಣಕ್ಕೆ ಬಾಕಿ ಮೊತ್ತವಾಗಿ ಪರಿವರ್ತನೆಗೊಳ್ಳುತ್ತವೆ.

7.2.2. ಕಾರ್ಡ್ ನ್ನು ಮರಳಿಕೊಟ್ಟ ಮೇಲೆ ನಿಮಗೆ ಯಾವುದಾದದರೂ ಮೊತ್ತವು ಮರಳಿ ಬಂದರೇ/ತಿರುಗಿ ಕೊಡಲಾದರೆ, ಅದನ್ನು ನಿಮ್ಮ ಗಮನಕ್ಕೆ ತರಲಾಗುವುದು ಮತ್ತು ನೀವು ನಮ್ಮ ಗ್ರಾಹಕರ ಸೇವಾ ಕೇಂದ್ರಕ್ಕೆ ಒದಗಿಸಿದ ಖಾತೆ ಸಂಖ್ಯೆಗೆ , ಅದರ ಮಾಲೀಕತ್ವವನ್ನು ಪರಿಶೀಲಿಸಿ, ವಿದ್ಯುನ್ಮಾನ ಪದ್ಧತಿಯ ಮೂಲಕ ಆ ಮೊತ್ತವನ್ನು ಮರಳಿ ನೀಡಲಾಗುವುದು.

7.2.3 ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಸಕ್ರೀಯಗೊಳಿಸಿಲಾಯಿತು ಎಂದರೆ, ಅದನ್ನು ನಿಮಗೆ ರವಾನಿಸಲಾಗುವುದು. ನೀವು ನಿಮ್ಮ ಕಾಲ್ಪನಿಕ ಕಾರ್ಡ್ ನ್ನು ಸಕ್ರೀಯಗೊಳಿಸಿಕೊಂಡ 06 ತಿಂಗಳಲ್ಲಿ ನೀವು ನಿಮ್ಮ ಸದಸ್ಯತ್ವವನ್ನು ರದ್ದುಗೊಳಿಸಿಕೊಳ್ಳಲು ಇಚ್ಛಿಸಿದರೇ, ನಿಮ್ಮ ಮೇಲೆ ರೂ. 3000/ ಗಳ ಶುಲ್ಕ ವಿಧಿಸಲಾಗುವುದು. ಇದನ್ನು ನಿಮ್ಮ ಒಟ್ಟು ಬಾಕಿ ಇರುವ ಮೊತ್ತಕ್ಕೆ ಸೇರಿಸಲಾಗುವುದು ಮತ್ತು ಯಾವಾಗ ಎಲ್ಲ ಬಾಕಿ ಮೊತ್ತವು ಸಂದಾಯವಾಗುತ್ತದೆಯೋ, ಆಗ ಕಾರ್ಡ್ ಖಾತೆಯನ್ನು ಮುಚ್ಚಲಾಗುವುದು.

7.2.4. ಯಾವುದೇ ಕಾರಣದಿಂದ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಖಾತೆಯನ್ನು ನೀವು ಬಂದ ಮಾಡಿದರೆ, ಅದು ಗ್ರಾಹಕರ ಬೇಡಿಕೆಯಿಂದಲೇ ಆಗಿರಲಿ ಅಥವಾ ಬ್ಯಾಂಕಿನಿಂದಲೇ ಆಗಿರಲಿ, ಕಾರ್ಡ ಧಾರಕನು ಆ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಬಳಕೆಯಿಂದ ಕೊಡಬೇಕಾಗಿ ಬಂದಿರುವ ಎಲ್ಲ ಶುಲ್ಕಗಳನ್ನು ತುಂಬಲು ಬಾಧ್ಯನಾಗಿರತಕ್ಕದ್ದು.

7.2.5 ಒಂದು ಬಾರಿ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಖಾತೆಯು ಮುಚ್ಚಲ್ಪಟ್ಟಿತು ಎಂದರೆ, ಅದರ ಎಲ್ಲ ಸೌಕರ್ಯಗಳು(ಎಲ್ಲ ಲಾಭಗಳು, ಸಿಗುತ್ತಿದ್ದ ಎಲ್ಲ ಸೇವೆಗಳು, ಇನ್ನೂ ಅನುಭವಿಸದೇ ಬಿಟ್ಟಿದ್ದ ರಿವಾರ್ಡ್ ಬಿಂದುಗಳು ಇತ್ಯಾದಿಗಳನ್ನೂ ಸೇರಿಸಿ ಆದರೇ ಅವಕ್ಕೇ ಮಾತ್ರ ಸಿಮೀತಿಗೊಳ್ಳದ) ಸವಲತ್ತುಗಳು ಶುನ್ಯವಾಗಿಬಿಡುತ್ತವೆ ಎಂಬುದನ್ನು ನೀವು ಗಮನಿಸಬೇಕಾಗುತ್ತದೆ. ಅದರ ಪುನಸ್ಥಾಪನೆ ಸ್ವಯಂಚಾಲಿತ ಕೆಲಸವೂ ಅಲ್ಲ ಮತ್ತು ಯಾರಾದಾದರೂ ಸಹಾಯದಿಂದ ಆಗುವ ಕಾರ್ಯವೂ ಅಲ್ಲ, ಇದು ಕೇವಲ ಬ್ಯಾಂಕಿನ ವಿವೇಚನೆಯಿಂದಲೇ ನಡೆಯುವ ಕೆಲಸವಾಗಿದೆ.

7.2.6 ಇದರ ದುರ್ಬಳಕೆಯನ್ನು ತಡೆಯಲು ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು, ಅದರ ಮೇಲಿನ ಹಾಲೋಗ್ರಾಂ,ಮ್ಯಾಗ್ನೆಟಿಕ್ ಸ್ಟ್ರಿಪ್ ಮತ್ತು ಚಿಪ್ ನಾಷವಾಗುವ ಹಾಗೆ ಅದನ್ನು ನಷ್ಟಪಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

7.2.7 ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಖಾತೆಯನ್ನು, ಕಟ್ಟಬೇಕಾದ ಎಲ್ಲ ಬಾಕಿ ಮೊತ್ತ, ಮತ್ತು ಬರಬೇಕಾದ ಎಲ್ಲ ಪಾವತಿಗಳು ಬ್ಯಾಂಕಿಗೆ ಪಾವತಿಯಾದ ಮೇಲೆಯೇ ಮುಚ್ಚಲಾಗುತ್ತದೆ.

**7.3. ಕಾರ್ಡ್ ಸದಸ್ಯತ್ವವನ್ನು ರದ್ದುಗೊಳಿಸುವ ಪ್ರಕ್ರಿಯೆ**

ನಮಗೆ ವ್ಯವಹಾರಿಕ ಅವಶ್ಯಕತೆ ಎನಿಸಿದರೇ, ಅಥವಾ ಸುರಕ್ಷತೆಯ ದೃಷ್ಟಿಯಿಂದ ಈ ಕೆಳಗಿನ ಕಾರಣಗಳಿಗಾಗಿ , ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ನಿಮ್ಮ ಎಟುಕನ್ನು ಯಾವುದೇ ಪೂರ್ವಭಾವಿ ನೋಟೀಸ್ ಇಲ್ಲದೆಯೇ ರದ್ದುಗೊಳಿಸಬಹುದು/ಸ್ಥಗಿತಗೊಳಿಸಬಹುದು:

7.3.1 ವಿಳಂಬಿಸಿದ ಅಥವಾ ಮಾನ್ಯ ಮಾಡದೇ ಹೋದ ಸಂದಾಯಗಳು, ಆರ್ ಬಿ ಆಯ್ ನ ವಿನಿಮಯ ನಿಯಮಗಳನ್ನು ಸಂಭಾವ್ಯವಾಗಿ ಉಲ್ಲಂಘನೆ ಮಾಡುವ ರೀತಿಯಲ್ಲಿ ನಿಮ್ಮ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ತಪ್ಪಾಗಿ ಬಳಸಿದ್ದರೇ

7.3.2. ತಪ್ಪು ಅಥವಾ ತಪ್ಪು ದಾರಿಗೆ ಕೊಂಡೊಯ್ಯುವ ಮಾಹಿತಿಯನ್ನು ಕಾರ್ಡ್ ಗಾಗಿ ಸಲ್ಲಿಸಿದ ಅರ್ಜಿಯಲ್ಲಿ ನಮೂದಿಸಿದ್ದರೇ

7.3.3 ಕೆ ವಾಯ್ ಸಿ ( ನೊ ಯುವರ ಕಸ್ಟಮರ್)/ ಎ ಎಮ್ ಎಲ್ (ಆಂಟಿ ಮನಿ ಲಾಂಡರಿಂಗ್)/ಸಿ ಎಫ್ ಟಿ( ಕಾಂಬೆಟಿಂಗ್ ದ ಫಾಯನಾನ್ಸಿಂಗ ಆಫ್ ಟೆರೊರಿಜಮ್) ಕುರಿತಾದ ಮಾರ್ಗದರ್ಶಿ ಸೂತ್ರಗಳ ನಿಟ್ಟಿನಲ್ಲಿ ಅವಶ್ಯಕ ದಸ್ತಾವೇಜುಗಳನ್ನು ಮತ್ತು ಮಾಹಿತಿಯನ್ನು ಒದಗಿಸಲು ತಪ್ಪಿದಲ್ಲಿ.

7.3.4. ಯಾವುದಾದರೂ ದಿವಾಣಿ ಅಥವಾ ಅಪರಾಧಿಕ ಪ್ರಕರಣಗಳಲ್ಲಿ ಭಾಗಿತ್ವ/ ಯಾವುದಾದರೂ ಪ್ರಾಧಿಕಾರದಿಂದ ,ನ್ಯಾಯಾಲಯದಿಂದ ಅಥವಾ ವೃತ್ತಿಪರ ಸಂಘ ಸಂಸ್ಥೆಗಳಿಂದ ಕೈಗೊಂಡಂತಹ ಕಾನೂನು ಕ್ರಮ

7.3.5. ಸಧ್ಯಕ್ಕಿರುವ ಪರಿಸ್ಥಿತಿ/ ಅಕಸ್ಮಾತಾಗಿ ಉದ್ಭವಿಸುವ ಸನ್ನಿವೇಶಗಳಿಂದ ಕ್ರೆಡಿಟ್ ಪಾಲಿಸಿಗಳಲ್ಲಿ ಆದ ಬದಲಾವಣೆಗಳಿಂದ

ನಿಮ್ಮ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಖಾತೆಯನ್ನು ಮುಚ್ಚಿದ ಮೇಲೆಯೂ ನಿಮಗೆ ವಾಸ್ತವಿಕ ಬಾಕಿ ಮೊತ್ತವನ್ನು ದರ್ಶಿಸುವ ಸ್ಟೇಟಮೆಂಟ್ ಗಳು ದೊರೆಯುತ್ತ ಹೋಗಬಹುದು.

**8. ಶುಲ್ಕಗಳು ಮತ್ತು ಸಂದಾಯಗಳು**

ಈ ಕೆಳಗಿನ ಕೆಲವು ಶುಲ್ಕಗಳನ್ನು ನೀವು ಭರಿಸಬೇಕಾಗುತ್ತದೆ . ಅವುಗಳನ್ನು ನಿಮ್ಮ ಅನ್ವಯಿಕೆಯಲ್ಲೂ ತೋರಿಸಲಾಗುತ್ತದೆ:

8.1. ನೀವು ಖರೀದಿಸಿದ ಸರಕು ಮತ್ತು/ ಅಥವಾ ಅನುಭವಿಸಿದ ಸೇವೆ ಅಥವಾ ಹಿಂಪಡೆದ ನಗದು ಮೊತ್ತ

8.2. ಎಮ್ ಆಯ್ ಟಿ ಸಿ ಯ ಖಂಡ 'ಎ' ಅಲ್ಲಿ ನಮೂದಿಸಲಾದ ಯಾವುದೇ ಫೀ

8.3. ಕೆಲ ವಿಶೇಷ ವ್ಯವಹಾರಗಳಿಗೆ ಕಾಲಕಾಲಕ್ಕೆ ಬ್ಯಾಂಕು ನಿರ್ಧರಿಸುವ ಸೇವಾ ಶುಲ್ಕವನ್ನು ವಿಧಿಸಬಹುದು.

8.4. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಗೆ ಸಂಬಂಧ ಪಟ್ಟ ಅಥವಾ ಅದನ್ನು ಕುರಿತಾಗಿ ಸರ್ಕಾರದಿಂದ ಅಥವಾ ಇತರ ಪ್ರಾಧಿಕಾರದಿಂದ ವಿಧಿದಸಲಾಗುವ ವಿಧಿವತ್ತಾದ ಕರಗಳು,ಸರಕು ಮತ್ತು ಸೇವಾ ಶುಲ್ಕ(ಜಿ ಎಸ್ ಟಿ) ಮತ್ತು (ಹೆಸರುಗಳು ಏನೇ ಇದ್ದರೂ) ಇನ್ನಿತರ ಕರಗಳಿಗೆ ಸಮನಾದ ಮೊತ್ತ.

8.5. ವಿಳಂಬಿತ ಅಥವಾ ತಿದ್ದುಪಡಿ ಮಾಡಲಾದ ಶುಲ್ಕಗಳು:

8.5.1. ನೀವು ತಿದ್ದುಪಡಿ ಮಾಡಿದ ಶುಲ್ಕಗಳಿಗೆ ಜವಾಬ್ದಾರಾಗಿರಲು ಒಪ್ಪಿಕೊಂಡಿದ್ದರೇ, ಒಬ್ಬ ವರ್ತಕ ಹೊಟೆಲಿನ, ಭಾಡಿಗೆ ಕಾರಿನ,ನೌಕಾ ವಿಹಾರದ ಅಥವಾ ಇನ್ನಿತರ ವ್ಯವಹಾರಗಳ ಶುಲ್ಕಗಳನ್ನು ವಿಳಂಬದ ಅಥವಾ ತಿದ್ದುಪಡಿ ಮಾಡಿದ ಶುಲ್ಕಗಳನ್ನು ಕಾರ್ಯಗತಗೊಳಿಸಬಹುದು.

8.5.2. ವಿಳಂಬದ ಅಥವಾ ತಿದ್ದುಪಡಿ ಮಾಡಿದ ಶುಲ್ಕಗಳನ್ನು ಅವುಗಳಿಗೆ ಸಂಬಂಧಿಸಿದ ವ್ಯವಹಾರಗಳು ಮುಗಿದ ಗರಿಷ್ಠ 90 ದಿನಗಳಲ್ಲಿ ಕಾರ್ಯಾನ್ವಿತಗೊಳಿಸತಕ್ಕದ್ದು.

8.6. ಈ ವ್ಯವಹಾರಗಳಲ್ಲಿ, ರೂಮ್ ಶುಲ್ಕ, ಊಟ,ತಂಪು ಪಾನೀಯಗಳು,ಕರಗಳು,ಇಂಧನ, ವಿಮಾ,ಭಾಡಿಗೆ,ಭಾಡಿಗೆ ಪಡೆದ ವಾಹನಗಳಿಗೆ ಆದ ಹಾನಿಯ ಖರ್ಚು, ವಾಹನ ನಿಲುಗಡೆಯ ಶುಲ್ಕ, ಮತ್ತು ಇತರ ಸಂಚಾರಿ ನಿಯಮಗಳ ಉಲ್ಲಂಘನೆಯಿಂದ ಆದ ಖರ್ಚು, ವಿದೇಶದಲ್ಲಿ ಕೊಂಡ ಸರಕು ಮತ್ತು ಸೇವೆಗಳ ಖರ್ಚು, ಹಡಗಿನ ಪ್ರಯಾಣದ ಖರ್ಚುಗಳು ಸೇರಿರಬಹುದು.

8.7. ನೀವು ಯಾವಾಗ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ದೇಶದಲ್ಲಿ ಇಂಧನ ಕೊಳ್ಳಲು ಬಳಸುತ್ತೀರೋ,ಅದರ ಸ್ವಾಧೀನದಾರರು ಹೆಚ್ಚುವರಿ ಶುಲ್ಕವನ್ನು ವಿಧಿಸಬಹುದು (ನಿಲ್ದಾಣವನ್ನು ಒದಗಿಸುವ ವರ್ತಕರ ಬ್ಯಾಂಕು) ಈ ಹೆಚ್ಚುವರಿ ಶುಲ್ಕದ ಅತ್ಯಂತ ಕಡಿಮೆ ಮನ್ನಾ ಎಂದರೆ, ಒಟ್ಟು ವ್ಯವಹಾರದ ಮೊತ್ತದ ಅಥವಾ ವಾಸ್ತವಿಕವಾಗಿ ವಿಧಿಸಿದ ಹೆಚ್ಚುವರಿ ಶುಲ್ಕದ( ಜಿ ಎಸ್ ಟಿ ಯನ್ನು ಹೊರತು ಪಡಿಸಿ) 1% ಆಗಿರುವುದು. ಗರಿಷ್ಠ ಇಂಧನದ ಮೇಲಿನ ಹೆಚ್ಚುವರಿ ಶುಲ್ಕದ ಮನ್ನಾ ಎಂದರೆ, ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಬಳಸಿ ಇಂಧನ ಕುರಿತು ಮಾಡಿದ ವ್ಯವಹಾರಗಳಲ್ಲಿ ಒಂದು ಕ್ಯಾಲೆಂಡರ್ ತಿಂಗಳಿಗೆ ರೂ.400/ ಕ್ಕೆ ಸೀಮಿತ ಮಾಡಲಾಗಿದೆ. ಅಂತಹ ಖರೀದಿಗಳಿಗಾಗಿ ಸಂದಾಯ ಮಾಡಿದ ಅದಕ್ಕಿರುವ ಕರಗಳು ಈ ಮರುಪಾವತಿಯಲ್ಲಿ ಸೇರಿರುವುದಿಲ್ಲ. ಈ ಇಂಧನ ಖರೀದಿಯ ವ್ಯವಹಾರಗಳಲ್ಲಿ ಬಹುಮಾನ ಬಿಂದುಗಳನ್ನು ಕಲೆಹಾಕಲಾಗುವುದಿಲ್ಲ.

8.8. ಈ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗೆ ಚಾರ್ಜ್ ವಿಧಿಸಿದ ತಕ್ಷಣ ನೀವು ಅದನ್ನು ಸಂದಾಯ ಮಾಡಲು ಜವಾಬ್ದಾರರಾಗಿಬಿಡುತ್ತೀರಿ.  ಯಾವುದಾದರೂ ಹಿಂದಿ ಬಾಕಿ ಮೊತ್ತವು ಸಂದಾಯಕ್ಕಾಗಿ ಉಳಿದುಕೊಂಡಿದ್ದರೇ, ಆ ಮೊತ್ತಗಳಿಗೆ ಬಡ್ಡಿಯನ್ನು ವಿಧಿಸಲಾಗುವುದು.

8.9. ಈ ಚಾರ್ಜ ಎನ್ನುವುದನ್ನು ಪ್ರತಿನಿತ್ಯ ಕಾಯ್ದುಕೊಳ್ಳಲಾದ ಸರಾಸರಿ ಶಿಲ್ಕಿನ ಮೇಲೆ ಲೆಕ್ಕಿಸಲಾಗುತ್ತದೆ ಮತ್ತು  ಈ ಕೇಳಗಿನ ಯಾವುದಾದರೂ ದಿನಾಂಕದಿಂದ ವಿಧಿಸಲ್ಪಡುವುದು:

8.9.1. ಒಂದು ವೇಳೆ ಆ ಚಾರ್ಜ್ ಎನ್ನುವುದು ಸರಕು ಮತ್ತು ಸೇವೆಗಳ ಖರೀದಿಗೆ ಸಂಬಂಧಿಸಿದ್ದರೇ,ಅದನ್ನು ಬ್ಯಾಂಕಿನ ದಾಖಲೆಗಳಲ್ಲಿ ಸೇರಿಸಿದ ದಿನಾಂಕದಿಂದ ಮತ್ತು

8.9.2. ಒಂದು ವೇಳೆ ಆ ಚಾರ್ಜ ಎನ್ನುವುದು ನಗದು ಹಣ ಹಿಂಪಡೆದಿದ್ದಕ್ಕೆ ಸಂಬಂಧಿಸಿದ್ದರೇ, ಆ ಹಿಂಪಡೆದ ದಿನದಿಂದ ಬ್ಯಾಂಕು ಅದು ಸ್ವೀಕರಿಸಿದ ದಿನದವರೆಗೂ

8.10. ( ಒನ್ ಕಾರ್ಡ್ ಆಪ್ ಮೇಲೆ ನಮೂದಿಸಿದ ಬಿಲ್ ಮಾಡುವ ದಿನಾಂಕದನ್ವಯ) ನೀವು ಯಾವಾಗ ಸ್ಟೇಟಮೆಂಟ್ ನ್ನು ಪಡೆಯುತ್ತಿರೋ, ಆ ಸ್ಟೇಟಮೆಂಟ್ ಗನುರೂಪವಾಗಿ,   ನೀವು ಒಟ್ಟು ಬಾಕಿ ಹಣವನ್ನು ಸಂದಾಯ ಮಾಡುವುದನ್ನು ಆಯ್ಕೆ ಮಾಡಿಕೊಳ್ಳಬಹುದು ಅಥವಾ ಕನಿಷ್ಠ ಬಾಕಿಮೊತ್ತದ ಸಂದಾಯವನ್ನು ಆಯ್ಕೆ ಮಾಡಿಕೊಳ್ಳಬಹುದು ಉಳಿದ ಶಿಲ್ಕನ್ನು ಮುಂದಿನ ತಿಂಗಳುಗಳಿಗೆ  ಸಾಗಿಸಬಹುದು.

**ಈ ಕನಿಷ್ಠ ಬಾಕಿ ಮೊತ್ತವು:**

8.10.1. ಬಾಕಿ ಉಳಿದ ಮೊತ್ತದ  5% ಅಥವಾ ರೂ.100/ ( ಯಾವುದು ಹೆಚ್ಚೋ ಅದು);  ಜೊತೆಗೆ

8.10.2. ಜೊತೆಗೆ ಹಿಂದಿನ ಸಂದಾಯಿಸದೇ ಉಳಿದ ಕನಿಷ್ಠ ಬಾಕಿ, ಯಾವುದಾದರೂ  ಇದ್ದರೇ, ಜೊತೆಗೆ

8.10.3 ಸಾಲದ ಮಿತಿಯನ್ನು ಮೀರಿದ ಯಾವುದಾದರೂ  ನಿಗಧಿತ ಮಿತಿಯನ್ನು ಮೀರಿದ ಮೂಲಧನದ ಮೊತ್ತ; ಜೊತೆಗೆ

8.10.4. (ಒಂದು ವೇಳೆ ಬಾಕಿ ಉಳಿದಿದ್ದರೇ), ಯಾವುದೇ ಕಂತಿನ(ಇ ಎಮ್ ಆಯ್) ಸಂಪೂರ್ಣ  ಮೊತ್ತ ಇದಾಗಿರುತ್ತದೆ.

ಒಟ್ಟು ಬಾಕಿ ಮೊತ್ತ ಅಥವಾ ಕನಿಷ್ಠ ಬಾಕಿ ಮೊತ್ತ ಗಳ ಹೊರತು ಪಡಿಸಿ, ನೀವು ಈ ಕನಿಷ್ಠ ಬಾಕಿ ಮೊತ್ತ ಮತ್ತು ಒಟ್ಟು ಬಾಕಿ ಮೊತ್ತಗಳ ಮಧ್ಯದ ಮೊತ್ತವನ್ನೂ ಸಂದಾಯಿಸಬಹುದು. ವಿಳಂಬ ಸಂದಾಯದ ಶುಲ್ಕದಿಂದ ಉಳಿಯಲು, ಸಂದಾಯಗಳು ಕೊನೆಯ ದಿನಾಂಕದ ಒಳಗಾಗಿ ಆಗಬೇಕು.

8.11. ಒಂದು ವೇಳೆ ಒಟ್ಟ ಬಾಕಿ ಮೊತ್ತವು ರೂ. 100/ ಕ್ಕಿಂತ ಕಡಿಮೆ ಇದ್ದರೇ, ಕನಿಷ್ಠ ಬಾಕಿ ಮೊತ್ತವು ಒಟ್ಟು ಬಾಕಿ ಮೊತ್ತಕ್ಕೆ ಸಮಾನವಾಗಿರುತ್ತದೆ. ನೀವು ಆಪ್ ಸಹಾಯದಿಂದ ಈ ಮುಂದಿನ ಪದ್ಧತಿಗಳನ್ನು ಅನುಸರಿಸಿ ಬಾಕಿ ಮೊತ್ತವನ್ನು ಪಾವತಿಸಬಹುದು:

8.11.1.  ಅಂದರೆ  ಯಾವುದೇ ಯು ಪಿ ಆಯ್ ಮಾರ್ಗದಿಂದ,

8.11.2.  ಯಾವುದೇ ನಗದು ಕಾರ್ಡ್ ನ್ನು ಬಳಸಿ

8.11.3.  ನೆಟ್ ಬ್ಯಾಂಕಿಂಗ ಮೂಲಕ

8.11.4. ಆಯ್ ಎಮ್ ಪಿ ಎಸ್ ಅಥವಾ ಎನ್ಇ ಎಫ್ ಟಿ ಸೌಲಭ್ಯಗಳನ್ನು ಬಳಸಿ ಆಪ್ ನಲ್ಲಿ ಒದಗಿಸಲಾದ ಒನ್ ಕಾರ್ಡ ಖಾತೆಯ ಸಂಖ್ಯೆಗೆ

ನೀವು ಡಿಜಿಟಲ್ ಮಾಧ್ಯಮದಿಂದ ಸಂದಾಯ ಮಾಡುವುದರಲ್ಲಿ ಹೆಚ್ಚು ವಿಶ್ವಾಸವನ್ನು ಹೊಂದಿರುವಿರೆಂದು ನಾವು ಬಲ್ಲೆವು, ಆದ್ದರಿಂದ ನಾವು ಯಾವುದೇ ಮರು ಪಾವತಿಯನ್ನು ನಗದು ಅಥವಾ ಚೆಕ್ ಮುಖಾಂತರ ಇಲ್ಲವೇ ಡಿಮಾಂಡ್ ಡ್ರಾಫ್ಟ್ ಮುಖಾಂತರ ಸ್ವೀಕರಿಸುವುದಿಲ್ಲ. 😉

8.12. ಒಂದು ಸ್ಟೇಟಮೆಂಟ್ ನಲ್ಲಿ ನಮೂದಿಸಲಾದ ಮೊತ್ತಕ್ಕೆ ನಿಮ್ಮಿಂದ ಹಣದ ಪಾವತಿಯನ್ನು ಪಡೆಯುವಾಗ ಈ ಕೆಳಗಿನ ಕ್ರಮಾಂಕದಲ್ಲಿ ಅಂತಹ ಬಾಕಿಗಳ ಹೊಂದಾಣಿಕೆಯನ್ನು ಮಾಡಲಾಗುವುದು:

8.12.1. ಬಿಲ್ ಮಾಡಲಾದ ನಗದು ಮುಂಗಡ ಮೊತ್ತ(ಬಡ್ಡಿ, ಫೀ ಮತ್ತು ಕರಗಳನ್ನು ಕೂಡಿದ)

8.12.2. ಅನ್ವಯಿಸುವ ಬಡ್ಡಿ,ಫೀ ಮತ್ತು ಕರಗಳ ಜೊತೆಗೆ ಬಿಲ್ ಮಾಡಲಾದ ಖರೀದಿಗಳು

8.12.3. (ಬಡ್ಡಿ, ಫೀ ಮತ್ತು ಕರಗಳನ್ನು ಕೂಡಿದ) ಬಿಲ್ ಮಾಡದಿರುವ ನಗದು ಮುಂಗಡ

8.12.4. ಅನ್ವಯಿಕೆಯಾಗುವ ಬಡ್ಡಿ, ಫೀ ಮತ್ತು ಕರಗಳ ಜೊತೆಗಿನ ಬಿಲ್ ರಹಿತವಾದ ಖರೀದಿಗಳು

ಇದರಲ್ಲಿಯ ಹೊಂದಾಣಿಕೆಯ ಕ್ರಮವು ಹೀಗಿರುತ್ತೆ: ಕರಗಳು,ಫೀ,ಬಡ್ಡಿ,ಖರೀದಿಗಳು.

8.13. ಖಂಡ 8.12. ದಲ್ಲಿ ನಮೂದಿತ ವಿನಿಯೋಗವನ್ನು ಕುರಿತಾದ ಕ್ರಮವನ್ನು ಬ್ಯಾಂಕು ತನ್ನ ವಿವೇಚನಾತ್ಮಕವಾಗಿ ಮಾರ್ಪಾಡಿಸಿಕೊಳ್ಳಬಹುದು. ಇಂತಹ ವಿನಿಯೋಗದ ನಂತರ ಉಳಿಯುವ ಅಧಿಕ ಮೊತ್ತವನ್ನು, ಅದರ ತಕ್ಷಣ ನಂತರ ತಯಾರಿಸಲಾಗುವ ಸ್ಟೇಟಮೆಂಟ್‌ನಲ್ಲಿ ನಮೂದಿಸಲಾಗುವ ಮೊತ್ತಗಳ ಜೊತೆ ವಿನಿಯೋಗಿಸಲಾಗುವುದು ಮತ್ತು ಇಂತಹ ಉಳಿದ ಮೊತ್ತಕ್ಕೆ ಯಾವುದೆ ಬಡ್ಡಿಯನ್ನು ಸಂದಾಯಿಸಬೇಕಲಾಗಿಲ್ಲ.

8.14. ಪ್ರತೀ ಕಾರ್ಡ್‌ಧಾರಕನಿಗೆ ಒಂದು ಸಾಲದ ಮಿತಿಯನ್ನು ಗೊತ್ತುಪಡಿಸಲಾಗುವುದು ಮತ್ತು ಅದನ್ನು ಎಂದಿಗೂ ಮೀರಕೂಡದು. ಆದಾಗ್ಯೂ, ಒಟ್ಟು ಬಾಕಿ ಹಣದ ಮೊತ್ತವು ಈ ಒಟ್ಟು ಸಾಲದ ಮಿತಿಯನ್ನು ಮೀರಿದರೇ,ಆ ಹೆಚ್ಚಿನ ಮೊತ್ತಕ್ಕೆ ಹೆಚ್ಚುವರಿ ಶುಲ್ಕವನ್ನು ವಿಧಿಸಲಾಗುವುದು. ಕಾರ್ಡ್ ಧಾರಕನು ಆಪ್ ಮೇಲೆ ಸಾಲದ ಮಿತಿಯನ್ನು ಮರುಪರಿಶೀಲಿಸಲು ವಿನಂತಿಸಬಹುದು. ಈ ಸಾಲದ ಮಿತಿಯನ್ನು ಒಂದು ವೇಳೆ ವೃದ್ಧಿಸುವುದೇ ಆದರೆ, ಅದು ಕೇವಲವಾಗಿ ಬ್ಯಾಂಕಿನ ವಿವೇಚನೆಗೆ ಬಿಟ್ಟ ವಿಷಯವಾಗಿರುತ್ತದೆ.

8.15 ನಿಮ್ಮ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಬಳಕೆಯು ಒನ್ ಕಾರ್ಡ್ ಆಪ್ ನಲ್ಲಿ ಹೇಗಿದೆ ಎಂಬುವುದರ ಆಧಾರದ ಮೇಲೆ ಬ್ಯಾಂಕು ಸಹ ನಿಮ್ಮ ಸಾಲದ ಮಿತಿಯನ್ನು ವೃದ್ಧಿಸಲು ಶಿಫಾರಸ್ಸು ಮಾಡುವ ಅಧಿಕಾರವುಳ್ಳದ್ದಾಗಿದೆ. ಈ ತರಹದ ಶಿಫಾರಸ್ಸು ಮತ್ತು ಅದಕ್ಕನುಗುಣವಾದ ನಿಯಮಾವಳಿಗಳನ್ನು ತಾವು ಒಪ್ಪುವ ಪೂರ್ವದಲ್ಲಿ ನಿಮ್ಮ ಪರಿಗಣನೆಗೆ ತರಲಾಗುತ್ತವೆ.

ಯಾವಾಗ ನೀವು ಒನ್ ಕಾರ್ಡ್ ಆಪ್ ನಲ್ಲಿ ಈ ಶಿಫಾರಸ್ಸು ಮತ್ತು ತದನುಸಾರದ ನಿಯಮಾವಳಿಗಳನ್ನು ಓದಿಕೊಂಡು ಒಪ್ಪುತ್ತಿರಿ ಹಾಗೂ ಇದನ್ನು ವೃದ್ಧಿಸಲು ನಿಮ್ಮ ಸಹಮತಿಯನ್ನು ಸೂಚಿಸುತ್ತಿರೋ, ಆಗಲೇ ಬ್ಯಾಂಕು ನಿಮ್ಮ ಸಾಲದ ಮಿತಿಯನ್ನು ವೃದ್ಧಿಸುತ್ತದೆ. ನೀವು ಒನ್ ಕಾರ್ಡ್ ಆಪ್ ಮುಖಾಂತರ ಗಣಕಿಕೃತವಾಗಿ ಈ ವೃದ್ದಿಸಲ್ಪಟ್ಟ ಸಾಲದ ಮಿತಿಯ ಶಿಫಾರಸ್ಸುಗಳನ್ನು ಕುರಿತಾಗಿ ವಿಶೇಷವಾಗಿ ನಿಮ್ಮ ಸಹಮತಿಯನ್ನು ನೀಡಿದಾಗಲೇ, ಅದನ್ನು ನಿಮ್ಮ ಒಪ್ಪಿಗೆ ಎಂದು ಪರಿಗಣಿಸಲಾಗುತ್ತದೆ.

ಬ್ಯಾಂಕು ಇಂತಹ ನಿಮ್ಮ ಒಪ್ಪಿಗೆಗೆ ಸಂಬಂಧಿಸಿದ ಗಣಕೀಕೃತ ದಾಖಲೆಗಳನ್ನು ಕಾಯ್ದಿರಿಸುತ್ತದೆ ಹಾಗೂ ಈ ಸಾಲದ ಮಿತಿಯ ಏರಿಕೆ ಕುರಿತಾದಂತೆ ಭವಿಷ್ಯದಲ್ಲಿ ಉದ್ಭವಿಸಬಹುದಾದಂತಹ ವಿವಾದಗಳಲ್ಲಿ ಅದನ್ನು ನಿಮ್ಮ ಒಪ್ಪಿಗೆಯ ಸಬೂತಾಗಿ ಬಳಸಿಕೊಳ್ಳುತ್ತದೆ.

8.16 ಬ್ಯಾಂಕು ನಿಮ್ಮ ಖಾತೆಯನ್ನು ಕಾಲಕಾಲಕ್ಕೆ ಪರಿಶೀಲಿಸುತ್ತ ಇರುತ್ತದೆ ಮತ್ತು ನಿಮ್ಮ ವ್ಯವಹಾರಗಳ ನಮೂನೆ,ಮರುಪಾವತಿಯ ರೀತಿ ಮತ್ತು ಇತರ ಆಂತರಿಕ ಗುಣಮಟ್ಟಗಳನ್ನು ಆಧರಿಸಿ ನಿಮ್ಮ ಸಾಲದ ಮಿತಿಯನ್ನು ತಗ್ಗಿಸುವ ಅಧಿಕಾರವನ್ನು ಹೊಂದಿರುತ್ತದೆ. ಇದನ್ನು ನಿಮಗೆ ಒನ್ ಕಾರ್ಡ್ ಆಪ್ ಅಥವಾ ಇ-ಮೇಲ ಅಥವಾ ಎಸ್ ಎಮ್ ಎಸ್ ಮೂಲಕ ತಿಳಿಸಲಾಗುತ್ತದೆ.

8.17 ಒಂದು ವೇಳೆ ಈ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಬಾಕಿ ಮೊತ್ತದ  ಪಾವತಿ ಕುರಿತಾಗಿ ಕಾರ್ಡ್ ಸದಸ್ಯನು ನೀಡಿದ ಸಲಹೆಯನ್ನು ಅಥವಾ ಸಂದಾಯದ ಉಪಕರಣವನ್ನು ಮಾನ್ಯ ಮಾಡದೆ ಹೋಗಿದ್ದರೆ, ಅಥವಾ ಅದನ್ನು ಕ್ರಿಯಾತ್ಮಕಗೊಳಿಸಲಾಗದಿದ್ದುದಕ್ಕೆ ನಿಮಗೆ ಮರಳಿಸಲಾದರೆ,ನಿಮ್ಮ ವಿರುದ್ಧ ಕಾನೂನು ಕ್ರಮವನ್ನು ಕೈಗೊಳ್ಳಲು ಬ್ಯಾಂಕು ಅಧಿಕಾರವನ್ನು ಹೊಂದಿರುತ್ತದೆ ಮತ್ತು ತನ್ನ ವಿವೇಚನಾತ್ಮಕ ಅಧಿಕಾರದಡಿಯಲ್ಲಿ ಯಾವುದಾದರೂ ಫೀ ಯನ್ನು ವಿಧಿಸಬಹುದು ಅಥವಾ ಅದರ ಬದಲಾಗಿ ಇಲ್ಲವೆ ಅದರ ಜೊತೆಗೆ ನಿಮ್ಮ ಈ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ರದ್ದುಪಡಿಸಬಹುದು.  ಜೊತೆಗೆ ನೀವು ಬ್ಯಾಂಕ್ ನಿರ್ಧಾರದ ಮೇರೆಗೆ, ವಿಳಂಬದ ಶುಲ್ಕ ಸಂದಾಯಕ್ಕೆ ಅಥವಾ ಅದು ನಿರ್ಧರಿಸುವ ಇತರ ಶುಲ್ಕಗಳನ್ನು ಭರಿಸಲು ನೀವು ಬಾಧ್ಯರಾಗಿರುತ್ತೀರಿ,

8.18 ಮೂರನೆಯ ಪಕ್ಷದವರ/ ವರ್ತಕನ ಕಡೆಯವರ ಆಪ್ ಮೇಲೆ ಈ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್  ಬಳಸಿ ಸಂದಾಯಿಸಲಾದ ಭಾಡಿಗೆ ಪಾವತಿಗಳಿಗೆ, ಆ ಆಪ್/ಗ್ರಾಹಕರ ಕಡೆಯಿಂದ ಅನುಕೂಲ ಫೀ ಎಂದು ವಿಧಿಸಲಾಗುವ ಫೀ ಯ ಜೊತೆಗೆ, ವ್ಯಹಾರದ ಫೀ ಯಾದ 1% ದಷ್ಟನ್ನೂ ವಿಧಿಸಲಾಗುವುದು.

8.20 ಈ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಬಳಸಿ ಮೂರನೆಯ ಪಕ್ಷದವರ ವ್ಯಾಲೆಟ್ ಗೆ ಅಥವಾ ಬ್ಯಂಕ್ ಖಾತೆಗಳಗೆ ವರ್ಗಾವಣೆ ಮಾಡಿದ ನಿಧಿಯ ಯಾವುದೇ ವರ್ಗಾವಣೆಯು ತಿಂಗಳಿಗೆ ಒಟ್ಟು ರೂ.10,000/ ಅತ್ತು ಅಧಿಕ ಮೊತ್ತಕ್ಕೆ 1% ಫೀ ಯನ್ನು ವಿಧಿಸಲಾಗುವುದು.

**10. ಕಳೆದುಕೊಂಡ, ಕಳುವಾದ ಅಥವಾ ದುರೂಪಯೋಗ ಪಡಿಸಿಕೊಂಡ ಸಾಲದ ಕಾರ್ಡ್/ಕಳುವಾದ ಫೋನ** 😠

10.1. ಈ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡು ಕಳೆದರೆ/ಕಳುವಾದರೇ ಅಥವಾ ದುರೂಪಯೋಗಪಡಿಸಿಕೊಳ್ಳಲಾಗಿದ್ದರೇ, ಕಾನೂನು ಕ್ರಮವನ್ನು ಅನುಸರಿಸಬೇಕು.

10.1.1. ಒಂದು ವೇಳೆ ಈ ನಿಮ್ಮ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಕಳೆದು ಹೋದರೆ,ಕಳುವಾದರೆ ಅಥವಾ ಅರ ಪಿನ್ ಸಂಖ್ಯೆಯು ಯಾರದಾದರೂ ಕೈಗೆ ಸಿಕ್ಕರೆ, ಅದನ್ನು ವರದಿ ಮಾಡಬೇಕು. ಆಪ್ ಮುಖಾಂತರ ಅಥವಾ ಕರೆಮಾಡಲು 1800-210-9111(ದಿ. 10.10.2025 ರಿಂದ 1800-2092111) ಅಥವಾ help@getonecard.app ಗೆ ಇ-ಮೇಲ ಮುಖಾಂತರ(ದಿ.10.10.2025 ರಿಂದ sbmone@getonecard.app) ತಿಳಿಸಲು ನೀವು 1800 103 3817 ಕರೆ ಮಾಡಬಹುದು ಅಥವಾ customercare@sbmbank.co.in. ಗೆ ಇ-ಮೇಲ ಕಳಿಸಬಹುದು. ಒಂದು ವೇಳೆ ನಿಮ್ಮ ಈ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡು ಸಿಗದೆ ಹೋದರೆ, ಆ ಕಾರ್ಡ್ ನ್ನು ತಾತ್ಕಾಲಿಕವಾಗಿ  ಶಿಥಲಿಕರಿಸಬಹುದು.

10.1.2. ಒಂದು ವೇಳೆ ನಿಮ್ಮ ಈ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡು ಕಳೆದು ಹೋದರೆ ಅಥವಾ ಕಳುವಾದರೆ, ನೀವು ಅದನ್ನು ಈ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಸಂಚಾರಿ ಅನ್ವಯಿಕೆಯಿಂದ  ಬ್ಲಾಕ್ ಮಾಡಬಹುದು ಮತ್ತು ನಿಮಗೊಂದು ಹೊಸ ಕಾರ್ಡ್ ನ್ನು ಕಳುಹಿಸಲಾಗುವುದು.   ನೀವು ಈ  ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಪಿನ್ ಸಂಖ್ಯೆಯನ್ನು ಸಹ ಪುನಃ ಸ್ಥಾಪಿಸಿಕೊಳ್ಳಬಹುದು.

10.1.3. ಒಂದು ವೇಳೆ ಒನ್ ಕಾರ್ಡ್ ಮೊಬಾಯಿಲ್ ಆಪ್ ನೊಂದಿಗೆ ನಿಮ್ಮ ಸಂಚಾರಿ ಫೋನ್ ಕೂಡ ಕಳುವಾಗಿದ್ದರೇ, ತಕ್ಷಣ 1800-210-9111 ( ದಿ. 10.10.2025 ರಿಂದ 1800209-2111) ಅಥವಾ 1800 103 3817 ಗೆ ಕರೆಮಾಡಿ ತಿಳಿಸಿರಿ.

10.1.4. ಜೊತೆಗೆ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡು ಕಳೆದು ಹೋದ ವಿಷಯವನ್ನು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವುದರೊಂದಿಗೆ ಪೊಲೀಸರಿಗೂ ತಿಳಿಸಿರಿ ಮತ್ತು ಅದರ ಒಂದು ಪ್ರತಿಯನ್ನು ನಿಮ್ಮನ್ನು ವಿನಂತಿಸಿಕೊಂಡಾಗ ಸಲ್ಲಿಸಿರಿ.

10.1.5. ನೀವು ಒಂದು ವೇಳೆ ನಿಮ್ಮ ನೋದಾರಿಯಿತ ಸಂಚಾರಿ ದೂರವಾಣಿ ಸಂಖ್ಯೆಯನ್ನು ಬದಲಿಸಿಕೊಂಡರೇ, customercare@sbmbank.co.in or help@getonecard.app ಇದಕ್ಕೆ (ದಿ. 10.10.2025 ರಿಂದ sbmone@getonecard.app) ಇ-ಮೇಲ್ ಮುಖಾಂತರ ತಿಳಿಸಿರಿ.

10.2. ಮೇಲಿನ ಖಂಡ 10.1. ರ ಸಂದರ್ಭದಲ್ಲಿ ಕಾರ್ಡ್ ಧಾರಕನ ಬಾಧ್ಯತೆ

10.2.1. ಎಲ್ಲಿಯವರೆಗೆ ನೀವು ನಿಮ್ಮ ಸಂಪೂರ್ಣ ನಿಶ್ಕಾಳಜಿತನದಿಂದ ವ್ಯವಹರಿಸುತ್ತ ಹೀಗೆ ಮಾಡಿಕೊಂಡಿರುವುದಿಲ್ಲವೋ, ಅಲ್ಲಿಯವರೆಗೆ, ನಮಗೆ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡು ಕಳೆದು ಹೋದ ಬಗ್ಗೆ ತಿಳಿಸಿದ ನಂತರ ಅದರಿಂದ ಆದ ದುರೂಪಯೋಗಕ್ಕೆ ನೀವು ಬಾಧ್ಯರಲ್ಲ.

10.2.2. ನಿಮ್ಮ ಸಹಮತಿಯಿಂದ ಅಥವಾ ನಿಮ್ಮ ತಿಳುವಳಿಕೆಯಲ್ಲಿ, ನಮ್ಮ ಗಮನಕ್ಕೆ ಈ ಕಾರ್ಡ್ ಅಥವಾ ನಿಮ್ಮ ಫೋನಿನ ಕಳುವನ್ನು ತರುವುದಕ್ಕಿಂತ ಪೂರ್ವದಲ್ಲಿ ಅದರ ಯಾವುದೇ ರೀತಿಯ ದುರ್ಬಳಕೆಯನ್ನು ಆದರಿಸಿ ಜರುಗಿದಂತಹ ಹಾನಿಗೆ ನೀವೇ ಬಾಧ್ಯರಾಗುವಿರಿ.

ಎಂದಿಗೂ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಪಿನ್ ಸಂಖ್ಯೆಯನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿರಿ.

**11. ಬಾಧ್ಯತೆ.** 🖥️

11.1. ನಮ್ಮ ನಿಯಂತ್ರಣದಲ್ಲಿರುವ ಚ್ಯುತಿಪೂರ್ವಕ ಕೃತ್ಯಗಳಿಂದ ಅಥವಾ ತಂತ್ರದಲ್ಲೇ ಆದ ಚ್ಯುತಿಯಿಂದ ಘಟಿಸಿದ ನೇರವಾದ ನಷ್ಟಗಳಿಗೆ ಬ್ಯಾಂಕು ಹೊಣೆಗಾರನಾಗತಕ್ಕದ್ದು.

11.2. ಆದಾಗ್ಯೂ, ಕಾರ್ಯನಿರ್ವಹಣೆ ಆಗದೇ ಹೋಗಿದುದಕ್ಕೆ ಅಥವಾ ಚ್ಯುತಿಪೂರ್ವಕ ಕಾರ್ಯ ನಿರ್ವಹಣೆಯ ನಮ್ಮ ಜವಾಬ್ದಾರಿಯು ಕೇವಲ ಮೂಲ ಮೊತ್ತಕ್ಕೆ ಮತ್ತು ಆಗ ಜಾರಿಯಲ್ಲಿರುವ ಕಾನೂನುಗಳ ಅನ್ವಯ ಬಡ್ಡಿಯ ನಷ್ಟಕ್ಕೆ ಮಾತ್ರ ಸೀಮಿತವಾಗಿರುತ್ತದೆ.

**12. ಬಾಧ್ಯತೆಯಿಂದ ಮುಕ್ತಿ** 👈

12.1. ಬ್ಯಾಂಕಿಗೆ ಉಪಲಬ್ಧವಿರುವ ಪರಿಹಾರಗಳು ಮತ್ತು ಈ ಷರತ್ತುಗಳ ಪೂರ್ವಾಗ್ರಹಕ್ಕೆ ಒಳಗಾಗದೇ, ಈ ಕೆಳಗಿನ ಸಂದರ್ಭಗಳಲ್ಲಿ ಕಾರ್ಡ್ ಧಾರಕನಿಗೆ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಆದ ಯಾವುದೇ ರೀತಿಯ ನಷ್ಟ ಅಥವಾ ಕ್ಷತಿಗೆ ಬ್ಯಾಂಕು ಯಾವುದೇ ರೀತಿಯ ಬಾಧ್ಯತೆಗೆ ಒಳಪಡತಕ್ಕದ್ದಲ್ಲ:

12.1.1. ಸರಬರಾಜು ಮಾಡಿದಂತಹ ಯಾವುದೇ ದೋಷಪೂರಿತ ಸರಕಿಗೆ

12.1.2. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡನ್ನು ಒಪ್ಪಿಕೊಳ್ಳಲು ಅಥವಾ ಮಾನ್ಯಮಾಡಲು ಯಾವುದೇ ವ್ಯಕ್ತಿ ಅಥವಾ ವರ್ತಕ ಸಂಸ್ಥೆಯ ನಿರಾಕರಣೆಗೆ

12.1.3. ಯಾವುದೇ ಗಣಕಯಂತ್ರದ ಚ್ಯುತಿಪೂರ್ವಕ ಕಾರ್ಯದಿಂದ

12.1.4. ಆ ವ್ಯವಹಾರಕ್ಕೆ ಕಾರ್ಡ್ ಧಾರಕನನ್ನು ಹೊರತುಪಡಿಸಿ ಇನ್ಯಾರಾದರೂ ಕೊಟ್ಟ ನಿರ್ದೇಶನಗಳಿಗೆ

12.1.5. ಬ್ಯಾಂಕ್ ಅಥವಾ ಅದರ ಪ್ರತಿನಿಧಿಗಳನ್ನು ಹೊರತು ಪಡಿಸಿ ನಿಮ್ಮಿಂದ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡನ್ನು ಮತ್ಯಾರಿಗಾದರೂ ನೀಡಿದ್ದಲ್ಲಿ

12.1.6. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಮೇಲೆ ನಮೂದಿತ, ಅದರ ಕೊನೆಯ ದಿನಾಂಕದ ಪೂರ್ವದಲ್ಲೇ ಅದನ್ನು ಕೇಳಿ ಪಡೆಯುವ ತನ್ನ ಅಧಿಕಾರವನ್ನುಬ್ಯಾಂಕು ಚಲಾಯಿಸುತ್ತ;

12.1.7. ಬ್ಯಾಂಕು ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡು ಮತ್ತು ಅದಕ್ಕೆ ಸಂಬಂಧಿಸಿದ ಖಾತೆಯನ್ನು ರದ್ದುಗೊಳಿಸುವ ತನ್ನ ಅಧಿಕಾರವನ್ನು ಚಲಾಯಿಸುತ್ತ;

12.1.8. ನಿಮ್ಮ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಮರುಸ್ವಾಧೀನದಿಂದ ನಿಮ್ಮ ಸಾಲದ ಗುಣಲಕ್ಷಣಕ್ಕೆ ಮತ್ತು ಘನತೆಗೆ ಆಗಿದೆ ಎನ್ನಲಾದ ಯಾವುದೇ ನಷ್ಟಕ್ಕೆ, ಮತ್ತು/ಅಥವಾ ಅದನ್ನು ಮರಳಿಸುವುದಕ್ಕೆ ಬಂದ ಯಾವುದೇ ಮನವಿಯಿಂದ ಅಥವಾ ಈ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡನ್ನು ಒಪ್ಪಿಕೊಳ್ಳಲು ಅಥವಾ ಮಾನ್ಯಮಾಡಲು ಯಾವುದೇ ವರ್ತಕ ಸಂಸ್ಥೆಗಳು ಒಪ್ಪದೇ ಹೋದರೆ;

12.2. ಬ್ಯಾಂಕು ನಿಯುಕ್ತಿಸಿಗೊಂಡ ಅಥವಾ ಅನ್ಯಥಾ ಇನ್ನಿತರ ವ್ಯವಸ್ಥೆ,ಸಂಪರ್ಕ ಮತ್ತು ಸೇವೆಗಳನ್ನು ಒದಗಿಸುವ ಸೌಕರ್ಯವನ್ನು ಆಧರಿಸಿಯೇ ನಿಮಗೆ ನಿಮ್ಮ ನೋಂದಾಯಿತ ಸಂಖ್ಯೆಯ ಮೇಲೆ ಅಥವಾ ಇ-ಮೇಲ್ ಮೇಲೆ ಉಪಲಬ್ಧವಾಗುವ ಎಚ್ಚರಿಕೆಗಳ ಸೌಲಭ್ಯವಿದೆ ಎಂಬುದನ್ನು ನೀವು ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗಾಗಿ ಅರ್ಜಿ ಸಲ್ಲಿಸುವಾಗಲೇ ಒಪ್ಪಿಕೊಂಡಿದ್ದೀರಿ.

12.3. ನಿಮಗೆ ದೊರೆಯುವ ಎಚ್ಚರಿಕೆಗಳ ವೇಳೆ,ಸ್ಪಷ್ಟತೆ ಮತ್ತು ಅದನ್ನು ಓದಬಲ್ಲಂತಹ ರೂಪ ಬ್ಯಾಂಕು ನಿಯುಕ್ತಿಸಿಗೊಂಡ ಅಥವಾ ಅನ್ಯಥಾ ಸೇವೆಯ ಸೌಲಭ್ಯವನ್ನು ಒದಗಿಸುವವರ ಸೇವೆಯನ್ನು ಆಧರಿಸಿದೆ ಎಂಬುದನ್ನು ಕಾರ್ಡ್ ಸದಸ್ಯ ಒಪ್ಪಿಕೊಂಡಿರುತ್ತಾನೆ. ನಿಮಗೆ ಬಿತ್ತರಿಸಲ್ಪಡುವಂತಹ ಎಚ್ಚರಿಕೆಯ, ಚ್ಯುತಿಗಳ, ಹಾನಿಗಳ ಅಥವಾ ವಿಕೃತಿಗಳ ತಿಳುವಳಿಕೆಗಳಲ್ಲಿ ಆಗುವ ವಿಳಂಬ ಅಥವಾ ಅವುಗಳು ತಿಳಿಯದೇ ಹೋಗುವ ಸಂದರ್ಭಗಳಿಗೆ ಬ್ಯಾಂಕು ಬಾಧ್ಯನಾಗತಕ್ಕದ್ದಲ್ಲ.

**13.** ಸಂಗ್ರಹಗಳು

13.1. ಒಂದು ವೇಳೆ ನೀವು ಬಾಕಿ ಇರುವ ಸಂದಾಯಗಳನ್ನು ಭರಿಸಲು ವಿಫಲರಾದರೇ, ಬ್ಯಾಂಕು ಯಾವುದೇ ಪೂರ್ವಾಗ್ರಹಕ್ಕೆ ಒಳಗಾಗದೆ, ಈ ಷರತ್ತುಗಳಲ್ಲಿ ಅಥವಾ ಎಮ್ ಆಯ್ ಟಿ ಸಿ/ ಅಥವಾ ಸಂಬಂಧಿತ ಕಾನೂನುಗಳಲ್ಲಿ ಎಲ್ಲವುಗಳನ್ನು ಅಥವಾ ಯಾವುದೇ ಅಧಿಕಾರ ಅಥವಾ ಪರಿಹಾರವನ್ನು ಅನ್ವಯಿಸಿಕೊಳ್ಳತಕ್ಕದ್ದು.

13.2. ಸಂದಾಯ ಮಾಡುವ ಕೊನೆಯ ದಿನಾಂಕದಿಂದ ಮೂರು ದಿನಗಳವರೆಗೂ ಒಂದು ವೇಳೆ ನೀವು ಕನಿಷ್ಠ ಬಾಕಿ ಮೊತ್ತವನ್ನೂ ಸಂದಾಯಿಸದೆ ಹೋದರೇ, ಆರ್ ಬಿ ಆಯ್ ದವರು ಅಧಿಕೃತಗೊಳಿಸಿದ ಕ್ರೆಡಿಟ್ ಇನಫಾರಮೇಶನ್ (ಸಿ ಆಯ್ ಎಸ್) ಕಂಪನಿಗಳಿಗೆ, ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡು ತಪ್ಪಿತಸ್ಥ ಕಾರ್ಡ್ ಆಗಿದೆ ಎಂಬ ಸಂದೇಶವನ್ನು ಬ್ಯಾಂಕು ಒದಗಿಸುತ್ತದೆ. ಕನಿಷ್ಠ ಬಾಕಿ ಮೊತ್ತದ ಮರುಪಾವತಿಯ ವಿಫಲತೆಯು ನಿಮ್ಮ ಸಾಲದ ಕಾರ್ಡ್ ನ್ನು ಮುಂದಿನ ಸಾಲದ ಸೇವೆಗಳಿಗೆ ಸ್ಥಗಿತಗೊಳಿಸಲೂ ಬಹುದಾಗಿದೆ.

13.3. ಒಂದು ಬಾರಿ ಕ್ರೆಡಿಟ್ ಇನಫಾರಮೇಶನ್ (ಸಿ ಆಯ್ ಎಸ್) ಕಂಪನಿಗಳಿಗೆ ಈ ವಿಷಯವನ್ನು ವರದಿ ಮಾಡಿ ಆಯಿತು ಎಂದರೆ, ಅಲ್ಲಿಂದ ಅದನ್ನು ಹಿಂಪಡೆಯಲು ಸಾಧ್ಯವಿಲ್ಲ. ಆದಾಗ್ಯೂ, ನೀವು ನಿಮ್ಮ ಬಾಕಿ ಮೊತ್ತವನ್ನು ಸಂದಾಯ ಮಾಡಿದ ಮೇಲೆ, ಅದನ್ನು ಕ್ರೆಡಿಟ್ ಇನಫಾರಮೇಶನ್ (ಸಿ ಆಯ್ ಎಸ್) ಕಂಪನಿಗಳಿಗಳೊಂದಿಗೆ ಹಂಚಿಕೊಳ್ಳಲು ಬ್ಯಾಂಕಿಗೆ ತಿಳಿಸಲಾಗುವುದು.

13.4. ನೀವು ಇದಕ್ಕೆ ತಪ್ಪಿದಲ್ಲಿ ಹಲವಾರು ಕೆಳಗಿನ ಮಾಧ್ಯಮಗಳ ಮುಖಾಂತರ, ಅಂದರೆ ಅಂಚೆ, ದೂರವಾಣಿ,ಇ-ಮೇಲ್, ಎಸ್ ಎಮ್ ಎಸ್ ಮತ್ತು ಅಷ್ಟಕ್ಕೇ ಸೀಮಿತಗೊಳಿಸದೇ ನಿಮ್ಮ ಬಾಕಿ ಮತ್ತದ ಸಂದಾಯಕ್ಕೆ ನೆನಪೋಲೆಗಳನ್ನು ಕಳುಹಿಸಲಾಗುವುದು. ಒಂದು ವೇಳೆ ನಿಯಮಿತ ಮಾಧ್ಯಮಗಳ ಮುಖಾಂತರ ಅದಕ್ಕೆ ನಿಮ್ಮ ಸ್ಪಂದನೆಯು ದೊರಕದೆ ಹೋದರೆ, ಮೂರನೇ ಪಕ್ಷದವರನ್ನು ನಿಮಗೆ ಅದನ್ನು ನೆನಪಿಸಲು, ನಿಮ್ಮನ್ನು ಬೆನ್ನು ಹತ್ತಲು ಮತ್ತು ಬಾಕಿ ಮೊತ್ತವನ್ನು ಸಂಗ್ರಹಿಸಲು ನಿಯುಕ್ತಿ ಮಾಡಿಕೊಳ್ಳಲಾಗಿವುದು.

ನಿಯುಕ್ತಿಗೊಂಡ ಯಾವುದೇ ಮೂರನೇ ಪಕ್ಷವು ಸಾಲ ಹಿಂಬಾಕಿ ಸಂಗ್ರಹದ ನೀತಿ ಸಂಹಿತೆಯನ್ನು ಸಂಪೂರ್ಣವಾಗಿ ಪಾಲಿಸುತ್ತದೆ.

13.6. ಮೂಲ ಕಾರ್ಡ್ ಧಾರಕರು ಒಂದು ವೇಳೆ ಅಕಸ್ಮಾತಾಗಿ ಅಸುನಿಗಿದರೆ, (ಇನ್ನೂ ಬಿಲ್ ಆಗದೇ ಉಳಿದ ವ್ಯವಹಾರಗಳನ್ನೂ ಸೇರಿ)ಸಂಪೂರ್ಣ ಬಾಕಿ ಮೊತ್ತವು ತಕ್ಷಣದಿಂದ ಬ್ಯಾಂಕಿಗೆ ಹಿಂಬಾಕಿ ಸಂದಾಯ ಮಾಡುವ ಮೊತ್ತವಾಗಿ ಪರಿವರ್ತಿತವಾಗುವುದು. ಆಗ ಬ್ಯಾಂಕು ಆ ಕಾರ್ಡ್ ಧಾರಕನ ಕಾನೂನಾತ್ಮಕ ವಾರಸುದಾರರಿಗೆ ಈ ಎಲ್ಲ ಬಾಕಿ ಸಂದಾಯದ ಬಗ್ಗೆ ವಿವರಣೆ ನೀಡಿ, ಆ ಹಿಂಬಾಕಿಯ ಮರುಪಾವತಿ ಮಾಡುವಂತೆ ವಿನಂತಿ ಮಾಡಿಕೊಳ್ಳುವುದು.

**14. ವಿದೇಶದಲ್ಲಿ/ವಿದೇಶಿ ಚಲಾವಣೆಯಲ್ಲಿ ಮಾಡಿದ ಚಾರ್ಜಗಳು** $

14.1 ಯಾವಾಗ ನೀವು ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡನ್ನು ವಿದೇಶದಲ್ಲಿ ಬಳಸುತ್ತಿರೋ, ಆಗ ನೀವು ಕಾಲಕಾಲಕ್ಕೆ ಆರ್ ಬಿ ಆಯ್ ದಿಂದ ತಿದ್ದುಪಡಿಗೊಳ್ಳುತ್ತಾ ಜಾರಿಮಾಡಲಾಗುವ ವಿದೇಶಿ ವಿನಿಮಯದ ನಿಯಂತ್ರಕ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತೀರಿ ಎಂದು ಒಪ್ಪಿಕೊಂಡಿರುತ್ತೀರಿ.

14.2. ಆರ್ ಬಿ ಆಯ್ ನ ವಿದೇಶಿ ವಿನಿಮಯದ ನಿಯಂತ್ರಕ ನಿಯಮಾವಳಿಗಳನ್ವಯ ನಿಮ್ಮ ಮಿತಿಯನ್ನು ಒಂದು ವೇಳೆ ನೀವು ಮೀರಿದಲ್ಲಿ, ಅದನ್ನು ಕುರಿತು ತತಕ್ಷಣ ಇ-ಮೇಲ್ ಮೂಲಕ ಬ್ಯಾಂಕಿನ ಗಮನಕ್ಕೆ ತರಬೇಕು. ಆರ್ ಬಿ ಆಯ್ ದವರು ಸೂಚಿಸಿದಂತೆ ಯಾವುದಾದರೂ ಶುಲ್ಕವನ್ನು ನೀವು ಭರಿಸಬೇಕಾಗಿ ಬಂದು ಅದನ್ನು ನಿಮ್ಮ ಪಾಸಪೋರ್ಟ್ ಮೇಲೆ ನಮೂದಿಸಬೇಕಾಗಿ ಬಂದಲ್ಲಿ, ಅದನ್ನು ಪಾಸಪೋರ್ಟ್ ಮೇಲೆ ನಮೂದಿಸಿಕೊಳ್ಳುವ ಸಂಪೂರ್ಣ ಜವಾಬ್ದಾರಿಯು ಕಾರ್ಡ್ ಸದಸ್ಯನದೇ ಆಗಿರುತ್ತದೆ.

14.3. ಆರ್ ಬಿ ಆಯ್ ನಿಂದ ಜಾರಿಯಾಗಿ ಚಾಲ್ತಿಯಲ್ಲಿರುವ ವಿದೇಶಿ ನಿನಿಮಯದ ನಿಯಂತ್ರಕ ನಿಯಮಾವಳಿಗಳನ್ನು ಪಾಲಿಸಲು ವಿಲವಾಗಿದ್ದಾದರೇ, ಕಾಲಕಾಲಕ್ಕೆ ತಿದ್ದುಪಡಿಗೊಳ್ಳುತ್ತಿರುವ 1999 ರ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಯ ಅಂತರ್ಗತದ ಕ್ರಮವನ್ನು ಎದುರಿಸಲು ಕಾರ್ಡ್ ಸದಸ್ಯನೇ ಬಾಧ್ಯನಾಗತಕ್ಕದ್ದು. ಮತ್ತು ಆರ್ ಬಿ ಆಯ್ ಅಥವಾ ಬ್ಯಾಂಕಿನ ಒತ್ತಾಯದ ಮೇರೆಗೆ ಕ್ರೇಡಿಟ್ ಕಾರ್ಡ್ ಸೌಕರ್ಯದಿಂದ ರದ್ದುಗೊಳಿಸಲ್ಪಡತಕ್ಕದ್ದು.

14.4. ಕಾಲಕಾಲಕ್ಕೆ ಆರ್ ಬಿ ಆಯ್ ದಿಂದ ನಿಗಧಿಪಡಿಸಲ್ಪಟ್ಟು ಜಾರಿಯಾಗುವ ವಿದೇಶಿ ವಿನಿಮಯದ ಅರ್ಹತೆಯನ್ನು ಮೀರಿದ ಕಾರಣಕ್ಕಾಗಿ ನಿರಾಕರಿಸಲ್ಪಟ್ಟ ಚಾರ್ಜ್ ಗಳ ಪರಿಣಾಮವಾಗಿ ವ್ಯಕ್ತವಾಗಿ ಅಥವಾ ಅವ್ಯಕ್ತವಾಗಿ ಉದ್ಭವಿಸಿದ ಕ್ಷತಿ ಅಥವಾ ನಷ್ಟಕ್ಕೆ ಯಾವುದೇ ಕಾರಣದಿಂದ ಬ್ಯಾಂಕು ಬಾಧ್ಯನಾಗತಕ್ಕದ್ದಲ್ಲ.

14.5. ಭಾರತೀಯ ಚಾಲಾವಣೆಯ ಹಣವನ್ನು ಹೊರತುಪಡಿಸಿ, ಬೇರೆ ಯಾವುದೇ ಮಾಧ್ಯಮದಲ್ಲಿ ಮಾಡಿದ ವ್ಯವಹಾರವನ್ನು ಭಾರತೀಯ ರೂಪಾಯಲ್ಲಿಯೇ ಪರಿವರ್ತನೆ ಮಾಡಿ ನಿಮ್ಮ ಸ್ಟೇಟಮೆಂಟನಲ್ಲಿ ಕಾಣಿಸಲಾಗುವುದು. ಈ ಪರಿವರ್ತನೆಯು ವ್ಯವಹಾರವು ಹೊಂದಾಣಿಕೆಯಾದ ದಿನದಂದೇ ನಡೆಯುತ್ತದೆ. ಈ ದಿನಾಂಕವು ವ್ಯವಹಾರ ನಡೆದ ದಿನವೇ ಆಗಿರದೇ ಹೋಗಬಹುದು.

14.6. ಒಂದು ವೇಳೆ ವ್ಯವಹಾರವು ಅಮೇರಿಕದ ಡಾಲರ್ ನಲ್ಲಿ ನಡೆಯದೆ ಹೋಗಿದ್ದರೇ, ಮೊದಲು ಶುಲ್ಕದ ಮೊತ್ತವನ್ನು ಅಮೇರಿಕದ ಡಾಲರ್ ಗೆ ಪರಿವರ್ತಿಸಿ, ಆ ಡಾಲರ್ ನಲ್ಲಿರುವ ಮೊತ್ತವನ್ನು ವಿಸಾದಲ್ಲಿ ಹೊಂದಾಣಿಕೆಯಾಗುವ ದಿನದಂದು ನಮೂದಾದ ದರದಲ್ಲಿ ಭಾರತೀಯ ರೂಪಾಯಿಗೆ ಪರಿವರ್ತಿಸಿ, ಈ ಪರಿವರ್ತನೆಯ ಪ್ರಕ್ರಿಯೆಯನ್ನು ಮಾಡಲಾಗುತ್ತದೆ. ಈ ಮೊತ್ತದ ಮೇಲೆ ವಿದೇಶಿ ವಿನಿಮಯದ ಹೆಚ್ಚುವರಿ ಶುಲ್ಕವನ್ನು ವಿಧಿಸಲಾಗುತ್ತದೆ.

14.7. ಯಾವುದಾದರೂ ವರ್ತಕ ಅಥವಾ ಸಂದಾಯದ ದ್ವಾರದಲ್ಲಿ, ಒಂದು ವೇಳೆ ಭಾರತೀಯ ರೂಪಾಯಿ ಮಾಧ್ಯಮದಲ್ಲಿ ವ್ಯವಹಾರವು ನಡೆದಲ್ಲಿ, ಈ ವಿದೇಶಿ ವಿನಿಮಯದ ಹೆಚ್ಚುವರಿ ಶುಲ್ಕವನ್ನು ವಿಧಿಸಲಾಗುತ್ತದೆ.

**15. ಮಧ್ಯಸ್ಥಿಕೆ ಮತ್ತು ವಿವಾದಗಳ ಉಪಶಮನ**

15.1. ಮೇಲೆ ಖಂಡ 8 ರಲ್ಲಿ ಪ್ರಾವಧಾನಿಸಲಾದ ರೀತಿಯಲ್ಲಿ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಕಳೆದಿದೆ , ಕಳುವಾಗಿದೆ ಅಥವಾ ಮೋಸದಿಂದ ಬಳಕೆಯಾಗಿದೆ ಎಂದು ಎಲ್ಲಿಯವರೆಗೂ ವರದಿಯಾಗಿರುವುದಿಲ್ಲವೋ, ಮತ್ತು ಯಾವುದನ್ನು ಅವರು

ಸಬೂತಾಗಿ ಬೇಡುತ್ತಾರೋ, ಅಲ್ಲಿಯವರೆಗೆ ಬ್ಯಾಂಕಿಗೆ ವರ್ತಕರ ಸಂಸ್ಥೆಯಿಂದ ಬಂದ ಯಾವುದೇ ವಿನಂತಿಯನ್ನು ಶುಲ್ಕಗಳಿಗೆ ಕಾರ್ಡ್ ಧಾರಕರು ಒಳಪಟ್ಟಿದ್ದಾರೆ ಎಂಬುದಕ್ಕೆ ನಿರ್ಣಾಯಕವಾದ ಸಬೂತು ಎಂದೇ ಪರಿಗಣಿಸತಕ್ಕದ್ದು.

15.2. ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಪಿನ್ ಮೂಲಕ, ಒನ್ ಕಾರ್ಡ್ ಆಪ್ ಪಿನ್ ಮೂಲಕ, ಅವರ ನೋಂದಾಯಿತ ಸಂಚಾರಿ ದೂರವಾಣಿ ಸಂಖ್ಯೆಗೆ ಕಳುಹಿಒಸಲಾದ ಒನ್ ಟಾಯಿಮ ಪಾಸವರ್ಡ್ ಮೂಲಕ, ಒಂದು ಅಥವಾ ವ್ಯವಹಾರಕ್ಕಾಗಿ ಸ್ವಾಯಿಪ್ ಮಾಡಲಾಗುವ ಕೃತ್ಯದ ಅಧಿಸೂಚನೆಯ ಮೂಲಕ ಅಂದರೆ ಸಂದಾಯಿಸಲು ಸ್ವಾಯಿಪ್ ಮಾಡು ಎನ್ನುವ ಪದ್ಧತಿಯ ಮೂಲಕ ವ್ಯವಹಾರವನ್ನು ಅಧಿಕೃತಗೊಳಿಸುವ ಅಥವಾ ವೆಚ್ಚವನ್ನು ದೃಢೀಕರಿಸುವ ಯಾವುದೇ ಚೀಟಿಯ ಮೇಲೆ ಕಾರ್ಡ ಧಾರಕನ ಹಸ್ತಾಕ್ಷರವು , ಅವನು ಚಾರ್ಜ ಅಥವಾ ಶುಲ್ಕಕ್ಕೆ ಒಳಪಟ್ಟ ಬಾಧ್ಯತೆಯ ನಿರ್ಣಾಯಕ ಸಬೂತಾಗತಕ್ಕದ್ದು.

15.3 ಗ್ರಾಹಕ ಸೇವಾ ಕೇಂದ್ರ, ಅಥವಾ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್‌ನ್ನು ಅದರ ಪಿನ್ ಅಥವಾ ಆಪ್ ಪಿನ ಇಲ್ಲವೆ ಯುಜರ್ ಆಯ್ ಡಿ ಗಳನ್ನು ಬಳಸಿ ಯಾವುದಾದರೂ ಸೌಲಭ್ಯವನ್ನು ಬಳಸಿಕೊಳ್ಳಲಾಗಿದ್ದರೇ, ಅದು ಕಾರ್ಡ್ ಧಾರಕನು ವ್ಯವಹರಿಸಿದ್ದಾನೆ ಎಂಬುದರ ನಿರ್ಣಾಯಕ ಸಬೂತಾಗುವುದು. ಆಗ ಕಾರ್ಡ್ ಧಾರಕನು ಖರೀದಿಸಿದ ಸರಕನ್ನು ಅಥವಾ ಸೇವೆಯನ್ನು ಪಡೆದಿರುತ್ತಾನೋ ಅಥವಾ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳುವ ಅವಶ್ಯಕತೆ ಬ್ಯಾಂಕಿಗೆ ಇರತಕ್ಕದ್ದಲ್ಲ.

15.4 ಸ್ಟೇಟಮೆಂಟ್ ನಲ್ಲಿ ನಮೂದಿಸಲಾದ ಚಾರ್ಜ್ ಕುರಿತು ಕಾರ್ಡ್ ಧಾರಕರು ಒಪ್ಪದೆ ಹೋದಾಗ, ಅಂತಹ ಸ್ಟೇಟಮೆಂಟ್ ತಲುಪಿದ 30 ದಿನದೊಳಗಾಗಿ ನಮಗೆ ತಿಳಿಸಿರಿ. ಇದಕ್ಕೆ ತಪ್ಪಿದಲ್ಲಿ ಆ ಸ್ಟೇಟಮೆಂಟ್ನಲ್ಲಿ ಇರುವ ಎಲ್ಲ ಚಾರ್ಜ್ ಗಳೂ ಸರಯಾಗಿಯೇ ಇವೆ ಎಂದು ಭಾವಿಸಲಾಗುವುದು.

15.5 ಈ ಷರತ್ತುಗಳಿಗೆ ಒಳಪಡುವ ಎರಡೂ ಪಕ್ಷದವರು ತಮ್ಮ ಮಧ್ಯದ ವಿವಾದಗಳನ್ನು ಈ ನಿಯಮ ಮತ್ತು ಷರತ್ತುಗಳ ಅಥವಾ ಕಾಲಕಾಲಕ್ಕೆ ತಿದ್ದುಪಡಿಗೊಳ್ಳುವ 1996 ರ ಮಧ್ಯಸ್ಥಿಕೆ ಮತ್ತು ಸಂಧಾನ ಕಾಯ್ದೆಯಡಿಯ ಎಮ್ ಆಯ್ ಟಿ ಸಿ ಅಂತರ್ಗತ ಬಗೆಹರಿಕೊಳ್ಳಲು ಪರಸ್ಪರ ಒಪ್ಪಿಕೊಂಡಿರುತ್ತಾರೆ. ಮಧ್ಯಸ್ಥಿಕೆಯ ಸ್ಥಾನವು ಪುಣೆ ಆಗಿರುತ್ತದೆ. ಯಾವ ಪಕ್ಷವು ಮಧ್ಯಸ್ಥಿಕೆಗೆ ಕೋರುತ್ತಾರೋ ಅವರು( ಮೊದಲ ಪಕ್ಷಗಾಗರರು) ಈ ಕಾಯ್ದೆಯ ಕಲಂ 12 ರ ಅಂತರ್ಗತ ಎದುರುದಾರರಿಗೆ ತಮ್ಮ ಅಳಲನ್ನು ಹೇಳಿಕೊಳ್ಳುತ್ತಾ, ಆದ್ಯತೆಯಲ್ಲಿ ನಿವೃತ್ತ ನ್ಯಾಯಿಕ ಅಧಿಕಾರಿಗಳನ್ನು ಅಥವಾ 10 ವರ್ಷಗಳಿಗಿಂತ ಅಧಿಕ ಅವಧಿಗೆ ವೃತ್ತಿಯಲ್ಲಿ ನಿರತ ವಕೀಲರ ಹೆಸರುಗಳನ್ನು ಮಧ್ಯಸ್ಥಿಕೆದಾರರಾಗಿ ಸೂಚಿಸುತ್ತ 02 ವಾರಗಳ ಗಡುವಿನ ನೊಟೀಸನ್ನು ಜಾರಿ ಮಾಡುತ್ತಾರೆ. ಎದುರು ಪಕ್ಷದವರು ಈ 02 ವಾರಗಳ ಗಡುವಿನಲ್ಲಿ ಈ ಸೂಚಿತ ಹೆಸರುಗಳಲ್ಲಿ ಯಾವುದಾದರೂ ಹೆಸರಿಗೆ ತಮ್ಮ ಸಮ್ಮತಿ ಸೂಚಿಸುತ್ತಾರೆ ಅಥವಾ ಪಕ್ಷಪಾತದ ಸಬೂತಿನೊಂದಿಗೆ ಎಲ್ಲವುಗಳನ್ನು ತಿರಸ್ಕರಿಸತಕ್ಕದ್ದು. ಎದುರು ಪಕ್ಷದವರು ಎರಡನೆಯ ಮಾರ್ಗವನ್ನು ಆರಿಸಿಕೊಂಡಾಗ, ಮೊದಲ ಪಕ್ಷದವರು ಹೊಸ ಹೆಸರುಗಳುಳ್ಳ ಗುಂಪನ್ನು ಸೂಚಿಸುತ್ತಾರೆ ಮತ್ತು ಅದಕ್ಕೆ ಎದುರು ಪಕ್ಷದವರು ಮೇಲಿನಂತೆಯೇ ಸ್ಪಂದಿಸುತ್ತಾರೆ. ಎದುರು ಪಕ್ಷದವರು ಒಪ್ಪಿದ ಸಂಧಾನಕಾರರನ್ನೇ ನಿಯೋಜಿಸಿಕೊಳ್ಳಲು ಮೊದಲ ಪಕ್ಷದವರು ಅರ್ಹರಾಗಿರತಕ್ಕದ್ದು. ಮಾಡಿದ ಪ್ರಸ್ತಾಪದ ನೊಟೀಸಿಗೆ ಯಾವುದೇ ರೀತಿಯಲ್ಲಿ ಸ್ಪಂದಿಸದೆ ಇದ್ದಲ್ಲಿ, ಮೊದಲ ಪಕ್ಷದವರು ಸೂಚಿಸಿದ ಯಾವುದೇ ನಿಯುಕ್ತಿಗೆ ಎದುರು ಪಕ್ಷದವರ ಒಪ್ಪಿಗೆ ಇದೆ ಎಂಬುದಾಗಿಯೇ ಭಾವಿಸತಕ್ಕದ್ದು ಮತ್ತು ಮೊದಲ ಪಕ್ಷಕ್ಕೆ ಪ್ರಸ್ತಾಪಿತರಲ್ಲಿಯ ಯಾರನ್ನೇ ನಿಯುಕ್ತಿಗೊಳಿಸಿಕೊಳ್ಳಲು ಅರ್ಹರಾಗಿಸತಕ್ಕದ್ದು. ಇಂತಹ ನಿಯೋಜನೆಯ ಬಗ್ಗೆ ಅದಾದ 01 ವಾರದಲ್ಲಿ ಎದುರು ಪಕ್ಷದವರಿಗೆ ತಿಳಿಸತಕ್ಕದ್ದು ಹೀಗೆ ಉಭಯ ಪಕ್ಷಗಳು ಸ್ವ ಇಚ್ಛೆಯಿಂದ ಒಪ್ಪಿಕೊಂಡಾದ ಮೇಲೆ ಇದನ್ನೇ ಕುರಿತು ಭವಿಷ್ಯದಲ್ಲಿ ವಿವಾದಿಸತಕ್ಕದ್ದಲ್ಲ.

15.6. ಈ ಮೇಲಿನ ಯಾವುದೇ ಪೂರ್ವಾಗ್ರಹಕ್ಕೆ ಒಳಗಾಗದೆ,ಕಾರ್ಡ್ ಧಾರಕ ತನ್ನ ಬಾಕಿ ಮೊತ್ತವನ್ನು ಸಂದಾಯಿಸುವಲ್ಲಿ ಮಾಡಿದ 60 ದಿಗಳಿಗಿಂತ ಹೆಚ್ಚಿನ ವಿಳಂಬ ಕುರಿತಾದ ಯಾವುದೇ ಪ್ರಕರಣದಲ್ಲಿ, ಮೇಲಿನ ಯಾವುದೇ ರೀತಿಯ ಸಂಧಾನದ ಕ್ರಮಗಳ ಕುರಿತು ಕಂಪನಿ ಕೇವಲ ತನ್ನ ವಿವೇಚನಾ ಅಧಿಕಾರವನ್ನು ಚಲಾಯಿಸುತ್ತ ಕಾರ್ಡ್ ಧಾರಕನಿಗೆ ನೊಟೀಸ್ ಜಾರಿ ಮಾಡಬಹುದು.

**16. ಸರಕು ಮತ್ತು ಸೇವೆಗಳ ಗುಣಮಟ್ಟ** 👍👎

16.1. ವರ್ತಕ ಸಂಸ್ಥೆಗಳಿಂದ ಕೊಂಡಂತಹ ಸರಕಾಗಲಿ, ಸರಕಿನ ಮೇಲಿನ ವಾರಂಟಿಗಾಗಲಿ, ಅಥವಾ ನೀವು ಹೊಂದಿದಂತಹ ಸೇವೆಗಳಿಗಾಗಲಿ, ಅದರ ಪೂರೈಕೆಯ ವಿಳಂಬ, ಪೂರೈಕೆ ಆಗದೆ ಇರುವ ಸಂದರ್ಭ,ಸರಕನ್ನು ಪಡೆಯದೇ ಹೋಗುವ ಸಂದರ್ಭ ಅಥವಾ ದೋಷಪೂರಿತ ಸರಕನ್ನು ಪಡೆಯುವ ಸಂದರ್ಭಗಳಾವುದಕ್ಕೂ ಬ್ಯಾಂಕು ಯಾವುದೇ ರೀತಿಯಲ್ಲಿ ಜವಾಬ್ದಾರನಾಗತಕ್ಕದ್ದಲ್ಲ.

16.2. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಎನ್ನುವುದು ಶುದ್ಧವಾಗಿ ಸಾಮುಗ್ರಿಗಳನ್ನು ಕೊಳ್ಳಲು ಮತ್ತು/ ಅಥವಾ ಸೇವೆಯನ್ನು ಪಡೆಯಲು ಕೇವಲ ಒಂದು ಸಾಧನವಿದ್ದಂತೆ ಮತ್ತು ಹೀಗಾಗಿ ಮಾರಾಟದ ಸರಕಿನ ಪೂರೈಕೆ, ಅದರ ಗುಣಮಟ್ಟ ಕುರಿತಾಗಿ ಬ್ಯಾಂಕು ಯಾವುದೇ ರೀತಿಯ ಪ್ರತಿನಿಧಿತ್ವವನ್ನಾಗಲಿ ಅಥವಾ ವಾರಂಟಿಯನ್ನಾಗಲಿ ನೀಡುವುದಿಲ್ಲ.

16.3. ಸರಕಿನ ಅಥವಾ ಸೇವೆಯ ಕುರಿತಾದ ಕ್ಲೇಮಿಗೆ ಸಂಬಂಧಿತ ಯಾವುದೇ ವಿವಾದವನ್ನು ನೀವು ನೇರವಾಗಿ ವರ್ತಕ ಸಂಸ್ಥೆಯೊಂದಿಗೆ ಬಗೆಹರಿಸಿಕೊಳ್ಳಬೇಕು. ಯಾವುದಾದರೂ ಕ್ಲೇಮು ಅಥವಾ ವಿವಾದ ಲಂಬಿತವಿದ್ದದ್ದು, ನೀವು ಬ್ಯಾಂಕಿಗೆ ಸಂದಾಯ ಮಾಡಬೇಕಾದ ಯಾವುದೇ ಚಾರ್ಜ್ ನ ಬಾಧ್ಯತೆಯಿಂದ ನಿಮ್ಮನ್ನು ಮುಕ್ತಗೊಳಿಸತಕ್ಕದ್ದಲ್ಲ ಮತ್ತು ನೀವು ಅಂತಹ ಎಲ್ಲ ಚಾರ್ಜ್ ಗಳನ್ನು ಸಕಾಲಕ್ಕೆ ಸಂದಾಯ ಮಾಡುತ್ತೇನೆ ಎಂದು ಒಪ್ಪಿಕೊಂಡಿರುತ್ತೀರಿ.

**17. ಸಾಲದ ವ್ಯವಹಾರಗಳು(ವಹಿವಾಟುಗಳು)** 💰

17.1. ಖರೀದಿಯ ನಗದು ಮತ್ತು ತತ್ಪಷ್ಚಾತ ಆ ಸರಕಿನ ಅಥವಾ ಸೇವೆಯ ರದ್ದತಿಗಾಗಿ ಸಾಲ, ಇವೆರಡನ್ನೂ ಎರಡು ಪ್ರತ್ಯೇಕ ವಹಿವಾಟಾಗಿ ಪರಿಗಣಿಸಲಾಗುವುದು. ನೀವು ನಿಮ್ಮ ಖರೀದಿಯ ವಹಿವಾಟಿನಲ್ಲಿ, ಸ್ಟೇಟಮೆಂಟ್ ನಲ್ಲಿ ಅದು ತೋರುವ ಹಾಗೆ, ಅದಕ್ಕೆ ಯಾವುದೇ ಹೆಚ್ಚುವರಿ ಶುಲ್ಕವು ಭರಿಸುವಂತಾಗದೆ ಇರುವಂತೆ ಸಂದಾಯ ಮಾಡಬೇಕು.

17.2. ಅದು ರದ್ದುಗೊಂಡಾಗ, (ಅದರಿಂದ ರದ್ದತಿಯ ಶುಲ್ಕವನ್ನು ಕಡಿತಗೊಳಿಸಿ), ಯಾವಾಗ ಬ್ಯಾಂಕಿನಿಂದ ಸ್ವೀಕರಿಸಲ್ಪಡುತ್ತದೆಯೋ, ಆಗ ಕಾರ್ಡಿನ ಖಾತೆಗೆ ಅದನ್ನು ಜಮಾ ಮಾಡಲಾಗುತ್ತದೆ. ಒಂದು ವೇಳೆ ಈ ಜಮೆಯನ್ನು ಕಾರ್ಡ್ ಖಾತೆಗೆ 30 ದಿನಗಳಲ್ಲಿ ಕೊಡದೆ ಹೋದಲ್ಲಿ, ನೀವು ಬ್ಯಾಂಕಿಗೆ ಇ ಮೇಲ್ ಅಥವಾ ದೂರವಾಣಿ ಮೂಲಕ ತಿಳಿಸಬಹುದು.

17.3. ವರ್ತಕರು ಒದಗಿಸಿದಂತಹ ಯಾವುದೇ ಜಾಲತಂತ್ರದ ಶೋಧಕರಿಂದ ಗುರುತಿಸಲ್ಪಟ್ಟ ವಹಿವಾಟದ ಯಾವುದೇ ಮರುಪಾವತಿ ಅಥವಾ ಹಿಂತೆಗೆತವನ್ನು ಈ ಕೆಳಗಿನ ರೀತಿಯಲ್ಲಿ ಹೊಂದಾಣಿಕೆ ಮಾಡಲಾಗುವುದು:

- ಒಂದು ವೇಳೆ ಈ ಮರುಪಾವತಿ/ಹಿಂತೆಗೆತವು, ಇನ್ನು ವರೆಗೂ ತಯಾರಾಗದೆ ಇರುವ ಬಿಲ್ಲುಗಳ ಕುರಿತಾಗಿ ಜಾರಿಯಲ್ಲಿರುವ ಬಿಲ್ಲಿಂಗ್ ಸಾಯಕಲ್ ಗೆ ಸಂಬಂಧಿಸಿದಿದ್ದರೇ, ಆ ಮರುಪಾವತಿಗೊಂಡ ಅಥವಾ ಹಿಂತೆಗೆತದಿಂದ ಬಂದ ಮೊತ್ತವನ್ನು ಸಧ್ಯದ ಬಾಕಿ ಮೊತ್ತದಲ್ಲಿಯೇ ಹೊಂದಾಣಿಕೆ ಮಾಡಲಾಗುವುದು.

- ಒಂದು ವೇಳೆ ಈ ಮರುಪಾವತಿ/ಹಿಂತೆಗೆತದ ಪ್ರತಿ ಮೊತ್ತವು ಈಗಾಗಲೇ ಬಿಲ್ಲು ತಯಾರಾದ ಆದರೆ ಕಾರ್ಡ್ ಧಾರಕನಿಂದ ಹಣ ಸಂದಾಯ ಮಾಡಲಾಗದ ವ್ಯವಹಾರವಾಗಿದ್ದರೇ, ಆ ಮರುಪಾವತಿಯಾದ/ಹಿಂತೆಗೆತದಿಂದ ಬಂದ ಮೊತ್ತವನ್ನು ಬಿಲ್ಲ ಮಾಡಲಾದ ಒಟ್ಟು ಬಾಕಿ ಮೊತ್ತ (ಟಿ ಎ ಡಿ) ಯಿಂದ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

- ಒಂದು ವೇಳೆ, ಈ ಮರುಪಾವತಿಯು/ಹಿಂತೆಗೆದ ಹಣವು ಬಿಲ್ಲ ಮಾಡಲ್ಪಟ್ಟು ಕಾರ್ಡ್ ಧಾರಕನಿಂದ ಸಂದಾಯಿಸಲ್ಪಟ್ಟ ಮೊತ್ತದ ವ್ಯವಹಾರವಾಗಿದ್ದರೇ, ಆ ಮರುಪಾವತಿಯಾದ/ ಹಿಂತೆಗೆತದಿಂದ ಬಂದ ಮೊತ್ತವು ಆಪ್ ನಲ್ಲಿ ಆ ವ್ಯವಹಾರದ ಕಾಲವನ್ನು ಖಚಿತ ಪಡಿಸುವ ವಿವರಗಳ ಆಧಾರ ಮೇಲೆ, ಕಾರ್ಡ್ ಮಿತಿಯನ್ನು ಮೀರಿ ಕಾರ್ಡ್ ಧಾರಕ ವ್ಯವಹಾರವನ್ನು ಮಾಡಿಲ್ಲ ಎಂಬ ಕರಾರಿಗೆ ಒಳಪಟ್ಟು, ಕಾರ್ಡ್ ಧಾರಕನ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಲು ಉಪಲಬ್ಧವಿರುತ್ತದೆ. ಒಂದು ವೇಳೆ ಕಾರ್ಡ್ ಧಾರಕನು ಆಪ್ ಮುಖಾಂತರ ಅದರಲ್ಲಿ ಸೂಚಿತ ವೇಳಾಮಿತಿಯಲ್ಲಿ ಮಾರುಪಾವತಿಗೊಂಡ/ಹಿಂತೆಗೆತದಿಂದ ಪಡೆದ ಹಣವನ್ನು ವರ್ಗಾಯಿಸುವುದನ್ನು ಕುರಿತಾಗಿ ಯಾವುದೇ

ರೀತಿಯಲ್ಲಿ ದೃಢೀಕರಿಸದೇ ಹೋದರೆ, ಮರುಪಾವತಿಗೊಂಡ/ಹಿಂತೆಗೆತದಿಂದ ಬಂದ ಮೊತ್ತವನ್ನು ಸಂದಾಯಿಸಲು ಬಾಕಿ ಉಳಿದ ಮೊತ್ತದೊಂದಿಗೆ ಹೊಂದಾಣಿಕೆಮಾಡಲಾಗುತ್ತದೆ.

ಮರುಪಾವತಿಗೊಂಡ/ವಿಫಲಗೊಂಡ/ಹಿಂತೆಗೆಲ್ಪಟ್ಟ ವಹಿವಾಟಿನಿಂದ ಆದ ಹೆಚ್ಚುವರಿ ಜಮೆಯನ್ನು, ಕಾರ್ಡ್ ಧಾರಕನು ತನ್ನ ಒನ್ ಕಾರ್ಡ ಆಪ್ ಮೂಲಕ ಸೇರಿಸಿದ ಖಾತೆಗೆ, ಗರಿಷ್ಠ ಬಿಂದುವನ್ನು ದಾಟಿದ(ಸಾಲದ ಮಿತಿಯ 1% ಅಥವಾ ರೂ. 5,000/ ಇದರಲ್ಲಿ ಯಾವುದು ಕಡಿಮೆಯೋ ಅಷ್ಟು) ಮೊತ್ತವನ್ನು ವರ್ಗಾವಣೆ ಮಾಡಲಾಗುವುದು.

**18. ಬಹಿರಂಗಪಡಿಸುವಿಕೆಗಳು**

18.1. ಚಾಲ್ತಿ ಶೇಷ ಮೊತ್ತ, ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗೆ ಜೊಡಿಸಿದ ಸಾಲಗಳು/ಇ ಎಮ್ ಆಯ್ ಸೌಲಭ್ಯ( ಅನ್ವಯಿಕೆಯಾಗುವಂತಿದ್ದರೇ/ಈಗಾಗಲೇ ಸೌಕರ್ಯವನ್ನು ಪಡೆದಿದ್ದರೇ), ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಮೇಲೆ ಬಾಕಿ ಉಳಿದ ಮೊತ್ತ/ ಸಾಲ, ಸಂದಾಯಕ್ಕೆ ಸಂಬಂಧಿಸಿದ ನಡತೆ ಇತ್ಯಾದಿ ಇವುಗಳನ್ನು ಒಳಗೊಂಡ ಆದರೆ ಇವುಗಳಿಗೇ ಸೀಮಿತವಾಗಿರದ ಸಾಲವನ್ನು ಕುರಿತಾದ ವಿವರಗಳನ್ನು ಆರ್ ಬಿ ಆಯ್ ನಿಂದ ಅಧಿಕೃತಗೊಳಿಸಲ್ಪಟ್ಟ ಕ್ರೆಡಿಟ್ ಇನಫಾರಮೇಶನ್ ಕಂಪನಿಗಳಿಗೆ(ಸಿ ಆಯ್ ಎಸ್) ಕಂಪನಿ ನಿಂಯತ್ರಣ ಕಾಯ್ದೆ 2025 ರ ಅನ್ವಯ ಹಂಚಿಕೊಳ್ಳುವುದು.

18.2. ಆರ್ ಬಿ ಆಯ್ ನಿಂದ ಜಾರಿ ಮಾಡಲ್ಪಟ್ಟ ಬ್ಯಾಂಕು ಮತ್ತು ಎನ್ ಬಿ ಎಫ್ ಸಿ ಗಳಿಂದ ವಿತ್ತೀಯ ಸೇವೆಗಳ ಹೊರಗುತ್ತಿಗೆಗೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳನ್ನು ಒಳಗೊಂಡಂತೆ ಎಲ್ಲ ನಿಯಾಮಕ ನಿಯಮಗಳನ್ನು,ನಿರ್ದೇಶನಗಳನ್ನು ಮತ್ತು ಮಾರ್ಗದರ್ಶನಗಳನ್ನು ಪಾಲಿಸುವ ಜವಾಬ್ದಾರಿಯು ಬ್ಯಾಂಕುಗಳದ್ದಾಗಿದೆ. ಆರ್ ಬಿ ಆಯ್ ನಿಂದ ಜಾರಿ ಮಾಡಲ್ಪಟ್ಟ ಬ್ಯಾಂಕು ಮತ್ತು ಎನ್ ಬಿ ಎಫ್ ಸಿ ಗಳಿಂದ ವಿತ್ತೀಯ ಸೇವೆಗಳ ಹೊರಗುತ್ತಿಗೆಗೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳಿಗೆ ವ್ಯತಿರಿಕ್ತವಾಗಿ ಕಂಪನಿಯು ಯಾವುದೇ ಸೇವೆಯನ್ನು ಒದಗಿಸುವುದಿಲ್ಲ.

18.3. ಬ್ಯಾಂಕು ಕಾರ್ಡ್ ಖಾತೆಯ ವಿವರಗಳನ್ನು ಕಾನೂನಾತ್ಮಕ ಪ್ರಾಧಿಕಾರಗಳಿಗೆ ಮತ್ತು ಬ್ಯಾಂಕಿಗೆ ಅವಶ್ಯಕತೆಗನುಸಾರವಾಗಿ ಒದಗಿಸುತ್ತದೆ.

18.4. ಸ್ವೀಕರಿಸಲ್ಪಟ್ಟ ವ್ಯವಹಾರದ ಎಚ್ಚರಿಕೆಗಳಿಂದ ವ್ಯವಹಾರವು ಪೂರ್ಣಗೊಂಡಿದೆ ಎಂದು ಭಾವಿಸುವಂತಿಲ್ಲ.

18.5. ಒಂದು ವೇಳೆ ನೀವು ಬ್ಯಾಂಕಿನಿಂದ ಬೇರೆ ಯಾವುದೆ ಉತ್ಪನ್ನ ಕುರಿತಾಗಿ ಮಾರಾಟ ಪ್ರಚಾರ ಕರೆಗಳು ಬರಕೂಡದು ಎಂದು ಇಚ್ಛೆ ಪಡುತ್ತಿದ್ದರೆ, ಈ ಅದನ್ನು customercare@sbmbank.co.in or help@getonecard.app (10.10.2025 ಪ್ರಭಾವಿತಗೊಳ್ಳುವಂತೆ sbmone@getonecard.app) ಗೆ ಒಂದು ಇ-ಮೇಲ್ ಮೂಲಕ ನಿಮ್ಮ ವಿನಂತಿಯನ್ನು ನೋಂದಾಯಿಸಿಕೊಳ್ಳಬಹುದು ಜೊತೆಗೆ ಇ ಮೇಲ್ ನಲ್ಲಿ ಒದಗಿಸಲಾಗುವ ಪ್ರಚಾರದ/ಮಾರಾಟ ಕುರಿತಾದ ಇ ಮೇಲ್ ಗಳ ಚಂದಾದಾರಿಕೆಯನ್ನು ರದ್ದುಗೊಳಿಸಿಕೊಳ್ಳುವುದರ ಮೂಲಕವೂ ಇದನ್ನು ಸಾಧಿಸಬಹುದು.

18.6. ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗೆ ಸಂಬಂಧಿಸಿದ ವ್ಯವಹಾರಗಳಿಗೆ ಮತ್ತು ಅದರ ಮುಖ್ಯ ಲಕ್ಷಣಗಳ ಕುರಿತಾದ ತಿಳುವಳಿಕೆಯನ್ನು ಹೊಂದುತ್ತಾ ಹೋಗುವಿರಿ.

18.7. ನೀವು ಸಲ್ಲಿಸಿದ ಕೆ ವಾಯ್ ಸಿಯ ದಸ್ತಾವೇಜಿನಲ್ಲಿ ಯಾವುದೆ ಬದಲಾವಣೆ/ನವೀಕರಣವು ಇದ್ದ ಪಕ್ಷದಲ್ಲಿ, ನೀವು ನಮಗೆ ನವೀಕರಿಸಿದ ದಸ್ತಾವೇಜನ್ನು ಸಲ್ಲಿಸಬೇಕು. ಆ ಬದಲಾವಣೆಯಾದ 30 ದಿನದೊಳಗಾಗಿ ನಮ್ಮ ದಾಖಲೆಗಳಲ್ಲಿ ಆ ಬದಲಾವಣೆಯನ್ನು ನಮೂದಿಸಿಕೊಳ್ಳಲು ಇದನ್ನು ಸಲ್ಲಿಸತಕ್ಕದ್ದು.

**19. ವಿವಾದಗಳ ಬಗೆಹರಿಸುವಿಕೆ** ⚖️

ಎಲ್ಲ ವಿವಾದಗಳು ಭಾರತದ ಪುಣೆ ಶಹರದ ಸಮರ್ಥ ನ್ಯಾಯಾಲಯಗಳಿಗೆ ಒಳಪಟ್ಟಿದ್ದು, ಭಾರತೀಯ ಕಾನೂಗಳಿಗೇ ಒಳಪಟ್ಟಿರುತ್ತದೆ. ತತ್ಸಂಬಂಧಿ ಎಲ್ಲ ಮಧ್ಯಸ್ಥಿಕೆ ಕ್ರಮಗಳು ಗೌಪ್ಯತೆಯ ಆಧಾರದ ಮೇಲೆಯೇ ಜರುಗತಕ್ಕದ್ದು. (ವ್ಯವಹಾರಿಕವಾಗಿ ಸಾಧ್ಯವಾದಷ್ಟು ಮಟ್ಟಿಗೆ) ಎಲ್ಲ ಪಕ್ಷಗಳೂ ಯಾವುದೇ ಮಧ್ಯಸ್ಥಿಕೆಯ ಕ್ರಮವು ತ್ವರಿತ ಗತಿಯಲ್ಲಿ ಮುಗಿಸಲು ಸಹಕರಿಸತಕ್ಕದ್ದು.

**20. ಬಹುಮಾನದ ಅಂಕಗಳು** 🎁

ಎಸ್ ಬಿ ಎಮ್ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಬಳಸುವುದರಿಂದ ನೀವು ಸ್ವಯಂಚಾಲಿತವಾಗಿ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ ಬಹುಮಾನದ ಪ್ರಕ್ರಿಯೆಯಲ್ಲಿ ಶಾಮಿಲಾಗಿದ್ದೀರಿ. ನೀವು ಯಾವಾಗೆಲ್ಲ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ ನ ಮೂಲಕ ವ್ಯವಹರಿಸುತ್ತೀರೋ, ನಿಮ್ಮ ವ್ಯವಹಾರದ ವ್ಯವಹರಿತ ಮೊತ್ತವನ್ನು ಮತ್ತು ಖರೀದಿ ವರ್ಗವನ್ನು ಆಧರಿಸಿ ಬಹುಮಾನದ ಅಂಕಗಳನ್ನು ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ ನ ಖಾತೆಗೆ ಜಮಾ ಮಾಡಲಾಗುತ್ತದೆ. ಈ ಬಹುಮಾನದ ಅಂಕಗಳನ್ನು ಒಗ್ಗೂಡಿಸುತ್ತಾ ಹೋಗಬಹುದು ಮತ್ತು ಮುಂದೊಂದು ದಿನ ಬೇರೆ ಖರೀದಿಯ ಪರವಾಗಿ ಹಣ ಸಂದಾಯ ಮಾಡುವಲ್ಲಿ ಅಥವಾ ಕಾಲಕಾಲಕ್ಕೆ ಒನ್ ಕಾರ್ಡ್ಆಪ್ ನಲ್ಲಿ ಕಂಡುಬರುವ ಕೊಡುಗೆಗಳೊಂದಿಗೆ ಅವುಗಳನ್ನು ಬದಲಿಸಿಕೊಳ್ಳಬಹುದು.

**I. ಬಹುಮಾನದ ಅಂಕಗಳನ್ನು ಗಳಿಸಿರಿ**

a) ಖರೀದಿಯ ವರ್ಗಗಳಲ್ಲಿ ನಿಮ್ಮ ನಿಯಮಿತ ಖರೀದಿಗಳಿಂದ ಬಹುಮಾನದ ಅಂಕಗಳು ಜಮೆಯಾಗುತ್ತವೆ.

b) ಹಣದ ವರ್ಗಾವಣೆಯಿಂದ,ಭಾಡಿಗೆ ಸಂದಾಯದಿಂದ,ಇಂಧನ ಖರೀದಿಯಿಂದ,ಹಣವನ್ನು ಹಿಂಪಡೆಯುವುದರಿಂದ ಮತ್ತು ನಿಮ್ಮ ಗಣಕೀಕೃತ ಚೀಲಗಳನ್ನು ಅಥವಾ ವ್ಯವಹಾರಗಳನ್ನು ಮರುನಿಕ್ಷೇಪಗೊಳಿಸಿಕೊಳ್ಳುವುದರಿಂದ, ನಿಮ್ಮ ಬಹುಮಾನದ ಅಂಕಗಳ ಶೇಖರಣೆಯಾಗುವುದಿಲ್ಲ. ಯಾವಾಗ ನೀವು ಒಂದು ಡಿಜಿಟಲ್ ವ್ಯಾಲೇಟ್ ಆಪ್, ಯಾವುದು ಆ ಆಪ್ ನಿಂದಲೇ ಖರೀದಿಗೆ ಅವಕಾಶ ಕೊಡುತ್ತದೆಯೋ, ಅದರಿಂದ ಖರೀದಿಸಿದ ಸೇವೆ/ಉತ್ಪನ್ನದ ಮೇಲೆ ಕೆಲವು ಬಾರಿ ನಿಮಗೆ ಈ ಬಹುಮಾನದ ಅಂಕಗಳು ಸಿಗದೇ ಹೋಗಬಹುದು. ಏಕೆಂದರೆ, ಇದರಲ್ಲಿ ಮದಲು ಆ ವಿಶೇಷ ವ್ಯಾಲೆಟ್ ನ್ನು ತುಂಬಿಸುವ ಹಂತವಿದ್ದು ನಂತರ ಅದರಿಂದ ಆ ವರ್ತಕನಿಗೆ ಹಣಸಂದಾಯ ಮಾಡುವ ಕ್ರಮವಿರುತ್ತದೆ.

c) ಸಧ್ಯಕ್ಕೆ ನಿಮ್ಮ ಪ್ರತೀ ರೂ.50/ ರ ಖರೀದಿಗೆ ಒಂದು ಬಹುಮಾನದ ಅಂಕ ಜಮಾ ಆಗುತ್ತದೆ.

d) ಒಂದು ವೇಳೆ ಖರೀದಿಯ ಮೊತ್ತಗಳು ರೂ.50 ಕ್ಕಿಂತ ಕಡಿಮೆ ಇದ್ದಲ್ಲಿ ಈ ಬಹುಮಾನದ ಅಂಕಗಳು ಭಿನ್ನರಾಶಿಗಳಲ್ಲಿ ಜಮಾ ಆಗುತ್ತವೆ. ಉದಾಹರಣೆಗೆ, ನೀವು ರೂ. 25 ಖರ್ಚು ಮಾಡಿದರೆ, 0.5 ಬಹುಮಾನದ ಅಂಕ ಜಮಾ ಆಗುತ್ತದೆ.

e) ಬೋನಸ್ ಬಹುಮಾನ: ಒಂದು ತಿಂಗಳಲ್ಲಿ ಶಿಖರದ ಎರೆಡು ವರ್ಘಗಳಿಂದ ವೇದ್ಯ ಮತ್ತು ಖಚಿತವಾದ ಖರೀದಿಗಳಿಂದ ನೀವು "5X" ಬಹುಮಾನಗಳಿಗೆ ಅರ್ಹರಾಗುವಿರಿ. ಇದರರ್ಥ ಆ ತಿಂಗಳಿಗೆ ನಿಮಗೆ ಆ ವರ್ಗದ ಖರೀದಿಯ ಮೇಲೆ 5 ಪಟ್ಟು ಬಹುಮಾನದ ಅಂಕಗಳು ಪ್ರಾಪ್ತವಾಗುತ್ತವೆ.

- ಇದಕ್ಕೆ ಅರ್ಹರಾಗಲು ನೀವು ಒಂದು ತಿಂಗಳಲ್ಲಿ ಕನಿಷ್ಠ 03 ವರ್ಗಗಳಿಂದ ಖರೀದಿ ಮಾಡಲೇ ಬೇಕು. ಇದರಲ್ಲಿಯ ಶಿಖರದ 02 ವರ್ಗಗಳಿಗೆ ಈ 5X ಬಹುಮಾನದ ಅಂಕಗಳು ದೊರೆಯುತ್ತವೆ. ಇದರ ಅರ್ಹತೆಗೆ ಈ ಮೂರು ವರ್ಗಗಳಲ್ಲಿ ನಿಮಗೆ ತಲಾ ಕನಿಷ್ಠ ರೂ.750 ಗಳ ಖರೀದಿಯನ್ನು ಮಾಡಬೇಕಾಗುವುದು.
- ನೀವು ಗಳಿಸಿದ ಈ 5X ಬಹುಮಾನದ ಅಂಕಗಳನ್ನು ನಿಮ್ಮ ಅಂಕಗಳ ರಾಶಿಗೆ ಮುಂದಿನ ತಿಂಗಳ 10 ನೇ ದಿನಾಂಕದಂದು ಕೂಡಿಸಲಾಗುವುದು. ಉದಾಹರಣೆಗೆ, ನಿಮ್ಮ ಜುಲೈ ತಿಂಗಳ 5X ಅಂಕಗಳು ನಿಮ್ಮ ಅಂಕ ರಾಶಿಗೆ ಅಗಷ್ಟ ತಿಂಗಳ 10 ನೇ ತಾರೀಖಿನಂದು ಜಮೆಯಾಗುತ್ತವೆ.

**II. ಬಹುಮಾನದ ಅಂಕಗಳನ್ನು ವಿಮೋಚನೆಗೊಳಿಸಿಕೊಳ್ಳುವುದು**

a) ನೀವು ನಿಮ್ಮ ಬಹುಮಾನದ ಅಂಕಗಳನ್ನು ವಿಮೋಚನೆಗೊಳಿಸಿಕೊಳ್ಳಲು ಬಯಸಿದರೆ ನಿಮ್ಮಿಂದ ಯಾವುದೇ ಫೀ ವಸೂಲಿ ಮಾಡಲಾಗುವುದಿಲ್ಲ.

b) ಈ ಕೆಳಗೆ ಸೂಚಿತ ಮಾರ್ಗಗಳಿಂದಲೂ ಬಹುಮಾನದ ಅಂಕಗಳನ್ನು ವಿಮೋಚನೆಗೊಳಿಸಿಕೊಳ್ಳಬಹುದು:

- ಈ ಅಂಕಗಳನ್ನು ಬಳಸಿ ಸಂದಾಯ ಮಾಡಿ: ನಿಮ್ಮ ಹಿಂದಿನ ವ್ಯವಹಾರಗಳಿಗೆ ಈ ಮುಖಾಂತರ ಹಣ ಸಂದಾಯ ಮಾಡಬಹುದು.

- ಕಾಲಕಾಲಕ್ಕೆ ಅನ್ವಯಿಸುವಂತೆ ಬೇರೆ ಕೊಡುಗೆಗಳಿಗೆ/ಲಾಭಗಳ ಜೊತೆ ಇದನ್ನು ವಿಮೋಚನೆಗೊಳಿಸಿಕೊಳ್ಳ ಬಹುದು.

c) ಈ 'ಅಂಕಗಳಿಂದ ಸಂದಾಯಿಸಿರಿ' ಎನ್ನುವ ಯೋಜನೆಯು ಎರಡು ತಿಂಗಳಿಗಿಂತ ಕಡಿಮೆ ಅವಧಿಯ ಖರೀದಿಗಳ ಹಣಸಂದಾಯಕ್ಕೆ ಬಳಸಿಕೊಳ್ಳಬಹುದು. ಉದಾಹರಣೆಗೆ: ನೀವು ಜುಲೈ 15 ಕ್ಕೆ ಒಂದು ಖರೀದಿಯನ್ನು ಮಾಡಿದ್ದೀರಿ ಎಂದುಕೊಳ್ಳಿ, ( ನಿಮ್ಮ ಖಾತೆಯಲ್ಲಿ ಬಹುಮಾನದ ಅಂಕಗಳು ಜಾಮಾ ಆಗಿದ್ದರೇ) ಈ ಬಹುಮಾನದ ಅಂಕಗಳಿಂದ ನೀವು ಆ ಖರೀದಿಯ ಮೊತ್ತವನ್ನು ಸೆಪ್ಟೆಂಬರ 14 ವರೆಗೆ ಮಾತ್ರ ಸಂದಾಯಮಾಡಬಹುದು.

d) ಈ ರೀತಿಯ ವಿಮೋಚನೆಯಿಂದ, ವಿಮೋಚಿತ ಅಂಕಗಳು, ನಿಮ್ಮ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಖಾತೆಯಲ್ಲಿ ಒಟ್ಟಾದ ಬಹುಮಾನದ ಅಂಕಗಳಲ್ಲಿ ಕಡಿಮೆಯಾಗುತ್ತವೆ.

e) ಈ ರೀತಿಯಲ್ಲಿ ಅಂಕಗಳಿಂದ ನೀವು ಸಂದಾಯ ಮಾಡಬೇಕೆಂದಿದ್ದರೇ, ಕೇವಲ ಟ್ರಾಂಝೂಕ್ಷನ್ ಮೇಲೆ ಸ್ವಾಯಿಪ್ ಮಾಡಿರಿ ಒಂದು ವೇಳೆ ನಿಮ್ಮ ಕೂಡಿಟ್ಟ ಬಹುಮಾನದ ಅಂಕಗಳ ಕೊರತೆ ಇದ್ದರೆ, ನಿಮಗೆ ಆ ವ್ಯವಹಾರಕ್ಕೆ ಇನ್ನೆಷ್ಟು ಅಂಕಗಳ ಅವಶ್ಯಕತೆ ಇದೆ ಎನ್ನುವುದನ್ನು ದರ್ಶಿಸಲಾಗುತ್ತದೆ.

**III. ಇತರ ಷರತ್ತುಗಳು:**

a) ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಖಾತೆಗೆ ಕೋಡಿಸಲಾದ ಅಥವಾ ಆ ಖಾತೆಯಿಂದ ವ್ಯಯಿಸಲಾದ ಬಹುಮಾನದ ಅಂಕಗಳನ್ನು ಒನ್ ಕಾರ್ಡ್ ಆಪ್ ನಲ್ಲಿ ದರ್ಶಿಸಲಾಗುತ್ತದೆ. ನಿಮ್ಮ ಒನ್ ಕಾರ್ಡ್ ಆಪ್ ಮೇಲೆ ಕೂಡಿಡಲ್ಪಟ್ಟ ಬಹುಮಾನದ ಅಂಕಗಳ ಎಣಿಕೆಯನ್ನು ಒನ್ ಕಾರ್ಡ್ ಆಪ್ ಮೇಲೆ ನೋಡಿಕೊಳ್ಳಬಹುದು.

b) ಈ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಬಹುಮಾನದ ಅಂಕಗಳ ಯೋಜನೆಯನ್ನು ಅಂಶಿಕವಾಗಿ ಅಥವಾ ಸಂಪೂರ್ಣವಾಗಿ ಬದಲಿಸುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ. ಈ ಬಹುಮಾನದ ಅಂಕಗಳನ್ನು ಬದಲಿಸಿಕೊಳ್ಳುವ ದರ, ನೀಡಲಾದ ಬಹುಮಾನದ ಅಂಕಗಳನ್ನು ಹಿಂದಕ್ಕೆ ಪಡೆಯುವ ಅಥವಾ ಇದಕ್ಕೆ ಸಂಬಂಧಿಸಿದ ಯಾವುದೇ ನಿಯಮ ಮತ್ತು ಷರತ್ತನ್ನು ಕಾರ್ಡಧಾರಕನ ಗಮನಕ್ಕೆ ತರದೇ ಬದಲಿಸುವ ಸಂಪೂರ್ಣ ಅಧಿಕಾರವು ಬ್ಯಾಂಕಿನ ವಿವೇಚನೆಗೆ ಬಿಟ್ಟ ವಿಷಯವಾಗಿದೆ.

c) ಒಂದು ವೇಳೆ ಈ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಬಹುಮಾನದ ಅಂಕಗಳ ಯೋಜನೆಯು ಯಾವುದೇ ನಿಯಮ, ನಿಯಂತ್ರಣ ಅಥವಾ ಆದೇಶದಡಿಯಲ್ಲಿ ಕಲಹಕ್ಕೆ ಈಡಾದರೇ, ಇವುಗಳ ಅವಶ್ಯಕತೆಗಳನ್ನು ಪೂರೈಸಲು ಈ ಬಹುಮಾನದ ಅಂಕ ಯೋಜನೆಯನ್ನು ಮಾರ್ಪಾಡು ಮಾಡುವುದಕ್ಕೆ ಅಥವಾ ರದ್ದುಗೊಳಿಸುವುದಕ್ಕೆ ಬ್ಯಾಂಕು ಸಂಪೂರ್ಣ ಅಧಿಕಾರವನ್ನು ಹೊಂದಿದೆ.

d) ಈ ಬಹುಮಾನದ ಅಂಕಗಳಿಗೆ ಕೊನೆಯ ದಿನ ಅನ್ನುವುದಿಲ್ಲ. ಇವುಗಳಿಗೆ, ಈ ಕೆಳಗಿನ ಸಂದರ್ಭಗಳನ್ನು ಬಿಟ್ಟು, ಜೀವನೂದ್ದದ ಖಚಿತತೆ ಇದೆ:

- ಒಂದು ವೇಳೆ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್‌ನ್ನು 365 ದಿನಗಳವರೆಗೆ ಬಳಸದೇ ಇದ್ದರೆ, ಎಲ್ಲ ಬಹುಮಾನದ ಅಂಕಗಳು ಶೂನ್ಯವಾಗಿಬಿಡುತ್ತವೆ.

- ಒಂದು ವೇಳೆ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ ಖಾತೆಯು ಹಿಂಬಾಕಿಯನ್ನು ಹೊಂದಿದ್ದರೇ, ಅದು ನಿಲಂಬಿತಗೊಂಡಿದ್ದರೇ ಅಥವಾ ಬೇಪಾವತಿಯಾಗಿದ್ದರೇ, ಅಥವಾ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ ಖಾತೆಯು ಮೋಸದ ಮಾರ್ಗಗಳಿಂದ ಚಲಾಯಿಸಲಾಗುತ್ತಿದ್ದರೇ ಅಥವಾ ಹಾಗಾಗುತ್ತಿದೆ ಎಂದು ನಂಬಲು ಸಮಂಜಸವಾದ ಕಾರಣಗಳಿದ್ದರೇ, ಅದರ ಬಹುಮಾನದ ಅಂಕಗಳನ್ನು ರದ್ದುಪಡಿಸುವ ಅಥವಾ ನಿಲಂಬನದಲ್ಲಿಡುವ ಅಧಿಕಾರವು ಬ್ಯಾಂಕು ಹೊಂದಿರುತ್ತದೆ.

- ಒಂದು ವೇಳೆ ಕಾರ್ಡ್ ಧಾರಕ ಸಾವನ್ನಪ್ಪಿದರೆ, ಗಳಿಸಿ ವಿಮೋಚನೆಗೊಲಿಸಿಕೊಳ್ಳದ ಬಹುಮಾನದ ಅಂಕಗಳು ಮುಟ್ಟುಗೋಗು ಹಾಕಲ್ಪಡುತ್ತವೆ.

- ಒಂದು ವೇಳೆ ಒಂದು ವ್ಯವಹಾರವು ಮರುಪಾವತಿ/ಮರುಚಾರ್ಜ್/ವೆಚ್ಚ ಭರಿಸುವಿಕೆಯಿಂದ ಹಿಂತಿರುಗಿಸಲ್ಪಟ್ಟಿದ್ದರೇ, ಆ ವ್ಯವಹಾರದ ಮೊತ್ತವನ್ನು ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ ಖಾತೆಗೆ ಜಮೆಯಾಗತಕ್ಕದ್ದು. ಇಂತಹ ಸಂದರ್ಭದಲ್ಲಿ,ಅಂತಹ ವ್ಯವಹಾರಗಳ ಮೇಲಿಂದ ಒಟ್ಟು ಮಾಡಲ್ಪಟ್ಟ ಬಹುಮಾನದ ಅಂಕಗಳನ್ನು ಒಟ್ಟು ಅಂಕಗಳಿಂದ ಕಡಿಮೆ ಮಾಡಲಾಗುವುದು.

- ಒಂದು ವೇಳೆ ಬಹುಮಾನದ ಅಂಕಗಳನ್ನು ವಿನಿಯೋಗಿಸಿಕೊಳ್ಳುವ ಸೌಲಭ್ಯವನ್ನು ಸವಿದ ಕಾರ್ಡ್ ಧಾರಕನು ಅದರ ಓಚರ್ ಗಳನ್ನು ರದ್ದುಪಡಿಸಿದರೇ, ಆ ಅಂಕಗಳನ್ನು ಯಾವ ದರದಲ್ಲಿ ವಿನಿಯೋಗಿಸಿಕೊಳ್ಳಲಾಗಿತ್ತೋ, ಅದೇ ದರದಲ್ಲಿ ಬ್ಯಾಂಕಿನ ವಿವೇಚನೆಯ ಮೇರೆಗೆ ಮರುಸ್ಥಾಪಿಸಲೂ ಬಹುದು.

- ಎಸ್ ಬಿ ಎಮ್ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ ಸದಸ್ಯತ್ವವನ್ನು ನಿಲ್ಲಿಸಿದರೆ/ಮುಕ್ತಾಯಗೊಳಿಸಿದರೇ, ಕಾರ್ಡ್ ಧಾರಕನಿಂದ ತನ್ನ ಖಾತೆಗೆ ಕ್ಲೇಮು ಮಾಡಲು ಬಾಕಿ ಉಳಿಯುವ ಬಹುಮಾನದ ಅಂಕಗಳು ಮುಟ್ಟುಗೋಲು ಹಾಕಿಕೊಳ್ಳಲ್ಪಡುವವು.

e) ಒಂದು ವೇಳೆ ನಿಮಗೆ ಉತ್ಪನ್ನಗಳ/ಸೇವೆಗಳ ವಾಗ್ದಾನ ಮಾಡಿದ ಪೂರೈಕರದಾರ ಅದರಿಂದ ಹಿಂತೆಗೆದರೇ ಅಥವಾ ರದ್ದುಪಡಿಸದರೇ ಇಲ್ಲವೇ ಆ ಉತ್ಪನ್ನ/ಸೇವೆಗಳನ್ನು ಬದಲಿಸಿದರೆ ,ತಿದ್ದುಪಡಿಮಾಡಿದರೆ, ಅಂತಹುಗಳಿಗೆ ಬ್ಯಾಂಕು ಜವಾಬ್ದಾರಾಗುವುದಿಲ್ಲ.

f) ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರ್ಯಾಂಡೆಡ್ ಕ್ರೆಡಿಟ್ ಕಾರ್ಡ್ ಬಹುಮಾನದ ಅಂಕಗಳಲ್ಲಿ ಪಾಲ್ಗೊಳ್ಳುವ ವರ್ತಕ ಸಂಸ್ಥೆಯಿಂದ ಒದಗಿಸಲ್ಪಟ್ಟ ಯಾವುದೇ ಉತ್ಪನ್ನ/ಸೇವೆಗಳ ಗುಣಮಟ್ಟದ ಖಚಿತತೆಯ ಜವಾಬ್ದಾರಿಯನ್ನು ಬ್ಯಾಂಕು ತೆಗೆದುಕೊಳ್ಳುವುದಿಲ್ಲ.

g) ಕಾರ್ಡ್ ಅಂತರ್ಜಾಲ ಅಂದರೆ ವಿಸಾ/ಮಾಸ್ಟರ್ ಕಾರ್ಡ್/ರೂಪೇ ಯವರು ವರ್ತಕರ ವರ್ಗೀಕರಣ ಕೋಡ್ (ಮರ್ಚೆಂಟ್ ಕ್ಯಾಟೆಗೋರಿ ಕೋಡ್) ನ್ನು ವ್ಯಾಖ್ಯಾನಿಸಿದ ರೀತಿಯನ್ನು ಅವಲಂಬಿಸಿ ಪ್ರತೀ ಖರೀದಿಯನ್ನೂ ಒಂದು ವಿಶೇಷ ವರ್ಗಕ್ಕೆ ಸೇರಿಸಲಾಗುತ್ತದೆ. ಉದಾಹರಣೆಗೆ: ತಿಂಡಿ ಮತ್ತು ಪೇಯ, ಪ್ರಯಾಣ, ಮನೋರಂಜನೆ,ಕಿರಾಣಿ,ಬಿಲ್ಲು ಮತ್ತು ಸೇವೆಗಳು,ಇಂಧನ ಇತ್ಯಾದಿಗಳು

h) ನಿಮ್ಮ ಬಹುದಿನದ ಬಾಕಿಯೊಂದಿಗೆ ನಿಮ್ಮ ಬಹುಮಾನದ ಅಂಕಗಳನ್ನು ವಿನಿಯೋಗಿಸಿಕೊಳ್ಳಲು ಬ್ಯಾಂಕಿಗೆ ಅಧಿಕಾರವಿದೆ. ಇದು ಹಿಂಬಾಕಿಯನ್ನು ಉಳಿಸಿಕೊಂಡಂತಹ ಎಲ್ಲ ಕಾರ್ಡ್ ಧಾರಕರಿಗೂ ಅನ್ವಯಿಸುತ್ತದೆ.

i) ಈ ಬಹುಮಾನದ ಅಂಕಗಳನ್ನು, ವಿದ್ಯಾಭ್ಯಾಸ, ಬಿಲ್ಲು ಮತ್ತು ಸೇವೆಗಳು, ನಮ್ಮ ಜಾಲತಾಣದ ಭಾಗಿದಾರ ಅಥವಾ ಬ್ಯಾಂಕಿನಿಂದ ವರ್ಗೀಕರಣಗೊಂಡ ಮರ್ಚಂಟ್ ಕ್ಯಾಟೆಗೋರಿ ಕೋಡ್ ನಲ್ಲಿ ವ್ಯಾಖ್ಯಾನಿಸಿದಂತೆ ವಿಮೆಗಳಿಂದ ಬಹುಮಾನದ ಅಂಕಗಳನ್ನು ಗಳಿಸಬಹುದಾದಗಿದೆ. ಒಂದು ವೇಳೆ 5X ಬಹುಮಾನಕ್ಕೆ ಅರ್ಹರಾಗಿದ್ದರೇ, ಒಟ್ಟು ವರ್ಗಗಳ ಬಹುಮಾನದ ಅಂಕಗಳು 25,000 ಅಂಕಗಳನ್ನು ಮೀರದಿರಬಾರದು ಎಂಬ ಷರತ್ತಿಗೆ ಒಳಪಟ್ಟು ಈ ವರ್ಗಗಳಿಗೆ ಹೆಚ್ಚುವರಿ ಬಹುಮಾನದ ಅಂಕಗಳನ್ನು ವಾಗ್ದಾನಿಸಲಾಗುವುದು.

j) ಅನ್ವಯಿಕೆಯಾಗುವ ಕಾನೂನುಗಳನ್ನು, ನಿಯಮ ಮತ್ತು ಷರತ್ತುಗಳನ್ನು ಮತ್ತು ಬ್ಯಾಂಕಿನ ಯೋಜನೆಗಳನ್ನು ಪಾಲಿಸಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ನಿಮ್ಮ ಕ್ರೆಟಿಟ್ ಕಾರ್ಡ್ ಬಳಕೆಯನ್ನು ಕಾಲೀಕವಾಗಿ ವೀಕ್ಷಿಸಲು ಬ್ಯಾಂಕಿಗೆ ಅಧಿಕಾರವಿರುತ್ತದೆ. ಈ

ತನಿಖೆಯಲ್ಲಿ, ಒಂದೇ ಸ್ಟೇಟಮೆಂಟ್ ವೃತ್ತದಲ್ಲಿ ಅನುಮತಿಸಲ್ಪಟ್ಟ ಸಾಲದ ಮಿತಿಯನ್ನು ಮೀರಿ ಅಧಿಕ ಬಳಕೆಯಾಗಿದೆಯೇ,ಕೆಲ ಆಯ್ದ ವರ್ತಕರಲ್ಲಿಯೇ ಅನಿಯಮಿತ ಬಳಕೆ ಮಾಡಲ್ಪಟ್ಟಿದೆಯೇ, ಇತರ ಕ್ರೆಡಿಟ್ ಕಾರ್ಡು ಮತ್ತು ಸಾಲಗಳಿಗೆ ಸಂದಾಯವಾಗುತ್ತಿದೆಯೇ, ಉಳಿತಾಯ ಖಾತೆಗಳಿಗೆ ವರ್ಗಾವಣೆಯಾಗುತ್ತಿದೆಯೇ,ವರ್ತಕರ ಜೊತೆಗೆ ಯಾವುದಾದರೂ ಒಳೊಪ್ಪಂದವಾಗಿದೆಯೇ ಅಥವಾ ವೈಯಕ್ತಿಕವಾಗಿರದೆ /ವ್ಯಾಪಾರಿ ಉದ್ದೇಶಕ್ಕಾಗಿ ಬಳಕೆಯಾಗಿದೆಯೇ ಎಂಬುದನ್ನು ಶೋಧಿಸಬಹುದಾಗಿದೆ. ಇದ್ದಲ್ಲದೇ, ಇದರ ಗುಣ-ಲಕ್ಷಣಗಳ ದುರೂಪಯೋಗ, ಇದರ ವಾಗ್ದಾನಗಳ, ಅಥವಾ ಯೋಜನೆಗಳ ಮೂಲಕ ಅನಿಯಮಿತವಾಗಿ ಬಹುಮಾನದ ಅಂಕಗಳನ್ನು ಅಥವಾ ಹಣದ ಹಿಂಪಡೆತವನ್ನು ಮಾಡಿಕೊಳ್ಳಲಾಗುತ್ತಿದೆಯೇ ಎಂಬುದನ್ನೂ ತನಿಖೆ ಮಾಡಲಾಗುವುದು.

ಇಂತಹ ವಿಷಯವು ಗಮನಕ್ಕೆ ಬಂದಾಗ, ಕಾರ್ಡ್ ಧಾರಕನಿಗೆ ಯಾವುದೇ ಮುನ್ಸೂಚನೆ ನೀಡದೇ, ಅಂತಹ ಕ್ರೆಡಿಟ್ ಕಾರ್ಡ್ ಗಳನ್ನು ರದ್ದುಪಡಿಸಲು, ಮತ್ತು ಅಂತಹ ಹೆಚ್ಚುವರಿ ಕಾರ್ಡ್ ಗಳನ್ನು ತಡೆ ಹಿಡಿಯಲು,ಯಾವುದೇ ಹಣದ ಹಿಂಪಡೆತ ಅಥವಾ ಬಹುಮಾನಗಳನ್ನು ರದ್ದುಗೊಳಿಸಲು ಬ್ಯಾಂಕು ಅಧಿಕಾರ ಹೊಂದಿರುತ್ತದೆ.

ವರ್ತಕರ ವ್ಯವಹಾರಿಕ ವರ್ತನೆ ಮತ್ತು ಅಂತಹ ವರ್ತಕರಿಗೆ ಸಂಬಂಧಪಟ್ಟ ವಿಶೇಷ ಪ್ರಕರಣದ ಆಧಾರದ ಮೇಲೆ ಅವರನ್ನು ಮರುವರ್ಗೀಕರಣಗೊಳಿಸಲು ಬ್ಯಾಂಕು ಅಧಿಕಾರವನ್ನು ಕಾಯ್ದುಕೊಂಡಿರುತ್ತದೆ. ಈ ಮರುವರ್ಗೀಕರಣವು, ಅನ್ವಯಿಕೆಯಾಗುವ ಫೀ ಅಥವಾ ಆ ವರ್ಗದಲ್ಲಿ ವ್ಯವಹಾರಕ್ಕೆ ಸಂಬಂಧಪಟ್ಟ ಒಟ್ಟು ಪ್ರಾರಂಭಿಕ ಮಟ್ಟವನ್ನು ಕುರಿತಾಗಿ ಪರಿಣಾಮ ಬೀರಬಹುದು.

k) ಒಂದು ವೇಳೆ ರದ್ದತಿಯ ರೂಪದಲ್ಲಿ, ಅಥವಾ ವರ್ತಕ ಇ ಎಮ್ ಆಯ್ ವರ್ಗಾವಣೆಯ ರೂಪದಲ್ಲಿ ಅಥವಾ ಈ ಮೇಲೆ ಚರ್ಚಿತ ವಾಪಸಾತಿಯ ಸ್ವರೂಪದಲ್ಲಿ ಬಳಸಲಾದ ಅಂಕಗಳನ್ನು ವಸೂಲಿ ಮಾಡಬೇಕಾಗಿ ಬಂದರೇ, ಬ್ಯಾಂಕು ನಿಶ್ಚಿತಗೊಳಿಸುವ ಅದಕ್ಕೆ ಸಮನಾದ ಹಣದ ಮೊತ್ತವನ್ನು ಆ ಕಾರ್ಡ್ ಸದಸ್ಯನ ಮುಂದಿನ ಸ್ಟೇಟಮೆಂಟ್ ನಲ್ಲಿ ಸೇರಿಸಲಾಗುವುದು ಮತ್ತು ಅದನ್ನು ಆ ಕಾರ್ಡ್ ಧಾರಕನು ಸಂದಾಯ ಮಾಡಬೇಕಾಗಿ ಬರುತ್ತದೆ.

l) ಕಾರ್ಡು ಸ್ಥಗಿತಗೊಳಿಸಬೇಕು ಎಂಬ ವಿನಂತಿಯನ್ನು ಅದರ ಮೇಲಿರುವ ಋಣಾತ್ಮಕ ಬಹುಮಾನದ ಅಂಕಗಳ ಸಮಾನ ಮೊತ್ತದ ಸಂದಾಯವನ್ನು ಅವಲಂಬಿಸಿರುತ್ತದೆ.

l) ನಿಮ್ಮ ಹಿಂಬಾಕಿಯ ಬಿಲ್ಲುಗಳ ಪರವಾಗಿ ನಿಮ್ಮ ಬಹುಮಾನದ ಅಂಕಗಳನ್ನು ವಿನಿಯೋಗಗೊಳಿಸಿಕೊಳ್ಳಲು, ಬ್ಯಾಂಕು,ಒನ್ ಕಸ್ಟಮರ್ ಮತ್ತು/ಅಥವಾ ಬ್ಯಾಂಕಿನಿಂದ ಅಧಿಕೃತಗೊಳಿಸಲ್ಪಟ್ಟ ಸೇವೆಯನ್ನು ಒದಗಿಸುವಾತನಿಗೆ ಅಧಿಕಾರವಿರುತ್ತದೆ. ಇದು ಎಲ್ಲ ಕಟಬಾಕಿ ಮತ್ತು ಎನ್ ಪಿ ಎ ಗ್ರಾಹಕರಿಗೆ ಅನ್ವಯಿಸುತ್ತದೆ.

## 21. ಉಲ್ಲೇಖಿಸುವ ಪ್ರಕ್ರಿಯೆ

ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಬಳಸುವ ಗ್ರಾಹಕರಿಗೆ("ಕಾರ್ಡ್ ಧಾರಕ"/ "ನೀವು") ಮತ್ತು ಯಾವ ವ್ಯಕ್ತಿ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ (ಉಲ್ಲೇಖಿತ ಬಳಕೆದಾರ ಎಂದು ತನ್ನನ್ನು ತಾನು ಉಲ್ಲೇಖಿಸಿಕೊಳ್ಳಲು ಒಪ್ಪಿಕೊಳ್ಳುತ್ತಾನೋ ಅವನಿಗೆ ಈ ಉಲ್ಲೇಖಿತ ಪ್ರಕ್ರಿಯೆಯ ನಿಯಮ ಮತ್ತು ಷರತ್ತುಗಳು ಅನ್ವಯಿಕೆಯಾಗತಕ್ಕದ್ದು. ಈ ಉಲ್ಲೇಖಿತ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆ ಯು ಸಂಪೂರ್ಣವಾಗಿ ಸ್ವ ಇಚ್ಛೆಗೆ ಬಿಟ್ಟ ವಿಷಯವಾಗಿದೆ ಮತ್ತು ಒಬ್ಬ ಕಾರ್ಡ್ ಧಾರಕ ಭಾಗವಹಿಸುತ್ತಿದ್ದಾನೆ ಎಂದರೆ, ಅದು ಅವನು ತನ್ನ ಸ್ವ ಇಚ್ಛೆಯಿಂದಲೇ ಭಾಗವಹಿಸುತ್ತಿದ್ದಾನೆ ಎಂದೇ ಭಾವಿಸತಕ್ಕದ್ದು.

21.1. ಒಬ್ಬ ನವೀನ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಬಳಕೆದಾರ ನಿಮ್ಮ ಉಲ್ಲೇಖದ ಲಿಂಕ ಮೂಲಕ ಸೇರ್ಪಡೆಯಾದರೇ, ನೀವು (2500) ಎರಡು ಸಾವಿರದ ಐದ ನೂರು ಬೋನಸ್ ಬಹುಮಾನ ಅಂಕಗಳನ್ನು ಪಡೆಯುತ್ತೀರಿ.

21.2. ಈ ಉಲ್ಲೇಖಿತ ಬಳಕೆದಾರ ಒನ್ ಕಾರ್ಡ್ ಆಪ್ ನ್ನು ಡೌನಲೋಡ್ ಮಾಡಿಕೊಳ್ಳಬೇಕು ಮತ್ತು ಅವರು ತಮ್ಮ ಕಾಲ್ಪನಿಕ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಸಕ್ರೀಯಗೊಳಿಸಿಕೊಳ್ಳಬೇಕು. ಕೇವಲ ನಿಮ್ಮಿಂದ ಉಲ್ಲೇಖಿತ ಬಳಕೆದಾದರರು ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಯಶಸ್ವಿಯಾಗಿ ಸಕ್ರೀಯಗೊಳಿಸಿಕೊಂಡಾಗ ಮಾತ್ರ ನೀವು ಈ ಬೋನಸ್ ಅಂಕಗಳನ್ನು ಪಡೆಯುತ್ತೀರಿ.

21.3. ಒಂದು ವೇಳೆ ಉಲ್ಲೇಖಿತ ಬಳಕೆದಾರ ನಿಮ್ಮ ಉಲ್ಲೇಖಿತ ಲಿಂಕನ್ನು ಬಳಸಿಕೊಳ್ಳದೇ ಸೇರ್ಪಡೆಯಾದರೇ, ನೀವು ಈ ಬೋನಸ್ ಅಂಕಗಳನ್ನು ಕಳೆದುಕೊಳ್ಳುತ್ತೀರಿ.

21.4. ಈ ಉಲ್ಲೇಖಿತ ಬಳಕೆದಾರರ ಮುಖಾಂತರ ಗಳಿಸಿದ ಅಂಕಗಳು ನಿಮ್ಮ ತಿಂಗಳಿನ 5X ಬಹುಮಾನ ವರ್ಧಕಕ್ಕೆ ನಿಮ್ಮನ್ನು ಅರ್ಹಗೊಳಿಸುವುದಿಲ್ಲ.

21.5. ಒಂದು ವೇಳೆ ಒಬ್ಬರಿಗಿಂತ ಅಧಿಕ ಕಾರ್ಡ್ ಧಾರಕರು ಒಂದೇ ಹೆಸರನ್ನು ಉಲ್ಲೇಖಿಸಿದರೇ, ಆ ಹೊಸ ಗ್ರಾಹಕನಿಗೆ ಈ ಎರಡೂ ಕಾರ್ಡ್ ಧಾರಕರಿಂದ ಉಲ್ಲೇಖದ ಲಿಂಕ್ ಹೋಗುತ್ತವೆ ಮತ್ತು ಆ ಗ್ರಾಹಕ ಯಾವುದೇ ಒಂದು ಲಿಂಕ್ ನ್ನು ಬಳಸಿಕೊಂಡು ಗ್ರಾಹಕನಾಗಬಹುದು. ಆಗ ಅಂತಹ ಒಬ್ಬನೇ ಕಾರ್ಡ್ ಧಾರಕನಿಗೆ ಉಲ್ಲೇಖದ ಅಂಕಗಳು ಲಭಿಸುವವು.

21.6. ಈ ಉಲ್ಲೇಖಿಸುವ ಲಿಂಕ್ ಕೇವಲ 30 ದಿನಗಳಿಗೆ ಮಾತ್ರ ವೇದ್ಯವಾಗಿರುತ್ತದೆ. ಒಂದು ವೇಳೆ ಉಲ್ಲೇಖಿತ ಬಳಕೆದಾರ ಈ 30 ದಿನಗಳ ನಂತರ ಸೇರಿಕೊಂಡರೆ, ಕಾರ್ಡ್ ಧಾರಕನಿಗೆ ಇದಕ್ಕಾಗಿ ಯಾವುದೇ ಅಂಕ ದೊರೆಯುವುದಿಲ್ಲ.

21.7 ಶಿಫಾರಸ್ಸಿನ ಬಹುಮಾನದ ಮೊತ್ತ ಮತ್ತು ಅನ್ವಯಿಕೆಯಾಗುವ ಸೀಮೆಯ ಜೊತೆಗೆ, ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಶಿಫಾರಸ್ಸು ಮಾಡಲ್ಪಟ್ಟ ಬಳಕೆದಾರರಿಗೆ ಜಾರಿಮಾಡುವ ನಿರ್ಣಯವು ಬ್ಯಾಂಕಿನ ಸಂಪೂರ್ಣ ವಿವೇಚನೆಯ ವಿಷಯವಾಗಿರುತ್ತದೆ.

21.8. **ಮಹತ್ವದ ವಿಷಯ:** ಕಾರ್ಡ್ ಧಾರಕ ಮತ್ತು ಶಿಫಾರಸ್ಸು ಮಾಡಲ್ಪಟ್ಟ ವ್ಯಕ್ತಿಗಳ ಮಧ್ಯೆ ವೈಯಕ್ತಿಕ ವಿವರಗಳ ಹಂಚಿಕೆ:
ಈ ಶಿಫಾರಸ್ಸಿನ ಪ್ರಕ್ರಿಯೆಯ ಭಾಗವಾಗಿ, ಕಾರ್ಡ್ ಧಾರಕನಿಗೆ ಶಿಫಾರಸ್ಸಿನ ಲಿಂಕ್ ನ್ನು ಬಳಸಿಕೊಂಡು ಒಂದು ಯಶಸ್ವಿ ಶಿಫಾರಸ್ಸು ಘಟಿಸಿತು ಅಂತ ಬಹುಮಾನದ ಅಂಕಗಳು ದೊರೆಯಬೇಕಾದರೇ, ಆ ವ್ಯಕ್ತಿ ಶಿಫಾರಸ್ಸು ಮಾಡಿದ ವ್ಯಕ್ತಿಯು ಆ ಲಿಂಕ್ ನ್ನು ಮನ್ನಿಸಿ, ಅದನ್ನು ಅರ್ಥೈಸಿಕೊಂಡು , ಆ ಆಮಂತ್ರಣವನ್ನು ಒಪ್ಪಿಕೊಂಡು, ತನ್ನ ಕಾಲ್ಪನಿಕ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಸಕ್ರೀಯಗೊಳಿಸಿಕೊಂಡರೇ, ಆ ಶಿಫಾರಸ್ಸನ್ನು ಮಾಡಿದ ಕಾರ್ಡ್ ಧಾರಕನಿಗೆ ಈ ವ್ಯಕ್ತಿ ತನ್ನ ಕಾರ್ಡ್ ನ್ನು ಸಕ್ರೀಯಗೊಳಿಸಿಕೊಂಡಿದ್ದಾನೆ ಎಂಬ ಸಂದೇಶ ಬರುತ್ತದೆ. ಒಂದು ವೇಳೆ ಈ ಶಿಫಾರಸ್ಸು ಮಾಡಲ್ಪಟ್ಟ ವ್ಯಕ್ತಿಯು ತನ್ನ ವೈಯಕ್ತಿಕ ವಿವರಗಳು ಇನ್ನೊಬ್ಬರೊಡನೆ ಹಂಚಿ ಹೋಗುವುದನ್ನು ತಡೆಯಬೇಕು ಎಂದು ಇಚ್ಛಿಸಿದರೆ, ಆ ಶಿಫಾರಸ್ಸು ಮಾಡಲ್ಪಟ್ಟ ವ್ಯಕ್ತಿಯು, ಆ ಶಿಫಾರಸ್ಸಿನ ಲಿಂಕ್ ನ್ನು ಬಳಸದೇ, ತಾನೇ ವೈಯಕ್ತಿಕವಾಗಿ ಅರ್ಜಿ ಸಲ್ಲಿಸಬಹುದು.

ಈ ರೀತಿಯಿಂದ ಈ ಶಿಫಾರಸ್ಸಿನ ಲಿಂಕ್ ಕಳುಹಿಸುವುದರಿಂದ, ಅದನ್ನು ಸ್ವೀಕರಿಸಿದ ಶಿಫಾರಸ್ಸು ಮಾಡಲ್ಪಟ್ಟ ವ್ಯಕ್ತಿ ಅದನ್ನು ಸಮ್ಮಾನಿಸಿ, ಅರ್ಥೈಸಿಕೊಂಡು ಅದನ್ನು ಒಪ್ಪಿದಾಗ, ತನಗೆ ಶಿಫಾರಸ್ಸು ಮಾಡುತ್ತಿರುವ ಕಾರ್ಡ್ ಧಾರಕನಿಗೆ ಇದರ ಪರವಾಗಿ ಬೋನಸ್ ಪಾಯಿಂಟ್ ರೂಪದಲ್ಲಿ ಬಹುಮಾನದ ಅಂಕಗಳು ದೊರೆಯುತ್ತವೆ ಎಂಬುದನ್ನೂ ಆ ವ್ಯಕ್ತಿ ಅರಿತುಕೊಳ್ಳುತ್ತಾನೆ. ಒಂದು ವೇಳೆ ಕಾರ್ಡ್ ಧಾರಕನಿಗೆ ಈ ವಿಷಯವನ್ನು ಶಿಫಾರಸ್ಸು ಮಾಡಿದ ವ್ಯಕ್ತಿಯ ಜೊತೆಯಲ್ಲಿ ಹಂಚಿಕೊಳ್ಳುವುದು ಇಷ್ಟವಾಗದಿದ್ದರೇ, ಅವನು ಆ ವ್ಯಕ್ತಿಗೆ ಈ ಶಿಫಾರಸ್ಸಿನ ಲಿಂಕ್ ಕಳುಹಿಸಬಾರದು. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಅರ್ಜಿ ಸ್ವೀಕರಿಸಲ್ಪಟ್ಟಿದೆಯೋ ಅಥವಾ ತಿರಸ್ಕರಿಸಲ್ಪಟ್ಟಿದೆಯೋ ಎಂಬುದನ್ನು ಕೇವಲ ಶಿಫಾರಸ್ಸು ಮಾಡಲ್ಪಟ್ಟ ವ್ಯಕ್ತಿಗೇ ತೀಳಿಸಲಾಗುವುದೇ ವಿನಃ ಕಾರ್ಡ್ ಧಾರಕನಿಗೆ ಅಲ್ಲ. ಕೇವಲ ಯಶಸ್ವಿಗೊಂಡ ಶಿಫಾರಸ್ಸುಗಳ ಮಾಹಿತಿಯು ಕಾರ್ಡ್ ಧಾರಕನಿಗೆ ಅವನ ಬಹುಮಾನದ ಅಂಕಗಳ ಜೊತೆಗೆ ಹಂಚಿಕೊಳ್ಳಲಾಗುವುದು.

21.9. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಈ ಶಿಫಾರಸ್ಸಿನ ಯೋಜನೆಯಡಿಯಲ್ಲಿ ಅಥವಾ ಅದರ ಹೊರತಾಗಿ, ಅದರ ಲಾಭವನ್ನು ಗಿಟ್ಟಿಸುವ ಉದ್ದೇಶದಿಂದ ಯಾವುದಾದರೂ ಮೋಸದ ಕೃತ್ಯಗಳು ನಡೆದಿವೆ ಎಂದು ಗುರಿತಿಸಲ್ಪಟ್ಟರೇ, ಆ ಲಾಭದಿಂದ ಆ ಕಾರ್ಡ್ ಧಾರಕನನ್ನು ವಂಚಿಸುವ ಅಧಿಕಾರ ಬ್ಯಾಂಕ್ ಇಟ್ಟುಕೊಂಡಿರುತ್ತದೆ.

21.10. ಒಂದು ತಿಂಗಳ ಅವಧಿಯಲ್ಲಿ ನೀವು ಗರಿಷ್ಠ 10 ಶಿಫಾರಸ್ಸಿನ ಬಹುಮಾನದ ಅಂಕಗಳನ್ನು ಗಳಿಸಬಹುದು ಮತ್ತು ಒಂದು ವರ್ಷದ ಅವಧಿಯಲ್ಲಿ ಗರಿಷ್ಠ 100 ಶಿಫಾರಸ್ಸಿನ ಅಂಕಗಳನ್ನು ಗಳಿಸಬಹುದು.

21.11 ಕಾಲಕಾಲಕ್ಕೆ, ಆಗ ಜಾರಿಯಲ್ಲಿರುವ ಕಾನೂನಿನ ಅನ್ವಯ ಈ ಶಿಫಾರಸ್ಸಿನ ಯೋಜನೆಯನ್ನು ಮತ್ತು ಅದರ ನಿಯಮ ಹಾಗೂ ಷರತ್ತುಗಳನ್ನು ಬದಲಿಸುವ,ನಿಲಂಬನಗೊಳಿಸುವ ಅಥವಾ ಮಾರ್ಪಾಡು ಮಾಡುವ ಸಂಪೂರ್ಣ ವಿವೇಚನೆಯನ್ನು ಬ್ಯಾಂಕು ಹೊಂದಿರುತ್ತದೆ.

**22. ಅಂಶಿಕವಾಗಿ ಸುರಕ್ಷಿತವಾದ ಕ್ರೆಡಿಟ್ ಕಾರ್ಡ್**

22.1. ಅಂಶಿಕವಾಗಿ ಸುರಕ್ಷಿತವಾದ ಕ್ರೆಡಿಟ್ ಕಾರ್ಡ್ ಎಂದರೆ(ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ) ಎಂಬುದು ಕಾರ್ಡ್ ಧಾರಕರು(ನೀವು)ಬ್ಯಾಂಕಿನಲ್ಲಿ ಕಾಯ್ದುಕೊಂಡ ಒಂದು ನಿಗಧಿತ ಠೇವಣಿಯ ಬದಲಾಗಿ ಒದಗಿಸಲಾಗುವ ಕ್ರೆಡಿಟ್ ಕಾರ್ಡ್ ಇದಾಗಿರುತ್ತದೆ.

22.2. ಈ ನಿಯಮಗಳು ಬ್ಯಾಂಕಿನಿಂದ ಒದಗಿಸಲ್ಪಟ್ಟ ಅಂಶಿಕವಾಗಿ ಸುಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗೆ ಅನ್ವಯಿಸುತ್ತವೆ ಮತ್ತು ಅದನ್ನು ನಿಯಂತ್ರಿಸುತ್ತವೆ. ಈ ನಿಯಮಗಳು ಬ್ಯಾಂಕಿನ ವೆಬ್ ಸಾಯಿಟ್ ಅಂದರೆ(www.sbmbank.co.in) ನಲ್ಲಿ ಬ್ಯಾಂಕಿನ ನಿಗಧಿತ ಠೇವಣಿಯನ್ನು ಕುರಿತಾಗಿ ಇರುವ (**ಪ್ರಾಥಮಿಕ ನಿಯಮ ಮತ್ತು ಷರತ್ತುಗಳು**) ಮತ್ತು ಕಾರ್ಡ್ ಸೌಲಭ್ಯವನ್ನು ನಿಯಂತ್ರಿಸುವ ನಿಯಮ ಹಾಗೂ ಷರತ್ತುಗಳನ್ನು ಹೊರತು ಪಡಿಸಿ ಇವೆಯೇ ಹೊರತು ಅದನ್ನು ಅಲ್ಲಗಳೆಯುತ್ತ ಇಲ್ಲ. ಎಲ್ಲಿಯ ವರೆಗೆ ಅಂದರೆ, ಒಂದು ವೇಳೆ ಈ ನಿಯಮ ಮತ್ತು ಷರತ್ತುಗಳಿಗೂ ಹಾಗೂ ಪ್ರಾಥಮಿಕ ನಿಯಮ ಮತ್ತು ಷರತ್ತುಗಳಿಗೂ ಭಿನ್ನಾಭಿಪ್ರಾಯ ಉಂಟಾದರೆ, ಈ ನಿಯಮ ಹಾಗೂ ಷರತ್ತುಗಳೇ ಮೇಲುಗೈ ಸಾಧಿಸುವವು.

22.3. ಈ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಸೌಲಭ್ಯವನ್ನು ಹೊಂದಬೇಕಾದರೆ, ಬ್ಯಾಂಕು ತನ್ನ ಒನ್ ಕಾರ್ಡ್ ಸಂಚಾರಿ ಆಪ್ ("ಒನ್ ಕಾರ್ಡ್ ಆಪ್") ಮೂಲಕ ಸೂಚಿಸುವ ಅಥವಾ ಕನಿಷ್ಠ ರೂ.5000/ ಗಳ ನಿಗಧಿತ ಠೇವಣಿಯನ್ನು ಕಾಯ್ದುಕೊಂಡಿರತಕ್ಕದ್ದು. ಒಂದು ವೇಳೆ ಒಬ್ಬ ವ್ಯಕ್ತಿ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗಾಗಿ ಅರ್ಜಿ ಸಲ್ಲಿಸುತ್ತಿದ್ದರೇ, ಇದೇ ಒನ್ ಕಾರ್ಡ್ ಆಪ್ ಮೂಲಕವೇ ಬ್ಯಾಂಕಿನಲ್ಲಿ ನಿಗಧಿತ ಠೇವಣಿಯನ್ನು ಇಡಬಹುದಾದಗಿದೆ ಎಂಬುದನ್ನು ತಿಳಿದುಕೊಳ್ಳಲೇ ಬೇಕು. ಎಲ್ಲ ಕಾಲಕ್ಕೂ ಒಬ್ಬ ಅರ್ಜಿದಾರನಿಗೆ ಒಂದು ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಒದಗಿಸಲಾಗುವುದು.

22.4. ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ ಎನ್ನುವ ಅಂಶಿಕವಾಗಿ ಸುರಕ್ಷಿತವಾದ ಕಾರ್ಡಿನ ಗರಿಷ್ಠ ಸಾಲದ ಮಿತಿಯು, ಕನಿಷ್ಠ ಸಾಲದ ಮಿತಿಯು ರೂ. 5000/ ಇರುತ್ತದೆ ಎಂಬುವ ಷರತ್ತಿಗೆ ಒಳಪಟ್ಟು, ಆ ನಿಗಧಿತ ಠೇವಣಿಯ ಎರಡನೂರಾ ಐವತ್ತು ಪ್ರತಿಶತ (250%) ದ ವರೆಗೂ ಅಥವಾ ಬ್ಯಾಂಕು ನಿಶ್ಚಿಯಿಸುವ ಕನಿಷ್ಠ ಮಿತಿ ಇದ್ದು ಗರಿಷ್ಠ ಏರಡು ಲಕ್ಷದ ಐವತ್ತು ಸಾವಿರ ರೂಪಾಯಿವರೆಗೆ(ರೂ.2,50,000/) ಇರುತ್ತದೆ . ಕಾಲಕಾಲಕ್ಕೆ ಈ ಸಾಲದ ಮಿತಿಯು ಬ್ಯಾಂಕಿನ ಸಂಪೂರ್ಣ ವಿವೇಚನೆಗೆ ಒಳಪಟ್ಟು ಬದಲಾಗಬಹುದು ಮತ್ತು ಈ ವಿಷಯವನ್ನು ನಿಮಗೆ ಬ್ಯಾಂಕು ತನಗೆ ಸರಿ ಎನಿಸಿದ ಮಾಧ್ಯಮ ಮತ್ತು ಪದ್ಧತಿಯಿಂದ ನಿಮಗೆ ತಿಳಿಸತಕ್ಕದ್ದು.

22.5. ಕಾಲಕಾಲಕ್ಕೆ ಬ್ಯಾಂಕು ನಿಗಧಿ ಪಡಿಸುವ ರೀತಿಯಲ್ಲಿ ಸೂಕ್ತ ದಸ್ತಾವೇಜನ್ನು ಕಾರ್ಯಾನ್ವಿತಗೊಳಿಸುತ್ತ, ನಿಗಧಿತ ಪದ್ಧತಿಯಲ್ಲಿ ನೀವು ನಿಗಧಿತ ಠೇವಣಿಯನ್ನು ಇರಿಸತಕ್ಕದ್ದು. ಈ ರೀತಿಯಲ್ಲಿ ಬ್ಯಾಂಕಿನಲ್ಲಿ ಇರಿಸಿದ ನಿಮ್ಮ ನಿಗಧಿತ ಠೇವಣಿಯ ಕಾಲಾವಧಿಯು ಗರೀಷ್ಠ ಹನ್ನೆರಡು(12) ತಿಂಗಳಿನದಾಗಿರತಕ್ಕದ್ದು ಮತ್ತು ಸ್ವಯಂಚಾಲಿತವಾಗಿ ನವೀಕರಣಗೊಳ್ಳುವ ರೀತಿಯಲ್ಲಿರತಕ್ಕದ್ದು ಮತ್ತು ದಿ. 14 ಜೂನ 2023 ರ ನಂತರ ಇರಿಸಿಲಾದ ಇಂತಹ ಠೇವಣಿಯ ಕಾಲಾವಧಿಯು ಗರಿಷ್ಠ 390 ದಿನಗಳದ್ದಾಗಿದ್ದು ಸ್ವಯಂಚಾಲಿತವಾಗಿ ನವೀಕರಣಗೊಳ್ಳುವ ರೀತಿಯಲ್ಲಿರತಕ್ಕದ್ದು. ಈ ರೀತಿಯಲ್ಲಿ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗೆ ಅರ್ಜಿ ಸಲ್ಲಿಸಿ

ಅದರ ಷರತ್ತುಗಳಿಗೆ ಒಪ್ಪುವುದರ ಮೂಲಕ ನೀವು ಈ ನಿಗಧಿತ ಠೇವಣಿಯು ಸ್ವಯಂ ಚಾಲಿತವಾಗಿ, ಪ್ರತೀ 12 ತಿಂಗಳುಗಳಿಗೆ ಅಥವಾ ದಿ. 14 ಜೂನ 2023 ರ ನಂತರ 390 ದಿಗಳಲ್ಲಿ ನವೀಕರಣಗೊಳ್ಳಲಿ ಎಂಬುವುದಕ್ಕೆ ನಿಮ್ಮ ಒಪ್ಪಿಗೆ ಸೂಚಿಸುತ್ತೀರಿ. ನಿಮ್ಮಿಂದ/ಬ್ಯಾಂಕಿನಿಂದ ಈ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ರದ್ದತಿಯ ಸಂದರ್ಭದಲ್ಲಿ, ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗೆ ಜೋಡಿಸಲ್ಪಟ್ಟ ನಿಗಧಿತ ಠೇವಣಿಯು ಮುರಿಸಲ್ಪಡುವುದು.

22.6. ಈ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ ನಿಮಗೆ ಜಾರಿಯಾದ ಮೇಲೆ, ಇಡಲಾದ ನಿಗಧಿತ ಠೇವಣಿಯ ಪೂರ್ಣ ಅಥವಾ ಅಂಶಿಕ ಭಾಗದ ಮೇಲೆ ಋಣಭಾರ ಅಥವಾ ಹೊಂದಾಣಿಕೆ ಮಾಡಿಕೊಳ್ಳುವ ಬ್ಯಾಂಕಿನ ಹಕ್ಕಿನ ಜೊತೆಗೆ, ಬ್ಯಾಂಕು ನಿಮ್ಮ ಅಂಶಿಕವಾಗಿ ಸುರಕ್ಷಿತವಾಗಿರುವ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಎಲ್ಲ ಬಾಕಿ ಹಣದ ಸಂದಾಯವಾಗಿ ಅದು ಕೊನೆಗೊಳ್ಳುವವರೆಗೆ ಆ ಠೇವಣಿ ಮೊತ್ತ ಮತ್ತು ಅದರ ಮೇಲೆ ನೀವು ಗಳಿಸುವ ಬಡ್ಡಿಯ ಮೇಲೆಯೂ ತನ್ನದೆಯಾದ ಋಣಭಾರದ ಮತ್ತು ಹೊಂದಾಣಿಕೆಮಾಡಿಕೊಳ್ಳುವ ಹಕ್ಕನ್ನು ಸಾಧಿಸತಕ್ಕದ್ದು. ಒಂದು ವೇಳೆ ಬ್ಯಾಂಕಿನಲ್ಲಿ ನಿಮ್ಮ ಮೊದಲಿನ ನಿಗಧಿತ ಠೇವಣಿಗಳು ಇದ್ದಲ್ಲಿ, ಅವುಗಳನ್ನು ಈ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗೆ ಜೋಡಿಸಲಾಗುವುದಿಲ್ಲ. ಇದಕ್ಕೆ ಜೋಡಿಸಲ್ಪಟ್ಟ ನಿಗಧಿತ ಠೇವಣಿಯ ಮೇಲೆ ಋಣಭಾರವನ್ನು ಸಾಧಿಸಿದ ಮೇಲೆಯೇ ಈ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ ಸಕ್ರೀಯಗೊಳ್ಳತಕ್ಕದ್ದು ಮತ್ತು ನಿಮ್ಮಿಂದ ಉಪಯೋಗಕ್ಕೆ ತರತಕ್ಕದ್ದು.

22.7. ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ ಸಂದರ್ಭದಲ್ಲಿ, ಆ ಕಾರ್ಡ ಖಾತೆಯ ಮೇಲೆ ಬಾಕಿ ಇರುವ ಸಂಪೂರ್ಣ ಶೇಷ, ಆ ಕಾರ್ಡಿನ ಮೂಲಕ ಮಾಡಿದ ವ್ಯವಹಾರದಿಂದ ಉತ್ಪತ್ತಿಯಾದ ಯಾವುದೇ ಬಾಕಿ ಮೊತ್ತ ಅದರ ಮೇಲಿನ ಬಡ್ಡಿ ಮತ್ತು ಇತರ ಶುಲ್ಕಗಳು , ಇನ್ನೂ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಮೇಲೆ ನೀವು ಅದನ್ನು ಬಳಸುವ ಸಂದರ್ಭದಲ್ಲಿ ವಿಧಿಸದೇ ಇರುವ ಈ ಕೆಳಗೆ ಸೂಚಿತ ಚಾರ್ಜ್ ಗಳನ್ನು ನಿಮ್ಮ ಭದ್ರತೆಗಳ ಮೇಲೆ/ನಿಗಧಿತ ಅಥವಾ ಮುದ್ದತಿ ಠೇವಣಿಯ ಮೇಲೆ/ನಿಮ್ಮ ಹೆಸರಲ್ಲಿ ಸಂಪೂರ್ಣವಾಗಿದ್ದು ಬ್ಯಾಂಕಿನಿಂದ ಮನ್ನಣೆ ಪಡೆದಂತಹ ಸ್ವತ್ತಿನ ಮೇಲೆ, ಬ್ಯಾಂಕು ನಿನಧಿತಗೊಳಿಸುವ ರೀತಿಯಲ್ಲಿ ಒಂದು ಗಿರವಿ/ಅಡಮಾನ/ಋಣಭಾರದ ಮಾಧ್ಯಮದಿಂದ ಭದ್ರಪಡಿಸಿಕೊಳ್ಳಲಾಗುವುದು. ಈ ಭದ್ರತೆಯ ರಚನೆಗೆ ಬೇಕಾದಬ್ಯಾಂಕಿಗೆ ಸಮಾಧಾನವಾಗುವ ರೀತಿಯಲ್ಲಿ ಮತ್ತು ರೂಪದಲ್ಲಿ ನೀವು ದಸ್ತಾವೇಜುಗಳನ್ನು ಕಾರ್ಯಾನ್ವಿತಗೊಳಿಸತಕ್ಕದ್ದು. ಈ ತರಹದ ಭದ್ರತೆಯನ್ನು ಮತ್ತು ಇತರ ಮುದ್ರಾಂಕ ಶುಲ್ಕದಂತಹ ಔಪಚಾರಿಕತೆಗಳನ್ನು ಪೂರ್ಣಗೊಳಿಸಲು ತಗಲುವ ವೆಚ್ಚವನ್ನು ಸೇರಿದಂತೆ ಆದರೆ ಅದಕ್ಕೇ ಸೀಮಿತಗೊಳ್ಳದ ವೆಚ್ಚಗಳನ್ನು ನೀವೇ ಭರಿಸತಕ್ಕದ್ದು.

22.8. ಈ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ ನ್ನು ಸ್ವಯಂಚಾಲಿತವಾಗಿ ನವೀಕರಣಗೊಳಿಸದಂತೆ ವಿಶೆಷವಾಗಿ ಸಲಹೆಗಳನ್ನು ನೀಡಿದ್ದರೇ, ನೀವು ನಿಮ್ಮ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡನ್ನು ಸ್ಥಗಿತಗೊಳಿಸಲು ಕೋರಿದ್ದೀರಿ ಎಂದೇ ಪರಿಗಣಿತಕ್ಕದ್ದು ಎನ್ನುವ ಸನ್ನಿವೇಶ ಒಂದನ್ನು ಬಿಟ್ಟರೇ, ಅದಕ್ಕೆ ಜೊಡಿಕೆಯಾದ ನಿಗಧಿತ ಠೇವಣಿಯು ಸ್ವಯಂಚಾಲಿತವಾಗಿ ನವೀಕರಣಗೊಂಡಾಗೆಲ್ಲಅದರ ಮೇಲಿನ ಬಡ್ಡಿಯ ದರಗಳು ಆಗ ಚಾಲ್ತಿಯಲ್ಲಿದ್ದ ಬಡ್ಡಿಯ ದರಗಳಾಗಿರತಕ್ಕದ್ದು

22.9. ಒಂದು ವೇಳೆ ಇಂತಹ ನಿಗಧಿತ ಠೇವಣಿಗಳು ಹನ್ನೆರಡು ತಿಂಗಳ (12) ಕಾಲಾವಧಿ ಅಥವಾ ದಿ: 14 ಜೂನ 2023 ರ ನಂತರ ರಚನೆಯಾದ ಈ ಠೇವಣಿಗಳ 390 ದಿನಗಳ ಕಾಲಾವಧಿಯ ಪೂರ್ವದಲ್ಲಿ ಅವುಗಳು ಮುರಿಸಲ್ಪಟ್ಟರೇ, ಅಂತಹ ನಿಗಧಿತ ಠೇವಣಿಯು ರಚನೆಯಾದ ದಿನದಿಂದ ಅದನ್ನು ಮುರಿಸಲ್ಪಟ್ಟ ದಿನದವರೆಗೂ ಗಳಿಸಿದ ಬಡ್ಡಿ ಮೇಲೆ, 1% ದರದಂತೆ ಕಾಲಾವಧಿ ಆಧಾರಿತ ದಂಡವನ್ನು ವಿಧಿಸಲಾಗುವುದು

22.10. ಒಂದು ಬಾರಿ ಈ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ ನೀಮಗೆ ಜಾರಿಯಾಯಿತು ಎಂದ ಮೇಲೆ, ಅದಕ್ಕೆ ಜೊಡಣೆಯಾದ ನಿಗಧಿತ ಠೇಣಿಯಿಂದ ನೀವು ಅಂಶಿಕವಾಗಿ ಮೊತ್ತವನ್ನು ಹಿಂತೆಗೆಯುವಂತಿಲ್ಲ. ಈ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ಪಡೆಯಲು ಇರಿಸಲಾದ ನಿಗಧಿತ ಠೇವಣಿಗಳು ಎಲ್ಲಿಯವರೆಗೆ ಮುರಿಸಲ್ಪಡುವುದಿಲ್ಲವೋ ಅಲ್ಲಿಯವರೆಗೆ ಸ್ವಯಂಚಾಲಿತವಾಗಿ ನವೀಕರಣಗೊಳ್ಳುತ್ತಲೇ ಹೋಗತಕ್ಕದ್ದು.

ಈ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನಿಮೆ ಜಾರಿಯಾಗುವುದು ನೀವು ಯಶಸ್ವಿಯಾಗಿ ಮಾಡಿದ ನಿಗಧಿತ ಠೇವಣಿಯನ್ನು ಅವಲಂಬಿಸಿದೆ.

22.11. ಒಬ್ಬ ವೈಯಕ್ತಿಕ ವ್ಯಕ್ತಿಯ ಹೆಸರಲ್ಲಿ ಮಾಡಿದಂತಹ ನಿಗಧಿತ ಠೇವಣಿಯು ಈ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ ಭದ್ರತೆಯಾಗಿ ನಿಲ್ಲಲು ಅರ್ಹವಾಗಿರುತ್ತವೆ ಮತ್ತು ಇವುಗಳನ್ನು ಒನ್ ಕಾರ್ಡ್ ಆಪ್ ನಿಂದ ರಚಿಸಬೇಕು. ಈ ನಿಗಧಿತ ಠೇವಣಿಗಳಿಗೆ ನಾಮಾಂಕನದ ಸೌಲಭ್ಯವಿದೆ.

22.12. ಈ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ರದ್ದತಿ/ಹಿಂತೆಗೆತ/ಮುಂದೊರೆಸದೇ ಹೋಗುವಿಕೆ ಅಥವಾ ಆ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಮೇಲೆ ಬಾಕಿ ಇರುವ ಮೊತ್ತವನ್ನು ಪಾವತಿಸಲು ಅದರಲ್ಲಿ ಸೂಚಿತ 60 ದಿನಗಳ ಕೊನೆಯ ದಿನಾಂಕದವರೆಗೂ ಕಟ್ಟದೇ ಹೋದಲ್ಲಿ, ಅಥವಾ ನಿಮ ಮೃತ್ಯುವಿನ ಕಾರಣದಿಂದ ಸ್ಥಗಿತಗೊಂಡ ಸಂದರ್ಭದಲ್ಲಿ, ಅದಕ್ಕೆ ಜೊಡಿಕೆಯಾದ ನಿಗಧಿತ ಠೇವಣಿಯನ್ನು ಮತ್ತು ಆವರೆಗೂ ಅದು ಗಳಿಸಿದ ಬಡ್ಡಿಯನ್ನು ತಕ್ಷಣದಿಂದ ಮುರಿಸಿ ಈ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿನ ಮೇಲಿನ ಬಾಕಿ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳುವ ಅರ್ಹತೆಯನ್ನು ಬ್ಯಾಂಕು ಹೊಂದಿರತಕ್ಕದ್ದು. ಈ ಹೊಂದಾಣಿಕೆಯ ನಂತರ ಮಿಕ್ಕಿದ ಹಣವನ್ನು ನಿಗೆ ಸಂದಾಯ ಮಾಡಲಾಗುವುದು ಮತ್ತು ಹೊಂದಾಣಿಕೆ ಮಾಡಲಾಗದೆ ಬಾಕಿ ಉಳಿದ ಮೊತ್ತವನ್ನು ನೀವು ಬ್ಯಾಂಕಿಗೆ ಭರಿಸಬೇಕು. ನಿಮ್ಮ ದುರದೃಷ್ಟಕರ ಮೃತ್ಯುವಿನ ಸಂದರ್ಭದಲ್ಲಿ, ಈ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಸ್ಥಗಿತಗೊಳ್ಳುವುದು. ಮುಂದೆಸಾಗುತ್ತ, ಒಂದು ವೇಳೆ ಬಾಕಿ ಮೊತ್ತದ ಮರುಪಾವತಿ ನಿಮ್ಮಿಂದ ಆಗಿರದೇ ಹೋದರೆ, ನೀವು ಹೋಮದಿದಂತಹ ನಿಮ್ಮ ಅಂಶಿಕವಾಗಿ ಸುರಕ್ಷಿತವಾದ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನಿಷ್ಕ್ರೀಯಗೊಳಿಸಲಾಗಿದೆ ಎಂದು ಆರ ಬಿ ಆಯ್ ದಿಂದ ಅಧಿಕೃತಗೊಳಿಸಲ್ಪಟ್ಟ ಕ್ರೆಡಿಟ್ ಇನಫಾರಮೇಶನ್ ಕಂಪನಿ(ಸಿ ಆಯ್ ಎಸ್) ಗಳಿಗೆ ತಿಳಿಸಲಾಗುವುದು.

22.13. ನಿಗದಿತ ಠೇವಣಿಗಳನ್ನು ಸಂದರ್ಭದಲ್ಲಿರುವ ನಿಯಮ ಮತ್ತು ಷರತ್ತುಗಳ ಅನ್ವಯ, ಇ ಕೆ ವಾಯ್ ಸಿ ಆಧಾರಿತ ಪರಿಶೀಲನೆಗೆ ಒಳಪಟ್ಟು ಒನ್ ಟಾಯಿಮ ಪಾಸವರ್ಡ(ಓ ಟಿ ಪಿ) ಮೂಲಕ ತೆರೆದಂತಹ ನಿಗಧಿತ ಠೇವಣಿ ಯಲ್ಲಿ, ಮನ್ನಣೆ ಪಡೆದ ಕೆ ವಾಯ್ ಸಿ ಪರಿಶೀಲನೆ ಅಥವಾ ಕಸ್ಟಮರ್ ಡೆಲಿಜೆನ್ಸ್ ನ್ನು ನಿಗಧಿತ ಠೇವಣಿಯನ್ನು ಮಾಡಿದ ಒಂದು ವರ್ಷದ ಅವಧಿಯಲ್ಲಿ ಯಾವುದೇ ಕಾರಣಕ್ಕಾಗಿ ಮಾಡದೇ ಇರುವುದು, ಆ ನಿಗಧಿತ ಠೇವಣಿಯ ಖಾತೆಯು ಸ್ಥಗಿತಗೊಳ್ಳುವುದಕ್ಕೆ ಕಾರಣವಾಗುತ್ತದೆ. ಇಂತಹ ಸಂದರ್ಭದಲ್ಲಿ ಒಂದು ನಿಗಧಿತ ಠೇವಣಿಯ ಬದಲಾಗಿ ಪಡೆದಂತಹ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಕೂಡ ಸ್ಥಗಿತಗೊಳ್ಳತಕ್ಕದ್ದು ಮತ್ತು ಅಂತಹ ನಿಗಧಿತ ಠೇವಣಿಗಳ ಮೇಲಿರುವ ಋಣಭಾರವೂ ರದ್ದಾಗಿ ಹೋಗುತ್ತದೆ. ಆದಾಗ್ಯೂ, ಈ ದಸ್ತಾವೇಜಿನಲ್ಲಿ ಅಥವಾ ಬೇರಾವುದೇ ದಸ್ತಾವೇಜಿನಲ್ಲಿ ಅದೇನೇ ಹೇಳಿದ್ದರೂ, ಇಂತಹ ಸಂದರ್ಭದಲ್ಲಿ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡಿಗೆ ಸಂಬಂಧಪಟ್ಟ ಬಾಕಿ ಮೊತ್ತದ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಇಂತಹ ನಿಗಧಿತ ಠೇವಣಿಗಳನ್ನು ಅದು ಗಳಿಸಿದ ಬಡ್ಡಿಯ ಜೊತೆಗೆ ಸ್ಥಗಿತಗೊಳಿಸುವ ಅಧಿಕಾರವನ್ನು ಬ್ಯಾಂಕು ಹೊಂದಿರತಕ್ಕದ್ದು. ಈ ಬಾಕಿ ಮೊತ್ತದ ಹೊಂದಾಣಿಕೆ ನಂತರ ಏನಾದರೂ ಹಣ ಮಿಕ್ಕಿದರೆ, ಆ ಮೊತ್ತ ನಿಮಗೆ ಸಂದಾಯವಾಗತಕ್ಕದ್ದು.

22.14. ಭಂಕಿನ ಸಂಪೂರ್ಣ ವಿವೇಚನೆಗೆ ಒಳಪಟ್ಟು ಕಾರ್ಡ್ ಧಾರಕರು ತಮ್ಮ ನಿಗಧಿತ ಠೇವಣಿಗೆ ಒನ್ ಕಾರ್ಡ್ ಆಪ್ ಮೂಲಕ ಹೆಚ್ಚುವರಿ ಹಣವನ್ನು ಹಾಕಬಹುದಾಗಿದೆ. ಈ ತರಹ ಒನ್ ಕಾರ್ಡ್ ಆಪ್ ಮುಖಾಂತರ ತಮ್ಮ ನಿಗಧಿತ ಠೇವಣಿಗೆ ಕಾರ್ಡ್ ಧಾರಕರು 09 ಬಾರಿ ಹೆಚ್ಚುವರಿ ಹಣವನ್ನು ಸಂದಾಯಮಾಡಬಹುದಾಗಿದೆ.

22.15. ರೂ.50,000 ಅಥವಾ ಕಾಲಕಾಲಕ್ಕೆ ನಿಶ್ಚಯಿಸಲ್ಪಟ್ಟ ಸಂಚಿತ ನಿಗಧಿತ ಠೇವಣಿಯ ಮೊತ್ತಕ್ಕೆ ಕಾರ್ಡ್ ಧಾರಕರಿಗೆ ಒಂದು ಲೋಹದ ಕಾರ್ಡ್ ಪ್ರದಾನ ಮಾಡಲಾಗುವುದು.

22.16 ಲೋಹದ ಕಾರ್ಡಿಗೆ ನಿಮ್ಮನ್ನು ಉನ್ನತಿಕರಿಸುವ ಮತ್ತು ಅದನ್ನು ನಿಮಗೆ ರವಾನೆ ಮಾಡುವ ಮಧ್ಯದಲ್ಲಿ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಸ್ಥಗಿತಗೊಳಿಸಲಾಗುತ್ತದೆ ಮತ್ತು ನಿಮಗೆ ಒಂದು ಕಾಲ್ಪನಿಕ ಕಾರ್ಡು ನಿಮ್ಮ ಆಪ್ ಮುಖಾಂತರ ನಿಮಗೆ ದೊರೆಯುತ್ತದೆ.

22.17. ಕಾರ್ಡ್ ದಾರಕನು ತನ್ನ ನಿಗಧಿತ ಠೇವಣಿಗೆ ಯಾವುದೇ ಹೆಚ್ಚುವರಿ ಮೊತ್ತವನ್ನು ಹಾಕಬಹುದು ಆದರೆ ಇದು ಆಗಿನ ಕಾನೂನಿನ ಮೇಲೆ ಮತ್ತು ಬ್ಯಾಂಕಿನ ವಿವೇಚನ ಮೇಲೆ ಅವಲಂಬಿಸಿರುತ್ತದೆ.

22.18. ಈ ನಿಮ್ಮ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಒಂದು ಭದ್ರತೆರಹಿತವಾದ ಕಾರ್ಡ್ ಎಂದು ಬ್ಯಾಂಕು ಸಿ ಆಯ್ ಸಿ ಗಳಿಗೆ ತಿಳಿಸತಕ್ಕದ್ದು.

**23 ನಿಯಮ ಮತ್ತು ಷರತ್ತುಗಳು**

23.1 ಬ್ಯಾಂಕಿನ www.getonecard.app & www.sbmbank.co.in. ಎನ್ನುವುದರ ಮೇಲೆ ಈ ನಿಯಮ ಮತ್ತು ಷರತ್ತುಗಳ ವಿದ್ಯುನ್ಮಾನ ಪ್ರತಿ, ಎಮ್ ಆಯ್ ಟಿ ಸಿ, ಸಮಂಜಸವಾದ ಕ್ರೆಡಿಟ್ ಕಾರ್ಡ್ ಮಾರ್ಗದರ್ಶಿಗಳು ಮತ್ತು ಮೇಲಿಂದ ಮೇಲೆ ಕೇಳಲಾಗುವ ಪ್ರಶ್ನೋತ್ತರಗಳು ಉಪಲಬ್ಧವಿರುತ್ತವೆ. ಬ್ಯಾಂಕಿಗೆ ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಧಾರಕನಿಗೆ ಸಿಗುವ ಸೌಲಭ್ಯಗಳ ನಿಯಮ ಮತ್ತು ಷರತ್ತುಗಳ ಜೊತೆಗೆ ಈಗ ಇರುವ ಶೇಷ ಮೊತ್ತದಲ್ಲಿ ಬದಲಾವಣೆಯನ್ನು ತರಲು, ವಿಧಿಸಲಾಗುವ ಬಡ್ಡಿಯ ದರದಲ್ಲಿ, ಅದನ್ನು ಗಣಿಸುವ ರೀತಿಯಲ್ಲಿ ಬದಲಾವಣೆಗಳನ್ನು ಮಾಡಲು ಯಾವುದೇ ಬದಲಾವಣೆಗಳನ್ನು ಮಾಡಲು ಸಂಪೂರ್ಣ ಅಧಿಕಾರ ಇರತಕ್ಕದ್ದು.

23.2. ನೀವು ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ಮೇಲಿನ ಎಲ್ಲ ಬಾಕಿ ಮೊತ್ತಗಳನ್ನೂ ಸಂಪೂರ್ಣವಾಗಿ ಮರುಪಾವತಿ ಮಾಡುವವರೆಗೂ, ಈ ಪರಿಷ್ಕರಿತ ನಿಮಾನುಸಾರ ಆದ ಎಲ್ಲ ಚಾರ್ಜ್ ಗಳಿಗೆ ಮತ್ತು ಇತರ ಋಣಗಳಿಗೆ ಬಾಧ್ಯರಾಗಿರುತ್ತೀರಿ. ಈ ತಿದ್ದುಪಡಿಗೊಂಡ ನಿಯಮಗಳನ್ನು www.sbmbank.co.in or www.getonecard.app ಮೇಲೆ ಹಾಕುವುದರ ಮೂಲಕ ಅಥವಾ ಯಾವ ಮಾರ್ಗ ಸರಿಯೆನಿಸುತ್ತದೆಯೋ ಆ ಮಾರ್ಗದಿಂದ ನಿಮಗೆ ಬ್ಯಾಂಕು ತಿಳಿಸಬಹುದು.

23.3 ವೆಬ್ ಸಾಯಿಟ್ ಮೇಲೆ ಹಾಕಲಾಗುವ ಕಾಲಕಾಲಕ್ಕೆ ತಿದ್ದುಪಡಿಗೊಳ್ಳುವ ನಿಯಮಾವಳಿಗಳನ್ನು ಪರಿಶೀಲಿಸಲು ನೀವು ಜವಾಬ್ದಾರರಾಗಿರತಕ್ಕದ್ದು ಮತ್ತು ಈ ಎಸ್ ಬಿ ಎಮ್ ಒನ್ ಸಂಯುಕ್ತ ಬ್ರಾಂಡೆಡ್ ಕ್ರೆಡಿಟ್ ಕಾರ್ಡ್ ನ್ನು ಉಪಯೋಗಿಸುತ್ತ ಹೋಗುವುದರಿಂದ ಆ ತಿದ್ದುಪಡಿಗೊಂಡ ನಿಯಮಾವಳಿಗಳನ್ನು ಒಪ್ಪಿಕೊಂಡಿದ್ದೀರಿ ಎಂದೇ ಭಾವಿಸಲು ಬಾಧ್ಯರಾಗಿರತಕ್ಕದ್ದು.

23.4. ಯಾವುದೇ ಒಂದು ನಿಯಮ ಬದಲಿಯಾದರೇ, ಅದು ಜಾರಿಗೆ ಬರುವ ಒಂದು ತಿಂಗಳ ಪೂರ್ವದಲ್ಲಿ ಅದನ್ನು ಮೇಲಿನ ಮಾರ್ಗಗಳಿಂದ ನಿಮಗೆ ತಿಳಿಯಪಡಿಸಲಾಗುವುದು. 30 ದಿನಗಳ ನೋಟೀಸ್ ಅವಧಿಯು ಮುಕ್ತಾಯವಾದ ಮೇಲೆ, ಸೂಚಿತ ಅವಧಿಯಲ್ಲಿ ಕಾರ್ಡ್ ಧಾರಕನು/ಳು ಹಿಂತೆಗೆಯದಿದ್ದರೇ, ಆ ನಿಯಮಗಳನ್ನು ಅವನು/ಳು ಒಪ್ಪಿದ್ದಾರೆ ಎಂದೇ ಭಾವಿಸಲಾಗುವುದು. ಉಪಲಬ್ಧವಿದ್ದ ಎಲ್ಲ ಮಾರ್ಗಗಳ ಮುಖಾಂತರ ನಿಯಮದಲ್ಲಾದ ಬದಲಾವಣೆಗಳನ್ನು ಕಾರ್ಡ್ ಧಾರಕನ ಗಮನಕ್ಕೆ ಅಧಿಸೂಚಿಸಲಾಗತಕ್ಕದ್ದು.

23.5. ನನ್ನ ಹೆಸರಲ್ಲಿ ಖಾತೆಯನ್ನು ತೆರೆಯಲು,ಸೇವೆ ಸೌಲಭ್ಯಗಳನ್ನು ಒದಗಿಸಲು, ಬ್ಯಾಂಕಿನ ಮೂಲಕ ಸಂಬಂಧವನ್ನು ಸ್ಥಾಪಿಸಲು, (ಸಿ ಕೆ ವಾಯ್ ಸಿ ಆರ್) ಅಂದರೆ ಕೇಂದ್ರ ಕೆ ವಾಯ್ ಸಿ ರಜಿಸ್ಟರ್ ನಿಂದ ಆನಲಾಯಿನ್ ಮೂಲಕ ನನ್ನು ಕೆ ವಾಯ್ ಸಿ ಧಾಖಲೆಗಳನ್ನು ಪಡೆದುಕೊಳ್ಳಲು/ಸೆಳೆದುಕೊಳ್ಳಲು ನಾನಿ ಈ ಮೂಲಕ ಬ್ಯಾಂಕಿಗೆ ಅಧಿಕೃತಗೊಳಿಸುತ್ತೇನೆ. ಒಂದು ವೇಳೆ (ಸಿ ಕೆ ವಾಯ್ ಸಿ ಆರ್) ಅಂದರೆ ಕೇಂದ್ರ ಕೆ ವಾಯ್ ಸಿ ಯಲ್ಲಿ ಗ್ರಾಹಕನ ವಿವರಗಳಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ, ಹೆಚ್ಚುವರಿ ಗುರುತಿನ ದಸ್ತಾವೇಜುಗಳನ್ನು ಪಡೆದುಕೊಳ್ಳಲು ನಾನು ಬ್ಯಾಂಕಿಗೆ ಅಧಿಕೃತಗೊಳಿಸುತ್ತಿದ್ದೇನೆ.

23.5.1. ಒಂದು ವೇಳೆ (ಸಿ ಕೆ ವಾಯ್ ಸಿ ಆರ್) ನಲ್ಲಿಯ ಗ್ರಾಹಕನ ವಿವರಗಳಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ.

23.5.2 ಗ್ರಾಹಕನ ಸಧ್ಯದ ವಿಳಾಸವನ್ನು ಪರಿಶೀಲಿಸುವ ಅವಶ್ಯಕತೆ ಇದೆ.

23.5.3. ಬ್ಯಾಂಕು ಗ್ರಾಹಕನ ಗುರುತು ಮತ್ತು ಪತ್ತೆಯನ್ನು ಪರಿಶೀಲಿಸುವ ಅವಶ್ಯಕತೆ ಇದೆ ಎಂದು ಪರಿಗಣಿದಸುತ್ತದೆ ಅಥವಾ ಹೆಚ್ಚಿನ ಯೋಗ್ಯ ತಪಾಸಣೆ ಕೈಗೊಳ್ಳಬೇಕು ಎಂದು ಬ್ಯಾಂಕ ತಿಳಿದುಕೊಳ್ಳುತ್ತದೆ.

ಕೇಂದ್ರೀಯ ಕೆ ವಾಯ್ ಸಿ ರಜಿಸ್ಟ್ರಿ ಯಲ್ಲಿ ಎಸ್ ಎಮ್ ಎಸ್ /ಇ ಮೇಲ್ ಮೂಲಕ ಈ ಮೇಲಿನ ದೂರವಾಣಿ/ ಇ ಮೇಲ ಸಹಾಯದಿಂದ ವಿವರಗಳನ್ನು ಪಡೆಯಲು ನಾನು ಈ ಮೂಲಕ ಅಧಿಕೃತಗೊಳಿಸುತ್ತೇನೆ.

**24. ಮನ್ನಾ/ಸಮ್ಮತಿ**

ಜಾರಿಗೊಳಿಸಲು ಆದ ವಿಳಂಬ, ಅಥವಾ ಯಾವುದೇ ಹಕ್ಕನ್ನು ಚಲಾಯಿಸಲು ಯಾವುದೇ ಚ್ಯುತಿ ಅಥವಾ ಈ ಒಪ್ಪಂದದ ಮೇರೆಗೆ ನಡೆಯುವಲ್ಲಿ ಆದ ತಪ್ಪಿಗೆ ಬ್ಯಾಂಕಿಗೆ ದೊರೆಯುವ ಪರಿಹಾರವು, ಬ್ಯಾಂಕಿನ ಯಾವುದೇ ಅಧಿಕಾರ, ಸೌಲತ್ತು ಅಥವಾ ಹಕ್ಕನ್ನು ಕುಂದಿಸತಕ್ಕದ್ದಲ್ಲ ಅಲ್ಲದೆ ಅದನ್ನು ಯಾವುದೇ ಮನ್ನಾ/ ಸಹನೆ ಎಂದೂ ತಿಳಿಯುವಂತಿಲ್ಲ. ಜೊತೆಗೆ, ಇಂತಹ ತಪ್ಪಿಗೆ ಯಾವುದೇ ಸಮ್ಮತಿ ಅಥವಾ ಇಂತಹ ಚ್ಯುಇತಿಗಳಿಗೆ ಬ್ಯಾಂಕಿನ ಕಡೆಯಿಂದಾಗುವ ಆ ಮುಂದಿನ ಯಾವುದೇ ಕೃತ್ಯ/ ಅಕೃತ್ಯವು ಬ್ಯಾಂಕಿನ ಹಕ್ಕು ಅಥವಾ ಅಧಿಕಾರದ ತ್ಯಾಜ್ಯ ವೆಂದೂ ತಿಳಿಯುವಂತಿಲ್ಲ.

**25. ಮೂರನೆ ಪಕ್ಷದವರ/ಸೇವಾದಾತರ ನಿಯುಕ್ತಿ**

25.1. ದೂರವಾಣಿಯ ಮೂಲಕ ಅಥವಾ ಇತರ ಮಾಧ್ಯಮದ ಮೂಲಕ,ಸೇವೆಯನ್ನು ಒದಗಿಸುವುದಕ್ಕೆ ಬ್ಯಾಂಕು ಯಾವುದೇ ಮೂರನೇ ಪಕ್ಷವನ್ನು ಅಥವಾ ಸೇವಾದಾತರನ್ನು ನಿಯುಕ್ತಿಗೊಳಿಸಿಕೊಳ್ಳಬಹುದು. ಶಿಫಾರಸ್ಸುಗಳ ಪರಿಶೀಲನೆ,ಕ್ರೆಡಿಟ್ ಬ್ಯೂರೋದ ಮೂಲಕ ಪರಿಶೀಲನೆ,ಸಾಲದ ಪರಿಶೀಲನೆ,ಕ್ರೆಡಿಟ್ ಕಾರ್ಡ್ ಮೇಲಿನ ಬಾಕಿ ವಸೂಲಾತಿಗಾಗಿ ಅಥವಾ ಬ್ಯಾಂಕಿನ ಬಾಕಿ ಮರೂಪಾವತಿಗೆ ಸಂಬಂಧಪಟ್ಟಂತೆ ಆಗಿನ ಕಾನೂನು ಅನುಮತಿಸುವಂತೆ ಬ್ಯಾಂಕು ಯಾರನ್ನೂ ನಿಯುಕ್ತಿಗೊಳಿಸಿಕೊಳ್ಳಬಹುದು,. ಬ್ಯಾಂಕಿಗೆ ಈ ಬಾಕಿ ಹಣದ ವಸೂಲಾತಿಗೆ ತಗಲುವ ವೆಚ್ಚವನ್ನೂ ಸೇರಿದಂತೆ , ಇತರ ಸಂಗ್ರಹಕ್ಕಾಗಿ ನಿಯುಕ್ತಿಗೊಳಿಸಿಕೊಂಡ ಮೂರನೇ ಪಕ್ಷಕ್ಕೆ/ಸೇವಾದಾತರಿಗೆ ಸಂದಾಯ ಮಾಡಿದ ಎಲ್ಲ ಹಣವನ್ನು ನಿಮ್ಮ ಖರ್ಚಿನಲ್ಲಿ ಮತ್ತು ಜವಾಬ್ದಾರಿಯ ಮೇಲೆಯೇ ನಡೆಯುವುದು.

25.2. ಬಾಕಿ ಹಣದ ಸಂಗ್ರಹಕ್ಕೆ ಸಂಬಂಧಿಸಿದಂತೆ ಎಲ್ಲ ಖರ್ಚುಗಳಿಗೆ, ಕಾನೂನೀಯ ಖರ್ಚುಗಳಿಗೆ, ಅದರ ಬಡ್ಡಿ ಸಮೇತ, ಅಥವಾ ಎಲ್ಲಿ ಏಜೆಂಟರುಗಳ ಅಥವಾ ಕಾನೂನಿನ ಸಂಪನ್ಮೂಲ ವ್ಯಕ್ತಿಯ ಸಹಾಯ ಪಡೆಯುವ ಪರಿಸ್ಥಿತಿ ಬರುತ್ತದೆಯೋ, ಆ ಎಲ್ಲ ಖರ್ಚುಗಳನ್ನು ಭರಿಸಲು ನೀವು ಬಾಧ್ಯರಾಗಿರತಕ್ಕದ್ದು.